ಪ್ರಚಾರ ಪುಸ್ತಕಮಾಲೆ 104

ತುಲಸೀದಾಸ

ಡಾ|| ಹಿರಣ್ಮಯ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೧೧೪

ತುಲಸೀದಾಸ

ಡಾ|| ಹಿರಣ್ಮಯಿ, ಎಂ.ಎ., ಪಿಎಚ್.ಡಿ.

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

೧೯೮೧

ಮೊದಲನೆಯ ಮುದ್ರಣ: ೧೯೬೨
ಎರಡನೆಯ ಮುದ್ರಣ: ೧೯೮೧
೧೦,೦೦೦ ಪ್ರತಿಗಳು

ಬೆಲೆ: ೨೫ ಪೈಸೆ

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮೈಸೂರು–೫೭೦ ೦೧೨

ಮುದ್ರಕರು
ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ, ಮೈಸೂರು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ "ಸೆನೆಟ್" ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸಿದ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು

ನೆರವಾಗುತ್ತವೆ; ವಿಶ್ವವಿದ್ಯಾನಿಲಯುದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋ ದಯುವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯುನ್ನು ಹೋಗಲಾಡಿಸಿ, ವಿಶಾಲಭಾವನೆ ಮೂಡು ವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯುಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯುವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯುಲ್ಲಿ ಈಗಾಗಲೆ ಭೌತ ವಿಜ್ಞಾನ, ರಸಾಯುನ ವಿಜ್ಞಾನ. ಪ್ರಾಣಿ ವಿಜ್ಞಾನ. ವೈದ್ಯ ವಿಜ್ಞಾನ. ಗಣಿತ ವಿಜ್ಞಾನ. ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯುಗಳನ್ನು ಕುರಿತ ನೂರಮೂರು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. ಈ ಮಾಲೆಯುಲ್ಲಿ ಈಗ ಹೊರಬೀಳು ತ್ತಿರುವ ಡಾ॥ ಹಿರಣ್ಮಯು ಅವರ 'ತುಲಸೀದಾಸ' ಹೆಚ್ಚು ಜನಪ್ರಿಯುವಾಗಲೆಂದು ನಾನು ಆಶಿಸುತ್ತೇನೆ.

ನಾರಾಯುಣರಾವ್ ಅಪ್ಪೂರಾವ್ ನಿಕಂ
ವೈಸ್-ಛಾನ್ಸಲರ್

ಬಿನ್ನಹ

ಪ್ರಸಾರಾಂಗದ ಆಶ್ರಯದಲ್ಲಿ ಕಳೆದ ವರ್ಷ ಕೋಲಾರ ಜಿಲ್ಲೆಯ ದೇವರಾಯ ಸಮುದ್ರದಲ್ಲಿ ನಾನು ಮಾಡಿದ ಭಾಷಣದ ಆಧಾರದ ಮೇಲೆ ಈ ಪುಸ್ತಕವನ್ನು ಸಿದ್ಧಗೊಳಿಸಲಾಗಿದೆ.

ಶ್ರೀ ಗೋಸ್ವಾಮಿ ತುಲಸೀದಾಸರು ಹಿಂದೀ ಭಾಷೆಯ ಒಬ್ಬ ಮಹಾಕವಿಗಳು ಮಾತ್ರವಲ್ಲದೆ ಭಾರತದೇಶದ ಒಬ್ಬ ಸುಪ್ರಸಿದ್ಧ ಮಹಾತ್ಮರು ಮತ್ತು ಭಕ್ತಶಿರೋಮಣಿಗಳು. ತುಲಸೀದಾಸರ ಜೀವನ ವೃತ್ತಾಂತ, ಅವರು ಸಾಧಿಸಿದ ಭಕ್ತಿಪಂಥದ ವೈಶಿಷ್ಟ್ಯ, ಅವರ ಕಾವ್ಯಕೃತಿಗಳ ಸೊಗಸು ಮತ್ತು ಅವರ ಕಾವ್ಯಗಳಲ್ಲಿ ಚಿತ್ರಿತವಾಗಿರುವ ಉದಾತ್ತ ಜೀವನಾದರ್ಶಗಳನ್ನು ಹಿಂದಿಯನ್ನು ಅರಿಯದ ಕನ್ನಡಿಗರಿಗೆ ಸಂಕ್ಷೇಪವಾಗಿ ತಿಳಿಸುವುದೇ ಈ ಪುಟ್ಟ ಪುಸ್ತಕದ ಉದ್ದೇಶ. ಕವಿ–ಕಾವ್ಯದ ವಿಮರ್ಶೆ ಮಾಡುವಾಗ ಸಾಧ್ಯವಾದಮಟ್ಟಿಗೆ ಕವಿಯ ಉಕ್ತಿಗಳನ್ನೇ ಮೂಲದಲ್ಲಿ ಉದಾಹರಿಸಿ ವಿಷಯಗಳನ್ನು ಸ್ಪಷ್ಟಪಡಿಸಲು ಪ್ರಯತ್ನಪಟ್ಟಿದೆ. ಈ ಸಂಕ್ಷಿಪ್ತ ಪರಿಚಯವನ್ನು ಓದಿದವರ ಮನಸ್ಸಿನಲ್ಲಿ ತುಲಸೀದಾಸರ ಉದ್ಗ್ರಂಥಗಳನ್ನು ತಾವೇ ಪಠಿಸಿ, ಆನಂದಪಡಬೇಕೆಂಬ ಜಿಜ್ಞಾಸೆ–ಪ್ರೇರಣೆಗಳು ಸ್ವಲ್ಪಮಟ್ಟಿಗಾದರೂ ಉಂಟಾದರೆ ಈ ನನ್ನ ಶ್ರಮ ಸಫಲವಾಯಿತೆಂದು ಭಾವಿಸುತ್ತೇವೆ.

ಈ ಪುಸ್ತಕವನ್ನು ಪ್ರಕಟಿಸಿ ನನಗೆ ಪ್ರೋತ್ಸಾಹವಿತ್ತ ವಿಶ್ವವಿದ್ಯಾನಿಲಯದ 'ಪ್ರಸಾರಾಂಗ'ದ ಅಧಿಕಾರವರ್ಗದವರಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ಈ ಪುಸ್ತಕದ ಬರವಣಿಗೆಯ ಕಾರ್ಯದಲ್ಲಿ ನನಗೆ ಸಲಹೆ, ಸಹಕಾರ

ಗಳನ್ನಿತ್ತು ನೆರವಾದ ನನ್ನ ಗೆಳೆಯರಾದ ಶ್ರೀ ಉ. ಕಾ. ಸುಬ್ಬರಾಯಾಚಾರ್‌ರವರಿಗೂ, ಶ್ರೀ ಎಂ. ವಿ. ಚಿತ್ರಲಿಂಗಯ್ಯನವರಿಗೂ ನಾನು ಚಿರಋಣಿಯಾಗಿದ್ದೇನೆ.

ಶ್ರೀ ಕೃಷ್ಣಜನ್ಮಾಷ್ಟಮಿ
ಮೈಸೂರು

ಹಿರಣ್ಮಯ

ವಿಷಯಸೂಚಿಕೆ

		ಪುಟ
ಪೀಠಿಕೆ	...	೧
ಜೀವನ ವೃತ್ತಾಂತ	...	೪
ತುಲಸೀದಾಸರ ಕೃತಿಗಳು	...	೮
ಕಾವ್ಯ ಸೌಂದರ್ಯ	...	೧೯
ಪಾತ್ರ ನಿರೂಪಣೆ	...	೨೪
ಭಾವಾಭಿವ್ಯಂಜನೆ	...	೪೪
ಅಲಂಕಾರ ವಿನ್ಯಾಸ	...	೫೭
ಭಾಷೆ–ಶೈಲಿ	...	೬೦
ತುಲಸೀದಾಸರ ಭಕ್ತಿಮಾರ್ಗ	...	೬೨
ತುಲಸೀದಾಸರ ಸಮನ್ವಯ ದೃಷ್ಟಿ	...	೭೧
ಉಪಸಂಹಾರ	...	೭೬

ಪೀಠಿಕೆ

ಭಾರತದೇಶದಲ್ಲಿ ಹೆಚ್ಚು ಜನ ಪಠಿಸಿ ಪಾರಾಯಣಮಾಡಿ ಆನಂದಪಡುವ ಗ್ರಂಥ ಭಗವದ್ಗೀತೆಯೆಂದು ಪ್ರತೀತಿ. ಭಗವದ್ ಗೀತೆಯಂತೆಯೇ ಜನಪ್ರಿಯವಾದ ಇನ್ನೊಂದು ಪುಸ್ತಕ ತುಲಸೀ ರಾಮಾಯಣ. ಗೋಸ್ವಾಮಿ ತುಲಸೀದಾಸರು ಇದನ್ನು ಬರೆ ದಿರುವುದರಿಂದ ಇದರ ಹೆಸರು ತುಲಸೀ ರಾಮಾಯಣ ವೆಂದಾಯಿತು. ಇದರ ನಿಜವಾದ ಹೆಸರು "ರಾಮಚರಿತ ಮಾನಸ". ಇಷ್ಟು ಪ್ರಸಿದ್ಧವಾದ ರಾಮಚರಿತಮಾನಸವನ್ನು ರಚಿಸಿದ ಭಕ್ತಶಿರೋಮಣಿ ತುಲಸೀದಾಸರ ವಿಷಯ ಈ ಪುಟ್ಟ ಪ್ರಬಂಧದಲ್ಲಿ ನಿರೂಪಿತವಾಗಿದೆ.

ಹಿಂದೀ ಸಾಹಿತ್ಯವು ಕಳೆದ ಹತ್ತು ಶತಮಾನಗಳಿಂದ ಇತೋಪ್ಯತಿಶಯವಾಗಿ ಬೆಳೆದಿದೆ. ಹಿಂದೀ ಸಾಹಿತ್ಯ ಚರಿತ್ರೆ ಯಲ್ಲಿ ಸ್ವರ್ಣಯುಗವಾದ ಭಕ್ತಿಕಾಲದ ಮಹತ್ವ ಹೆಚ್ಚು. ಈ ಯುಗದ ಸಾಹಿತ್ಯಸೃಷ್ಟಿಗೆ ಭಕ್ತಿಭಾವವೇ ಪ್ರಚೋದಕ. ಪ್ರಮಾಣ, ಹಿರಿಮೆ ಮತ್ತು ವೈವಿಧ್ಯತೆಗಳ ದೃಷ್ಟಿಯಿಂದ ಭಕ್ತಿಕಾಲದ ಹಿಂದೀ ಸಾಹಿತ್ಯ ಸರ್ವಾಂಗಸುಂದರವಾಗಿ ಹೆಚ್ಚು ಜನಪ್ರಿಯವಾಗಿದೆ. ಈ ಯುಗದ ಭಕ್ತಕವಿಗಳಲ್ಲಿ ಕಬೀರದಾಸ, ಸೂರದಾಸ ಮತ್ತು ತುಲಸೀದಾಸರು ಪ್ರಮುಖರು. ಈ ಮೂವರಲ್ಲಿ ಗೋಸ್ವಾಮಿ ತುಲಸೀದಾಸರು ಸರ್ವಶ್ರೇಷ್ಠರೆಂದರೆ ಅತಿಶಯೋಕ್ತಿಯಾಗ ಲಾರದು.

ಹಿಂದೀ ಸಾಹಿತ್ಯದಲ್ಲಿ ಭಕ್ತಿಕಾಲ ಸುಮಾರು ಕ್ರಿ.ಶ. ೧೩೧೮ ರಿಂದ ಕ್ರಿ.ಶ. ೧೬೪೩ರ ವರೆಗೆ ವಿಸ್ತರಿಸಿದೆ. ಈ ಅವಧಿಯಲ್ಲಿ ಹಿಂದೀ ಭಾಷೆಯನ್ನಾಡುವ ಪ್ರದೇಶದ ರಾಜನೈತಿಕ, ಧಾರ್ಮಿಕ

ಮತ್ತು ಸಾಮಾಜಿಕ ಸ್ಥಿತಿಗಳು ಶೋಚನೀಯವಾಗಿದ್ದವು. ಪ್ರಬಲ ವಾದ ಮುಸಲ್ಮಾನ ಸಾಮ್ರಾಜ್ಯ ಸ್ಥಾಪಿತವಾಗಿ ಹಿಂದೂ ರಾಜ ಶಕ್ತಿ ಮೃತಪ್ರಾಯವಾಗಿತ್ತು. ಕತ್ತಿಯ ಪ್ರತಾಪದಿಂದ ಮುಸಲ್ಮಾನ ಧರ್ಮದ ಪ್ರಚಾರ ಮತ್ತು ಪ್ರಭಾವ ಹೆಚ್ಚಾಗಿ ಹಿಂದೂ ಧರ್ಮಾವಲಂಬಿಗಳಲ್ಲಿ ನಿರಾಶೆ ಮೂಡಿತ್ತು. ಇದಲ್ಲದೆ ಹಿಂದೂಗಳಲ್ಲಿ ವರ್ಣಭೇದ, ಜಾತಿಭೇದ, ಅಂಧ ವಿಶ್ವಾಸ, ಅನೀತಿ ಮತ್ತು ಅನಾಚಾರಗಳು ತಾಂಡವವಾಡುತ್ತಿದ್ದುವು. ದೇವರು, ಮತ, ಧರ್ಮ ಮತ್ತು ಶಾಸ್ತ್ರಗಳ ಮರೆಯಲ್ಲಿ ಕಪಟ, ಶೋಷಣೆ, ದುರಾಚಾರಗಳು ಸಮಾಜದಲ್ಲಿ ತಲೆಯೆತ್ತಿ. ಬಡವರು ಮತ್ತು ಹೀನಜಾತಿಯವರೆನ್ನಿಸಿಕೊಳ್ಳುತ್ತಿದ್ದ ಜನರು ಕಂಗೆಟ್ಟು ಪಥಭ್ರಷ್ಟ ರಾಗಿದ್ದರು. ಇಂತಹ ವಿಷಮಪರಿಸ್ಥಿತಿಯಲ್ಲಿ ದಕ್ಷಿಣ ಭಾರತದ ಕಡೆಯಿಂದ ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾ ಚಾರ್ಯರು ಮತ್ತು ಶ್ರೀ ವಲ್ಲಭಾಚಾರ್ಯರೇ ಮೊದಲಾದ ಪ್ರಸಿದ್ಧ ಆಚಾರ್ಯರುಗಳು ಉಪದೇಶಿಸಿದ ಭಕ್ತಿಭಾವದ ಒಂದು ದೊಡ್ಡ ಪ್ರವಾಹವು ಉತ್ತರ ಭಾರತದ ಕಡೆಗೆ ಹರಿದು ಜನ ಮಾನಸವನ್ನು ಶೀತಲಗೊಳಿಸಿತು. ಇದರ ಪರಿಣಾಮವಾಗಿ ಜನಜೀವನದಲ್ಲಿ ನವೀನ ಚೈತನ್ಯ ಮತ್ತು ಉತ್ಸಾಹದ ಸಂಚಾರ ವಾಯಿತು. ಈ ಸಮಯದಲ್ಲಿ ಭಕ್ತಿಭಾವವು ನಾನಾಮುಖವಾಗಿ ಬೆಳೆಯಿತು. ಒಂದೆಡೆ ರಾಮ, ಕೃಷ್ಣ ಮೊದಲಾದ ಭಗವಂತನ ಅವತಾರಗಳ ಆಶ್ರಯದಲ್ಲಿ ಸಗುಣ ಭಕ್ತಿಸಾಧನೆಯ ಪಂಥಗಳು ರೂಪುಗೊಂಡವು. ಇನ್ನೊಂದೆಡೆ ನಿರ್ಗುಣ ಬ್ರಹ್ಮದ ಸಾಕ್ಷಾತ್ಕಾರ ಕ್ಕಾಗಿ ಸಾಧಕರ ತಂಡವು ಅನುವಾಯಿತು. ಶ್ರೀ ರಾಮಾನುಜಾ ಚಾರ್ಯರ ಹದಿನಾಲ್ಕನೆಯ ಶಿಷ್ಯಪರಂಪರೆಯಲ್ಲಿ ಸ್ವಾಮಿ ರಾಮಾ ನಂದರು ಕಾಶೀಕ್ಷೇತ್ರದಲ್ಲಿ ನೆಲೆಸಿ ಉತ್ತರಾಪಥದಲ್ಲಿ ರಾಮನಾಮ

ಹುಟ್ಟಿ ರಾಮೋಪಾಸನೆಯ ಸಂದೇಶವನ್ನು ಹರಡಿದರು. ಶ್ರೀ ರಾಮಾನಂದರ ಶಿಷ್ಯವರ್ಗದಲ್ಲಿ ಎರಡು ಗುಂಪುಗಳು ತಲೆದೋರಿದವು. ಮೊದಲನೆಯ ಪಂಗಡಕ್ಕೆ ಸೇರಿದ ಭಕ್ತರು ರಾಮನಾಮಕ್ಕೆ ಪ್ರಾಮುಖ್ಯತೆ ಕೊಟ್ಟರು. ಆದರೆ ಈ ರಾಮನಾಮ ನಿರ್ಗುಣ, ನಿರಾಕಾರ, ನಿರಾಮಯ ಪರಬ್ರಹ್ಮನ ಪ್ರತೀಕವಾಯಿತು ಅವರಿಗೆ. ಅವತಾರಪುರುಷ ರಾಮನನ್ನು ಪರಮಾತ್ಮನೆಂದು ಅವರು ಒಪ್ಪಲಿಲ್ಲ. ಶಾಸ್ತ್ರ, ಪುರಾಣ, ಮೂರ್ತಿಪೂಜೆ, ತೀರ್ಥಸ್ನಾನ ಇವೆಲ್ಲವನ್ನು ಖಂಡಿಸಿ ಸರ್ವಾಂತರ್ಯಾಮಿಯಾದ ಪರಮಾತ್ಮನ ಧ್ಯಾನದಲ್ಲಿ ಅವರು ತಲ್ಲೀನರಾದರು. ಭಗವಂತನನ್ನು ಬಾಹ್ಯ ಜಗತ್ತಿನಲ್ಲಿ ಹುಡುಕುವುದನ್ನು ಬಿಟ್ಟು ಅಂತರ್ಮುಖಿಗಳಾಗಿ ಹೃದಯಮಂದಿರದಲ್ಲಿಯೇ ಅವನ ಸಾಕ್ಷಾತ್ಕಾರ ಸಾಧ್ಯವೆಂದು ಅವರು ಬೋಧಿಸಿದರು. ಇನ್ನೊಂದು ಗುಂಪಿಗೆ ಸೇರಿದ ಭಕ್ತರು ಪರಮಾತ್ಮನ ನಿರ್ಗುಣ, ನಿರಾಕಾರ, ತತ್ತ್ವವನ್ನು ಒಪ್ಪಿದರೂ ಈ ಜಗತ್ತಿನಲ್ಲಿ ನಾನಾರೀತಿಯಲ್ಲಿ ಕಾಣಬರುವ ಸಗುಣ ಬ್ರಹ್ಮನ ಆರಾಧನೆಯೇ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸರಳಮಾರ್ಗವೆಂದು ವಾದಿಸಿದರು. ಭಗವಂತನು ಅವತಾರಗಳ ಮೂಲಕ ನಡೆಸುವ ಲೀಲೆಗಳನ್ನು ಗಾನ ಮಾಡುವುದರಲ್ಲಿ ಅವರು ಮಗ್ನರಾದರು. ಈ ಎರಡನೆಯ ವರ್ಗಕ್ಕೆ ಸೇರಿದ ರಾಮೋಪಾಸಕರಲ್ಲಿ ಗೋಸ್ವಾಮಿ ತುಲಸೀದಾಸರು ಅಗ್ರಗಣ್ಯರು.

ಜೀವನ ವೃತ್ತಾಂತ

ತುಲಸೀದಾಸರು ತಮ್ಮ ಕೃತಿಗಳಲ್ಲಿ ತಮ್ಮ ಜೀವನಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ವ್ಯಕ್ತಪಡಿಸಿರುವರು. ಆದರೆ ಈ ಉಲ್ಲೇಖಗಳಿಂದ ಅವರ ಸಮಗ್ರ ಜೀವನ ಚರಿತ್ರೆ ರೂಪಿತ

ವಾಗುವುದಿಲ್ಲ. ತುಲಸೀದಾಸರ ಕಾಲದಲ್ಲಿದ್ದ ಮತ್ತು ಅನಂತರದ ಕೆಲವು ಲೇಖಕರು ಅವರ ಜೀವನ ಚರಿತ್ರೆಯನ್ನು ಕುರಿತು ಚಿಕ್ಕಪುಟ್ಟ ಪುಸ್ತಕಗಳನ್ನು ಬರೆದಿರುತ್ತಾರೆ. ಅವುಗಳಲ್ಲಿ ಗೋಕುಲ ನಾಥರ 'ದೋ ಸೌ ಬಾವನ್ ವೈಷ್ಣವನ ಕೀ ವಾರ್ತಾ'. ನಾಭಾದಾಸರ 'ಭಕ್ತಮಾಲ'. ಬಾಬಾ ವೇಣೀಮಾಧವದಾಸರ 'ಗೋಸಾಯಿಂ ಚರಿತ'. ಬಾಬಾ ರಘುವರದಾಸರ 'ತುಲಸೀ ಚರಿತ' ಮತ್ತು ಪ್ರಿಯಾದಾಸರ 'ಭಕ್ತಿಮಾಲಕೀ ಟೀಕಾ' ಇತ್ಯಾದಿ ಪುಸ್ತಕಗಳು ಮುಖ್ಯವಾಗಿವೆ. ಇವುಗಳಲ್ಲಿ ವರ್ಣಿತವಾದ ತುಲಸೀ ದಾಸರ ಚರಿತ್ರೆ ಒಂದನ್ನೊಂದು ಹೋಲುವುದಿಲ್ಲ ಮತ್ತು ಇವು ಗಳಲ್ಲಿ ಯಾವುದು ಪ್ರಾಮಾಣಿಕವೆಂದು ಹೇಳುವುದು ಕಷ್ಟಸಾಧ್ಯ. ಆಧುನಿಕ ವಿದ್ವಾಂಸರೂ ಸಂಶೋಧಕರೂ ಈವರೆಗೆ ಉಪಲಬ್ಧ ವಾಗಿರುವ ವಿಷಯಗಳನ್ನು ಮಥಿಸಿ ತಮ್ಮ ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಿದ್ದಾರೆ. ಆದರೂ ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಮಾತ್ರ ಹಾಗೆಯೇ ಉಳಿದಿವೆ.

ತುಲಸೀದಾಸರು ಹುಟ್ಟಿದ್ದು ಕ್ರಿ.ಶ. ೧೪೯೭ ಎಂದು ಕೆಲವರ ಮತ. ಇನ್ನು ಕೆಲವರ ವಾದ ಕ್ರಿ.ಶ. ೧೫೩೨ರಲ್ಲಿ ಎಂದು. ಅವರು ಇಹಲೋಕವನ್ನು ತ್ಯಜಿಸಿದ ವಿಚಾರದಲ್ಲಿ ಈ ಮುಂದೆ ಬರುವ ಪದ್ಯ ಪ್ರಸಿದ್ಧವಾಗಿದೆ.

> "ಸಂವತ್ ಸೋಲಹ ಸೌ ಅಸೀ, ಅಸೀ ಗಂಗಕೇ ತೀರ.
> ಶ್ರಾವಣ ಶುಕ್ಲಾ ಸಪ್ತಮೀ, ತುಲಸೀ ತಜ್ಯೊ ಶರೀರ."

ಅಂದರೆ, ಕ್ರಿ. ಶ. ೧೬೨೩. ಶ್ರಾವಣ ಶುಕ್ಲ ಸಪ್ತಮಿಯ ದಿನ ಗಂಗಾನದೀ ತೀರದಲ್ಲಿರುವ ಅಸ್ಸೀಘಾಟಿನಲ್ಲಿ ತುಲಸೀದಾಸರು ಶರೀರ ತ್ಯಾಗಮಾಡಿದರು. ತುಲಸೀದಾಸರ ಕಾಲದಲ್ಲಿರುವ

ವಿಚಾರದಲ್ಲಿ ಇದೇ ಸರಿಯೆಂದು ಹೇಳಲು ಸದ್ಯಕ್ಕೆ ಸಾಧ್ಯವಿಲ್ಲ. ಅವರು ಬಹುಕಾಲ ಬದುಕಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅವರು ಹುಟ್ಟಿದ ಊರಿನ ವಿಷಯದಲ್ಲಿಯೂ ಒಮ್ಮತವಿಲ್ಲ. ಕೆಲವರು ಉತ್ತರ ಪ್ರದೇಶದ ಬಾಂದಾ ಜಿಲ್ಲೆಯ 'ರಾಜಾಪುರ' ವೆಂದೂ, ಇನ್ನು ಕೆಲವರು ಏಟಾ ಜಿಲ್ಲೆಯ 'ಸೋರೋಂ' ಅಥವಾ 'ಸೂಕರಕ್ಷೇತ್ರ' ವೆಂದೂ ವಾದಿಸುವರು. ಉತ್ತರ ಪ್ರದೇಶದ ಸರಕಾರದವರು ಈಗಾಗಲೇ ರಾಜಾಪುರದಲ್ಲಿ ತುಲಸೀ ದಾಸರ ಸ್ಮಾರಕಭವನದ ನಿರ್ಮಾಣಕಾರ್ಯವನ್ನು ಆರಂಭಿಸಿರುತ್ತಾರೆ.

ತುಲಸೀದಾಸರು ಸರವರಿಯಾ ಅಥವಾ ಸರಯೂಪಾರೀಣ ಬ್ರಾಹ್ಮಣ ಪಂಗಡಕ್ಕೆ ಸೇರಿದವರು. ಅವರ ತಂದೆ ಆತ್ಮಾರಾಮ ಶುಕ್ಲ ಅಥವಾ ಆತ್ಮಾರಾಮ ದುಬೆ. ಅವರ ತಾಯಿ ಹುಲಸಿ. ತುಲಸೀದಾಸರ ಜನ್ಮದ ವಿಷಯದಲ್ಲಿ ಒಂದು ಪ್ರತೀತಿ ಹೀಗಿದೆ: ಅವರು ಅಭುಕ್ತ ಮೂಲಾನಕ್ಷತ್ರದಲ್ಲಿ ಹುಟ್ಟಿದರು. ಹುಟ್ಟುವಾಗಲೇ ಅವರ ಬಾಯಿಯಲ್ಲಿ ಐದು ವರ್ಷದ ಮಗುವಿಗಿರುವಂತೆ ಹಲ್ಲುಗಳೂ ಮತ್ತು ತಲೆಯಲ್ಲಿ ಕೂದಲುಗಳೂ ಇದ್ದುವು. ಹುಟ್ಟಿದಾಗ ಸಾಮಾನ್ಯ ಮಕ್ಕಳಂತೆ ಅಳದೆ ತುಲಸೀದಾಸರು ರಾಮನಾಮವನ್ನು ಉಚ್ಚರಿಸಿದರು. ಇದನ್ನು ಅಪಶಕುನವೆಂದು ಭಾವಿಸಿ ಅವರ ತಂದೆತಾಯಿಗಳು ತುಲಸೀದಾಸರನ್ನು ತ್ಯಜಿಸಿಬಿಟ್ಟರು. ಅನಂತರ ಆ ಮಗು ಕೆಲವು ಕಾಲ ಮುನಿಯಾ ಎಂಬ ದಾಸಿಯ ಆರೈಕೆಯಲ್ಲಿ ಬೆಳೆಯಿತು. ಆದರೆ ದುರ್ಭಾಗ್ಯದಿಂದ ಅವಳೂ ಮೃತಳಾದ್ದರಿಂದ ತುಲಸೀದಾಸರು ಅನಾಥರಾದರು. ಈ ವಿಚಾರದಲ್ಲಿ ತುಲಸೀದಾಸರ ಕೃತಿಯಲ್ಲಿ ಒಂದು ಉಲ್ಲೇಖ ಹೀಗಿದೆ:

"ಮಾತು ಪಿತಾ ಜಗ ಜಾಯ ತಜ್ಯೋ, ವಿಧಿ ಹೂ ನ ಲಿಖೀ
ಕಛು ಭಾಲ ಭಲಾಯೀ".

"ತಂದೆತಾಯಿಗಳು ಜಗತ್ತಿನಲ್ಲಿ ಹೆತ್ತು ಬಿಟ್ಟುಬಿಟ್ಟರು. ವಿಧಿಯೂ ಸಹ ಹಣೆಯಲ್ಲಿ ಏನೊಂದು ಒಳ್ಳೆಯದನ್ನು ಬರೆಯಲಿಲ್ಲ". ತುಲಸೀದಾಸರ ಮೊದಲಿನ ಹೆಸರು ರಾಮಬೋಲಾ ಎಂದು. ಮನೆ ಮನೆಗೆ ಹೋಗಿ ಭಿಕ್ಷೆಯನ್ನೆತ್ತುವಾಗ ರಾಮ ರಾಮ ಎಂದು ಹೇಳುತ್ತಿದ್ದುದರಿಂದ ಈ ಹೆಸರಾಯಿತೆಂದು ಪ್ರತೀತಿ.

ತುಲಸೀದಾಸರು ಸ್ವಲ್ಪ ದೊಡ್ಡವರಾದಮೇಲೆ ಕಾಶಿಯಲ್ಲಿ ಬಂದು ನೆಲಸಿದರು. ಅಲ್ಲಿ ಅವರು ಬಾಬಾ ನರಹರಿದಾಸರ ಆಶ್ರಯದಲ್ಲಿದ್ದುಕೊಂಡು ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸ ಮಾಡಿದರು. ಅನಂತರ ಆಗಿನ ಕಾಲದ ಪ್ರಸಿದ್ಧ ಪಂಡಿತರಾದ ಶೇಷ ಸನಾತನರ ಶಿಷ್ಯರಾಗಿ ತುಲಸೀದಾಸರು ವೇದ, ವೇದಾಂಗ. ಪುರಾಣ, ಶಾಸ್ತ್ರ, ಕಾವ್ಯಗಳನ್ನು ಓದಿ ನಿಷ್ಣಾತ ಪಂಡಿತರಾದರು. ಬಳಿಕ ಅವರು ತಮ್ಮ ಊರಿಗೆ ತೆರಳಿ ದೀನಬಂಧು ಪಾಠಕರ ಮಗಳಾದ ರತ್ನಾವಲಿ ಎಂಬ ಕನ್ಯೆಯನ್ನು ಮದುವೆಯಾದರು. ಅದೃಷ್ಟವಶಾತ್ ತುಲಸೀದಾಸರ ಗೃಹಸ್ಥಜೀವನ ಹೆಚ್ಚುಕಾಲ ನಡೆಯಲಿಲ್ಲ. ಹೆಂಡತಿಯೆಂದರೆ ಅವರಿಗೆ ಪ್ರಾಣ! ಅವರು ಗೃಹಸ್ಥಾಶ್ರಮ ತ್ಯಜಿಸಿದ ಕಥೆ ಸ್ವಾರಸ್ಯವಾಗಿದೆ. ಒಮ್ಮೆ ರತ್ನಾವಲಿಯು ತುಲಸೀದಾಸರು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ತೌರುಮನೆಗೆ ಹೊರಟುಹೋದಳು. ತುಲಸೀದಾಸರು ಹಿಂತಿರುಗಿ ಬಂದು ಪತ್ನಿಯನ್ನು ಮನೆಯಲ್ಲಿ ಕಾಣದೆ ತತ್‌ಕ್ಷಣವೇ ಹೆಂಡತಿಯ ತೌರುಮನೆಗೆ ಹೊರಟರು. ಅವರು ಅಲ್ಲಿಗೆ ಹೋದಾಗ ಮಧ್ಯರಾತ್ರಿಯಾಗಿತ್ತು. ಜಡಿಮಳೆ ಸುರಿಯುತ್ತಿತ್ತು. ಮಳೆಯಲ್ಲಿ ನೆನೆದುಕೊಂಡು ಬಂದಿರುವ ಪತಿಯನ್ನು ನೋಡಿ

ರತ್ನಾವಳಿ ನಾಚಿಕೆಯಿಂದಲೂ ಮತ್ತು ತಿರಸ್ಕಾರ ಭಾವನೆಯಿಂದಲೂ ಹೀಗೆಂದಳು:

ಲಾಜ ನ ಆವತ ಆಪಕೋ ದೌರೇ ಆಯಹು ಸಾಥ್
ಧಿಕ್ ಧಿಕ್ ಐಸೇ ಪ್ರೇಮಕೋ ಕಹಾಕಹೌಂ ಮೈ ನಾಥ್
ಅಸ್ಥಿ ಚರ್ಮಮಯ ದೇಹಮಮ ತಾಮೇ ಜೈಸೀ ಪ್ರೀತಿ
ತೈಸೀ ಜೌಂ ಶ್ರೀರಾಮ ಮಹ ಹೋತಿ ನ ತೌ ಭವಭೀತಿ ॥

"ನನ್ನ ಹಿಂದೆಯೇ ಓಡಿಬರುವುದಕ್ಕೆ ನಿಮಗೆ ನಾಚಿಕೆಯಾಗಲಿಲ್ಲವೆ? ಹೇ ನಾಥ, ನಾನೇನನ್ನಲಿ! ಇಂತಹ ಪ್ರೇಮಕ್ಕೆ ಧಿಕ್ಕಾರ. ಅಸ್ಥಿ ಚರ್ಮಗಳಿಂದ ಕೂಡಿದ ಈ ನನ್ನ ಶರೀರವನ್ನು ಪ್ರೀತಿಸುವುದಕ್ಕೆ ಬದಲಾಗಿ ನೀವು ಶ್ರೀರಾಮನನ್ನು ಪ್ರೀತಿಸಿದ್ದರೆ ಭವಭೀತಿಯಿಂದ ಪಾರಾಗುತ್ತಿದ್ದಿರಿ".

ಪತ್ನಿಯ ಈ ಮಾತುಗಳು ತುಲಸೀದಾಸರ ಮನಸ್ಸಿಗೆ ನಾಟಿದುವು. ಅವರಲ್ಲಿ ವೈರಾಗ್ಯಭಾವ ಅಂಕುರಿಸಿ ಜ್ಞಾನೋದಯವಾಯಿತು. ಆ ಕ್ಷಣವೇ ಅವರು ಅಲ್ಲಿಂದ ಕಾಶಿಗೆ ಹೊರಟುಹೋಗಿ ವಿರಕ್ತರಾದರು. ಈ ಕಥೆ ನಿಜವಿರಬಹುದು ಅಥವಾ ಇಲ್ಲದಿರಬಹುದು. ಆದರೆ ಇಂತಹ ಯಾವುದೋ ಒಂದು ಮಹತ್ತರವಾದ ಕಾರಣದಿಂದ ತುಲಸೀದಾಸರ ಜೀವನದಲ್ಲಿ ಮಾರ್ಪಾಡು ಸಂಭವಿಸಿರಬೇಕೆಂಬುದು ಖಚಿತ. ಹೀಗೆ ವಿರಕ್ತರಾದ ಮೇಲೆ ಅವರು ಕಾಶಿಯಿಂದ ಅಯೋಧ್ಯೆಗೆ ಹೋದರು. ಅಲ್ಲಿಂದ ಕೆಲವು ಕಾಲ ಪುರಿ, ಜಗನ್ನಾಥ, ರಾಮೇಶ್ವರ, ದ್ವಾರಕಾ ಮೊದಲಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಬದರಿಕಾಶ್ರಮವನ್ನು ಸೇರಿದರು. ಅನಂತರ ಕೆಲವು ಕಾಲ ಕಾಶಿಯಲ್ಲಿಯೂ ಕೆಲವು ಕಾಲ ಅಯೋಧ್ಯೆಯಲ್ಲಿಯೂ ವಾಸಿಸುತ್ತ ಭಕ್ತಿ ಮತ್ತು ಕಾವ್ಯ ಸಾಧನೆಯಲ್ಲಿ ನಿರತರಾದರು.

ತುಲಸೀದಾಸರ ಕೃತಿಗಳು

ಗೋಸ್ವಾಮಿ ತುಲಸೀದಾಸರು ಸುಮಾರು ಮೂವತ್ತೇಳು ಕಾವ್ಯಗಳನ್ನು ಬರೆದಿರುವರೆಂದು ಪ್ರತೀತಿ. ಆದರೆ ಕಾಶೀ ನಾಗರೀ ಪ್ರಚಾರಿಣೀ ಸಭೆಯವರು ಪ್ರಕಟಿಸಿರುವ ಹನ್ನೆರಡು ಕೃತಿಗಳು ಮಾತ್ರ ಪ್ರಾಮಾಣಿಕವೆಂದು ವಿದ್ವಾಂಸರ ಅಭಿಪ್ರಾಯ. ಇವುಗಳಲ್ಲಿ ರಾಮಚರಿತಮಾನಸ, ವಿನಯಪತ್ರಿಕಾ, ಕವಿತ್ತ ರಾಮಾಯಣ, ಗೀತಾವಲಿ, ದೋಹಾವಲಿ ಇವು ಐದು ದೊಡ್ಡ ಕೃತಿಗಳು. ಮಿಕ್ಕ ರಾಮಲಲಾ ನಹಛೂ, ಪಾರ್ವತೀಮಂಗಲ, ಜಾನಕೀ ಮಂಗಲ, ಬರವೈ ರಾಮಾಯಣ, ವೈರಾಗ್ಯ ಸಂದೀಪಿನೀ, ಕೃಷ್ಣ ಗೀತಾವಲಿ ಮತ್ತು ರಾಮಾಜ್ಞಾ ಪ್ರಶ್ನ ಇವು ಏಳು ಚಿಕ್ಕ ಕೃತಿಗಳು.

ಈ ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನಿರೂಪಿಸಲಾಗಿದೆ:

ರಾಮಲಲಾ ನಹಛೂ: ಇದರಲ್ಲಿ 'ಸೋಹರ್' ಎಂಬ ಛಂದಸ್ಸಿನಲ್ಲಿ ಬರೆದ ಇಪ್ಪತ್ತು ಪದ್ಯಗಳಿವೆ. ವಿವಾಹದಲ್ಲಿ ಮೆರವಣಿಗೆ ಹೊರಡುವ ಮುಂಚೆ 'ನಹಛೂ' ಎಂಬ ಪದ್ಧತಿಗೆ ಸಂಬಂಧಪಟ್ಟಂತೆ ಸ್ತ್ರೀಯರು ಹಾಡುವುದಕ್ಕಾಗಿ ಈ ಪದಗಳನ್ನು ರಚಿಸಲಾಗಿದೆ. ಕಾವ್ಯದೃಷ್ಟಿಯಿಂದ ಇದು ಸಾಧಾರಣ ಕೃತಿ. ಇದು ವಿಶುದ್ಧ ಅವಧೀ ಭಾಷೆಯಲ್ಲಿ ರಚಿತವಾಗಿದೆ.

ವೈರಾಗ್ಯ ಸಂದೀಪಿನೀ: ಜ್ಞಾನ, ಭಕ್ತಿ, ವೈರಾಗ್ಯ, ಶಾಂತಿ ಇವೇ ಇದರ ವರ್ಣ್ಯ ವಿಷಯಗಳು. ಇದರಲ್ಲಿ ದೋಹಾ-ಸೋರಠಾ ಮತ್ತು ಚೌಪಾಯೀ ಛಂದಸ್ಸುಗಳಲ್ಲಿ ಬರೆದ ಐವತ್ತೆರಡು ಪದ್ಯಗಳಿವೆ. ಕವಿಯ ಪ್ರಾರಂಭಿಕ ರಚನೆಯಾದ್ದರಿಂದ ಇದರಲ್ಲಿ ಕಾವ್ಯಪ್ರೌಢಿಮೆ ಕಂಡುಬರುವುದಿಲ್ಲ. ಸಾಧು ಸಂತರ ಸ್ವಭಾವ ಮತ್ತು ಮಹಿಮೆಯ ವರ್ಣನೆ ಮನೋಹರವಾಗಿದೆ.

ಬರವೈ ರಾಮಾಯಣ: ರಾಮನ ಕಥೆಗೆ ಸಂಬಂಧಪಟ್ಟಂತೆ ಬರವೈ ಛಂದಸ್ಸಿನಲ್ಲಿ ಆಗಾಗ ಬರೆದ ಪದಗಳ ಸಂಗ್ರಹವಿದು. ಆದುದರಿಂದ ಇದರ ಕಥಾಸರಣಿಯಲ್ಲಿ ಅಖಂಡತೆ ಇಲ್ಲ. ಇದರಲ್ಲಿ ಪ್ರಾಯಶಃ ತುಲಸೀದಾಸರು ಮೊಟ್ಟಮೊದಲು ರಸ ಮತ್ತು ಅಲಂಕಾರಗಳನ್ನು ನಿರೂಪಿಸಲು ಪ್ರಯತ್ನಪಟ್ಟಿರಬೇಕು. ಕಾವ್ಯ ಕಲಾ ಚಮತ್ಕಾರದ ದೃಷ್ಟಿಯಿಂದ ಇದರಲ್ಲಿರುವ ಕೆಲವು ಪದ್ಯಗಳು ಸೊಗಸಾಗಿವೆ. ಆದರೆ ಭಾವಗಾಂಭೀರ್ಯದ ಕಡೆಗೆ ಕವಿಯು ಹೆಚ್ಚು ಗಮನ ಕೊಟ್ಟಿಲ್ಲವೆಂದು ಹೇಳಬಹುದು. ಇದೂ ಅವಧೀ ಭಾಷೆಯ ಕೃತಿ.

ಪಾರ್ವತೀ ಮಂಗಲ: ನೂರ ಅರವತ್ತನಾಲ್ಕು ಪದ್ಯಗಳುಳ್ಳ ಈ ಕಾವ್ಯವು ಅರುಣ ಮತ್ತು ಹರಿಗೀತಿಕಾ ಛಂದಸ್ಸುಗಳಲ್ಲಿ ರಚಿತವಾಗಿದೆ. ಶಿವ ಪಾರ್ವತಿಯರ ವಿವಾಹ ಇದರ ಕಾವ್ಯ ವಸ್ತು. ವಿವಾಹದ ಸಮಯದಲ್ಲಿ ನಡೆಯುವ ಕೆಲವು ಪದ್ಧತಿಗಳ ವರ್ಣನೆಗಳಿಂದ ಕೂಡಿದ ಇದರ ಕಥಾ ಭಾಗವು ರಾಮಚರಿತ ಮಾನಸದಲ್ಲಿ ವರ್ಣಿತವಾದ ಶಿವ ಪಾರ್ವತಿ ವಿವಾಹಕ್ಕಿಂತ ಹೆಚ್ಚು ಚಮತ್ಕಾರ ಪೂರ್ಣವಾಗಿದೆ. ಶೈಲಿಯ ದೃಷ್ಟಿಯಿಂದ ಉತ್ತಮ ವಲ್ಲದಿದ್ದರೂ ಇದರಲ್ಲಿ ಬಳಸಿರುವ ಪೂರ್ವೀಅವಧೀ ಭಾಷೆಯು ರಾಮಚರಿತಮಾನಸದ ಭಾಷೆಯಷ್ಟೇ ರಸಯುಕ್ತವಾಗಿದೆ.

ಜಾನಕೀ ಮಂಗಲ: ವಾಲ್ಮೀಕಿ ರಾಮಾಯಣವನ್ನು ಅನುಸರಿಸಿ ಈ ಕಾವ್ಯದಲ್ಲಿ ಸೀತಾರಾಮರ ವಿವಾಹವನ್ನು ವರ್ಣಿಸಲಾಗಿದೆ. ಬಹುಮಟ್ಟಿಗೆ ಜಾನಕೀ ಮಂಗಲ ಮತ್ತು ಪಾರ್ವತೀ ಮಂಗಲ ಏಕಕಾಲದಲ್ಲಿ ರಚಿತವಾದ ಕೃತಿಗಳು. ಇದರಲ್ಲಿ ಅರುಣ ಮತ್ತು ಹರಿಗೀತಿಕಾ ಛಂದಸ್ಸಿನಲ್ಲಿ ರಚಿತವಾದ ಇನ್ನೂರ ಹದಿನಾರು ಪದ್ಯಗಳಿವೆ. ಇದನ್ನು ಬರೆದ ಭಾಷೆ ಅವಧೀ.

ರಾಮಾಜ್ಞಾಪ್ರಶ್ನ: ದೋಹಾ ಛಂದಸ್ಸಿನಲ್ಲಿ ರಚಿತವಾದ ಮುನ್ನೂರನಲವತ್ತಮೂರು ಪದ್ಯಗಳುಳ್ಳ ಈ ಕಾವ್ಯವನ್ನು ದೋಹಾವಲಿ ರಾಮಾಯಣವೆಂದೂ ಕರೆಯುತ್ತಾರೆ. ಇದರಲ್ಲಿ ಏಳು ಸರ್ಗಗಳೂ, ಪ್ರತ್ಯೇಕ ಸರ್ಗದಲ್ಲಿ ಏಳು ಸಪ್ತಕಗಳೂ ಇವೆ. ಪ್ರಶ್ನೋತ್ತರದ ಶೈಲಿಯಲ್ಲಿ ಶುಭ ಅಶುಭಗಳನ್ನು ವರ್ಣಿಸಲಾಗಿದೆ. ಇದರಲ್ಲಿ ವಾಲ್ಮೀಕಿ ರಾಮಾಯಣದ ಪ್ರಭಾವವು ಸ್ಪಷ್ಟವಾಗಿದೆ. ರಸಾಭಿವ್ಯಂಜನೆಗಿಂತ ಘಟನೆಗಳನ್ನು ವರ್ಣಿಸು ವುದರ ಮೂಲಕ ಶುಭಾಶುಭಗಳ ಶಕುನ ನಿರೂಪಣೆಯೇ ಈ ಗ್ರಂಥದ ಉದ್ದೇಶವೆನ್ನಬಹುದು. ಇದನ್ನು ವ್ರಜಭಾಷಾಮಿಶ್ರಿತ ಅವಧೀ ಭಾಷೆಯಲ್ಲಿ ರಚಿಸಲಾಗಿದೆ.

ದೋಹಾವಲಿ: ಇದರಲ್ಲಿ ದೋಹಾ ಛಂದಸ್ಸಿನಲ್ಲಿ ಬರೆದ ಐನೂರಎಪ್ಪತ್ತಮೂರು ಪದ್ಯಗಳಿವೆ. ರಾಮಚರಿತಮಾನಸ, ರಾಮಾಜ್ಞಾಪ್ರಶ್ನ, ವೈರಾಗ್ಯ ಸಂದೀಪಿನೀ ಮೊದಲಾದ ಕಾವ್ಯಗಳ ಕೆಲವು ಪದ್ಯಗಳೂ ಇದರಲ್ಲಿ ಸೇರಿವೆ. ನೀತಿ, ಭಕ್ತಿ, ರಾಮ ಮಹಿಮೆ, ನಾಮಮಹಿಮೆ, ಮತ್ತು ಆ ಕಾಲದ ಸ್ಥಿತಿಗತಿಗಳೇ ಈ ಕಾವ್ಯದಲ್ಲಿ ವರ್ಣಿತವಾದ ವಿಷಯಗಳು. ಚಾತಕಪಕ್ಷಿ ಮತ್ತು ಮೇಘ ಇವುಗಳ ಪ್ರೇಮದ ಆಧಾರದ ಮೇಲೆ ಈ ಕೃತಿಯಲ್ಲಿ ಅನನ್ಯಭಕ್ತಿಯನ್ನು ನಿರೂಪಿಸಲಾಗಿದೆ. ಮನೋ ವೇಗವನ್ನು ಚಿತ್ರಿಸುವ ಅನೇಕ ಪದಗಳು ಉತ್ಕೃಷ್ಟವಾಗಿವೆ. ಕಾವ್ಯಕಲೆಯ ದೃಷ್ಟಿಯಿಂದ ಇದೊಂದು ಸಾಧಾರಣ ಕೃತಿ.

ಕೃಷ್ಣ ಗೀತಾವಲಿ: 'ಸೂರ ಸಾಗರ' ದಲ್ಲಿ ಸೂರದಾಸರು ಶ್ರೀಕೃಷ್ಣನ ಲೀಲೆಗಳನ್ನು ಬಣ್ಣಿಸಿರುವಂತೆಯೇ ಕೃಷ್ಣಗೀತಾವಲಿ ಯಲ್ಲಿ ತುಲಸೀದಾಸರು ಕೃಷ್ಣಕಥೆಯನ್ನು ಹೃದಯಂಗಮವಾಗಿ ಹಾಡಿದ್ದಾರೆ. ಮುಖ್ಯವಾಗಿ ಬಾಲಲೀಲೆಯ ವರ್ಣನೆ ಮನೋ

ವಿಜ್ಞಾನದ ದೃಷ್ಟಿಯಿಂದಲೂ ಉತ್ಕೃಷ್ಟವಾಗಿದೆ. ಈ ಕಾವ್ಯವು ಸರಳವೂ ರಸಪೂರ್ಣವೂ ಆಗಿರುವುದಲ್ಲದೆ ತುಲಸೀದಾಸರ ಪ್ರತಿಭೆಯನ್ನೂ ಪ್ರತಿಬಿಂಬಿಸುತ್ತದೆ. ಅವಧೀ ಮತ್ತು ವ್ರಜ ಇವೆರಡೂ ಭಾಷೆಗಳಲ್ಲಿ ತುಲಸೀದಾಸರ ಪಾಂಡಿತ್ಯ ಏಕಪ್ರಕಾರವಾಗಿತ್ತೆಂಬುದಕ್ಕೆ ಕೃಷ್ಣ ಗೀತಾವಲಿ ಒಂದು ಉತ್ತಮ ನಿದರ್ಶನ.

ಗೀತಾವಲಿ: ರಾಮಕಥೆಯ ಘಟನೆಗಳನ್ನು ಸ್ಫುಟ ಪದಗಳಲ್ಲಿ ಮೊದಲು ಚಿತ್ರಿಸಿ, ಅನಂತರ ಆ ಪದಗಳನ್ನು ಕಾವ್ಯರೂಪದಲ್ಲಿ ಅಳವಡಿಸಿದ ಫಲವೇ ಗೀತಾವಲಿ. ಕೃಷ್ಣಕಥೆಯನ್ನು ಗೀತೆಗಳ ರೂಪದಲ್ಲಿ ಹೇಳುವ ಪದ್ಧತಿ ಈ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿತ್ತು. ತುಲಸೀದಾಸರು ತಮ್ಮ ಆರಾಧ್ಯನಾದ ರಾಮನ ಮಹಿಮೆಯನ್ನು ಹಾಡುವುದಕ್ಕೆ ಈ ಗೀತಶೈಲಿಯನ್ನು ಉಪಯೋಗಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಅವರಿಗೆ ರಾಮನ ಗುಣಗಳನ್ನು ಎಷ್ಟು ಬಗೆಗಳಿಂದ ವರ್ಣಿಸಿದರೂ ತೃಪ್ತಿಯಿಲ್ಲ. ಇದರಲ್ಲಿರುವ ಅನೇಕ ರಾಮನ ಗುಣವರ್ಣನೆಗಳು ಸೂರದಾಸರ ಪದಗಳಲ್ಲಿರುವ ಕೃಷ್ಣನ ಗುಣವರ್ಣನೆಗಳನ್ನು ಅಕ್ಷರಶಃ ಹೋಲುತ್ತವೆ. ಗೀತಾವಲಿಯಲ್ಲಿ ರಾಮ ಕಥೆಯ ಘಟನೆಗಳ ಯೋಜನೆ ಭಾವಪ್ರವಾಹಕ್ಕೆ ಪೋಷಕವಾಗಿಲ್ಲ. ಗೇಯ ಪದಶೈಲಿಯ ಆದರ್ಶವನ್ನು ರಕ್ಷಿಸುವ ಉದ್ದೇಶದಿಂದ ಲಂಕಾದಹನ, ರಾಮ ರಾವಣ ಯುದ್ಧ, ಮೊದಲಾದ ವೀರ ಪ್ರಸಂಗಗಳನ್ನು ಬಿಟ್ಟುಬಿಡಲಾಗಿದೆ. ಕೃಷ್ಣಚರಿತ್ರೆಯ ಮಾಧುರ್ಯಭಾವದ ಪ್ರಭಾವವು ರಾಮನ ವ್ಯಕ್ತಿತ್ವದ ನಿರೂಪಣೆಯಲ್ಲಿ ಎದ್ದು ಕಾಣುತ್ತದೆ. ಅದುದರಿಂದಲೇ ರಾಮನ ಪುರುಷೋತ್ತಮ ಮತ್ತು ಲೋಕರಕ್ಷಕ ಸ್ವರೂಪವು ಇಲ್ಲಿ ಚಿತ್ರಿತವಾಗಿಲ್ಲ. ಗೀತಾವಲಿಯಲ್ಲಿ ರಾಮನ ಸೌಂದರ್ಯವರ್ಣನೆ ತುಲಸೀದಾಸರ ಬೇರೆ

ಕಾವ್ಯಗಳಲ್ಲಿರುವುದಕ್ಕಿಂತ ಹೆಚ್ಚಾಗಿದೆ. ಆದರೆ ಸೂರದಾಸರು ಕೃಷ್ಣನ ಸೊಬಗಿನ ವರ್ಣನೆಯಲ್ಲಿ ತೋರಿಸಿರುವಷ್ಟು ಕಲ್ಪನಾ ವೈಚಿತ್ರ್ಯವಾಗಲೀ, ಭಾವೋನ್ಮೇಷವಾಗಲೀ, ಮಾರ್ಮಿಕತೆಯಾಗಲೀ ಇದರಲ್ಲಿಲ್ಲ. ಭಕ್ತಿಯ ಆವೇಶ, ಕಾವ್ಯಲಾಲಿತ್ಯ, ಸೌರಭತೆಗೆ ಬಾಧಕವಾಗಿದೆ. ಇದರಲ್ಲಿ ಶೃಂಗಾರ ರಸವೇ ಪ್ರಧಾನವಾಗಿ ಬೇರೆ ರಸಗಳು ಗೌಣವಾಗಿವೆ. ಒಟ್ಟಿನಲ್ಲಿ ವ್ರಜಭಾಷೆಯಲ್ಲಿ ರಚಿತವಾದ ಈ ಕಾವ್ಯವು ಭಾಷಾ ಲಾಲಿತ್ಯ, ಭಾವಾಭಿವ್ಯಕ್ತಿ, ಗೇಯ ತತ್ವದ ವೈಶಿಷ್ಟ್ಯಗಳಿಂದ ಕೂಡಿದ ಒಂದು ಉತ್ತಮವಾದ ಕಲಾಕೃತಿ.

ಕವಿತಾವಲಿ: ಏಳು ಕಾಂಡಗಳಲ್ಲಿ ವಿಭಾಗಿಸಲ್ಪಟ್ಟ ಈ ಕಾವ್ಯದಲ್ಲಿ ಮುನ್ನೂರಇಪ್ಪತ್ತೈದು ಪದ್ಯಗಳಿವೆ. ಈ ಕಾವ್ಯದಲ್ಲಿ ಸವೈಯಾ, ಕವಿತ್ತ, ಛಪ್ಪಯ ಮತ್ತು ಝೂಲನಾ, ಇತ್ಯಾದಿ ಛಂದಸ್ಸುಗಳನ್ನು ಸಫಲ ರೀತಿಯಲ್ಲಿ ಪ್ರಯೋಗಿಸಲಾಗಿದೆ. ಗೀತಾವಲಿಯಂತೆಯೇ ಇದರಲ್ಲಿಯೂ ರಾಮಕಥೆಯ ಘಟನೆಗಳನ್ನು ಸ್ಫುಟ ಪದ್ಯಗಳಲ್ಲಿ ವರ್ಣಿಸಿ ಸಂಗ್ರಹಿಸಲಾಗಿದೆ. ಆದುದರಿಂದಲೇ ಕಥೆಯ ಘಟನೆಗಳು ಕ್ರಮದಿಂದ ನಿಯೋಜಿತವಾಗಿಲ್ಲ. ಗೀತಾವಲಿಯಲ್ಲಿ ರಾಮನ ಸೌಂದರ್ಯವನ್ನು ವರ್ಣಿಸುವುದೇ ಮುಖ್ಯ ಉದ್ದೇಶವಾದರೆ ಕವಿತಾವಲಿಯಲ್ಲಿ ರಾಮನ ಓಜೋಗುಣ ವರ್ಣನೆಯೇ ಮುಖ್ಯವಾಗಿದೆ. ಲಂಕಾದಹನ ಮತ್ತು ಯುದ್ಧದ ವರ್ಣನೆ ಬಹಳ ಮನೋಹರವಾಗಿದೆ. ಶ್ರೀರಾಮನ ಸ್ವಭಾವ ನಿರೂಪಣೆಯಲ್ಲಿ ಶೀಲ, ಶಕ್ತಿ, ಸೌಂದರ್ಯದ ಕಾಂತಿ ಚಿತ್ತಾಕರ್ಷಕವಾಗಿದೆ. ಉತ್ತರ ಕಾಂಡವು ಬೇರೆ ಕಾಂಡಗಳಿಗಿಂತ ದೊಡ್ಡದು. ಜ್ಞಾನ, ಭಕ್ತಿ, ವೈರಾಗ್ಯದ ಮಹಿಮೆಗಳ ವರ್ಣನೆಯೊಂದಿಗೆ ಅಲ್ಲಲ್ಲಿ ತುಲಸೀದಾಸರ ಆತ್ಮ ಚರಿತ್ರೆಗೆ ಸಂಬಂಧಪಟ್ಟ

ಅನೇಕ ಉಲ್ಲೇಖಗಳಿವೆ. ವಿಶೇಷವಾದ ಆತ್ಮಗ್ಲಾನಿಯಿಂದ ಅನೇಕ ವಿಷಯಗಳನ್ನು ಮಾರ್ಮಿಕವಾಗಿ ತುಲಸೀದಾಸರು ಹೇಳಿ ಕೊಂಡಿದ್ದಾರೆ. ಧಾರ್ಮಿಕ ಮತ್ತು ದಾರ್ಶನಿಕ ತತ್ವ ಪ್ರತಿ ಪಾದನೆಯಾಗೊಡವೆಗೆ ಹೋಗದೆ ಮೋಘ ಮನಸ್ಸಿಗೆ ಉಪದೇಶ, ಜಗತ್ತಿನ ನಿಸ್ಸಾರತೆ, ಭಕ್ತವತ್ಸಲ ಪರಮಾತ್ಮನ ಪ್ರೀತಿ, ಇತ್ಯಾದಿ ವಿಷಯಗಳನ್ನು ನಿರೂಪಿಸುತ್ತಾರೆ.

ಕವಿತಾವಲಿಯಲ್ಲಿ ರಾಮಕಥೆಯ ಎಲ್ಲ ಮುಖ್ಯ ಘಟನೆಗಳ ಉತ್ಕರ್ಷವನ್ನು ಕಾಣಬಹುದು. ಆ ಕಾಲದ ಸ್ಥಿತಿಗತಿಗಳಿಗೆ ಸಂಬಂಧಪಟ್ಟ ಸೂಚನೆಗಳೂ ಇವೆ. ಇದರಲ್ಲಿ ಭಯಾನಕ ರಸವೇ ಪ್ರಧಾನ. ತುಲಸೀದಾಸರ ಶೈಲಿಯ ಅನೇಕ ಸ್ವರೂಪ ಗಳನ್ನು ಇದರಲ್ಲಿ ಕಾಣಬಹುದು. ಬಾಲಕಾಂಡ ಭಾಷಾ ಸೌಂದರ್ಯಕ್ಕೂ ಉತ್ತರಕಾಂಡ ಭಾವಸೌಂದರ್ಯಕ್ಕೂ ಉತ್ತಮ ವಾದ ನಿದರ್ಶನಗಳಾಗಿವೆ. ಇದು ವ್ರಜಭಾಷೆಯ ಒಂದು ಶ್ರೇಷ್ಠ ಕಾವ್ಯವೆಂದು ಖ್ಯಾತವಾಗಿದೆ.

ವಿನಯಪತ್ರಿಕಾ: ಭಕ್ತರಾದ ತುಲಸೀದಾಸರು ತಮ್ಮ ಆರಾಧ್ಯ ಶ್ರೀರಾಮನಲ್ಲಿ ಮಾಡಿಕೊಂಡ ಅರಿಕೆಗಳ ಸಂಗ್ರಹವೇ ವಿನಯ ಪತ್ರಿಕೆ. ಕವಿತಾವಲಿ ಮತ್ತು ಗೀತಾವಲಿಗಳಂತೆಯೇ ಆಗಾಗ ರಚಿಸಿದ ಪದಗಳ ಇದೊಂದು ಸಂಗ್ರಹವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದೊಂದು ಪರಿಪೂರ್ಣ ಕಾವ್ಯವೆಂದು ಇನ್ನು ಕೆಲವರ ವಾದ. ಕಾವ್ಯಾರಂಭದಲ್ಲಿ ವಿಷ್ಣು, ಶಿವ, ದುರ್ಗೆ, ಸೂರ್ಯ ಮತ್ತು ಗಣೇಶ ಈ ಪಂಚದೇವತೆಗಳನ್ನು ಸ್ತುತಿಸಿರು ವುದರಿಂದ ತುಲಸೀದಾಸರು ಸ್ಮಾರ್ತ ಬ್ರಾಹ್ಮಣರಾಗಿದ್ದರೆಂದು ಊಹಿಸಬಹುದು. ವಿನಯಪತ್ರಿಕೆಯ ಪದಗಳನ್ನು ಹಾಡು ವುದಕ್ಕಾಗಿ ರಚಿಸಲಾಗಿದೆ. ಆದುದರಿಂದ ಪ್ರತಿಯೊಂದು ಗೀತದ

ರಚನೆ ಯಾವುದಾದರೊಂದು ರಾಗದ ನಿಯಮಕ್ಕೊಳಪಟ್ಟಿದೆ. ಇದರಲ್ಲಿರುವ ರಾಗಗಳಲ್ಲಿ ಈ ಕೆಳಗಿನವು ಮುಖ್ಯವಾಗಿವೆ:

ಬಿಲಾವಲ್, ಧನ್ಯಾಶ್ರೀ, ರಾಮಕಲೀ, ವಸಂತ, ಮಾರೂ, ಭೈರವ, ಕಾನಡಾ, ಸಾರಂಗ, ಗೌರೀ, ಕೇದಾರ, ಅಸಾವರೀ, ಜಯತಶ್ರೀ, ವಿಭಾಸ, ಲಲಿತ, ತೋಡಿ, ನಟ, ಮಲ್ಹಾರ, ಸೋರಠ, ಭೈರವೀ ಮತ್ತು ಕಲ್ಯಾಣೀ.

ವಿನಯಪತ್ರಿಕೆಯ ವರ್ಣ್ಯ ವಿಷಯಗಳನ್ನು ಮುಖ್ಯವಾಗಿ ಪ್ರಾರ್ಥನೆ ಅಥವಾ ಸ್ತುತಿ, ಮನಸ್ಸಿಗೆ ಉಪದೇಶ, ಜಗತ್ತಿನ ಅಸಾರತೆ, ಜ್ಞಾನ, ವೈರಾಗ್ಯ, ಆತ್ಮಚಿಂತನೆಯ ಉಲ್ಲೇಖವೆಂದು ಸ್ಥೂಲವಾಗಿ ವಿಂಗಡಿಸಬಹುದು. ರಾಮಭಕ್ತಿಯೇ ಎಲ್ಲಾ ಪದಗಳ ಏಕಮಾತ್ರ ಉದ್ದೇಶ ಹಾಗೂ ಆದರ್ಶ. ಯಾವ ದೇವೀ ದೇವತೆಗಳನ್ನು ಸ್ತುತಿಸಿದರೂ ಕೊನೆಯಲ್ಲಿ ತುಲಸೀದಾಸರು ಅತಿವಿನಯದಿಂದ ಬೇಡುವುದು ಒಂದೇ ಒಂದು ವರ ಅದು—ರಾಮನ ಚರಣಾರವಿಂದದಲ್ಲಿ ಅನನ್ಯಭಕ್ತಿ, ಶರಣಾಗತಿ, ಆತ್ಮಾರ್ಪಣೆ. ಪತಿತೋದ್ಧಾರಕ, ಭಕ್ತವತ್ಸಲ, ಕೃಪಾಸಾಗರ ಹೀಗೆ ರಾಮನ ಗುಣ ಮತ್ತು ಮಹಿಮೆಗಳನ್ನು ಎಷ್ಟು ವರ್ಣಿಸಿದರೂ ತುಲಸೀದಾಸರಿಗೆ ತೃಪ್ತಿಯಿಲ್ಲ. ರಾಮನ ಶೀಲ, ಸೌಂದರ್ಯ, ಆದರ್ಶಜೀವನದ ಸೊಬಗನ್ನು ವರ್ಣಿಸುವಾಗ ಉಪಮೆ, ರೂಪಕ, ಉತ್ಪ್ರೇಕ್ಷೆ, ಅತಿಶಯೋಕ್ತಿ, ಇತ್ಯಾದಿ ಅಲಂಕಾರಗಳನ್ನು ಪ್ರಯೋಗಿಸುವ ಕೌಶಲ, ಕಲ್ಪನಾಶಕ್ತಿಯ ಚಮತ್ಕಾರ, ಶಾಸ್ತ್ರ ಪುರಾಣಗಳಲ್ಲಿರುವ ಅವರ ಪಾಂಡಿತ್ಯ, ಭಾಷಾಪ್ರೌಢಿಮೆ ಅಸದೃಶ ವಾಗಿವೆ. ವಿನಯಪತ್ರಿಕೆಯನ್ನು ಭಕ್ತಿಯ ಭಂಡಾರವೆಂದರೆ ತಪ್ಪಾಗಲಾರದು.

ತುಲಸೀದಾಸರು ವಿನಯಪತ್ರಿಕೆಯನ್ನು ಪ್ರೌಢವಾದ ವ್ರಜ ಭಾಷೆಯಲ್ಲಿ ಬರೆದಿದ್ದಾರೆ. ಸಂಸ್ಕೃತಭಾಷೆಯಲ್ಲಿರುವ ಅವರ ಅಸಾಧಾರಣ ಪಾಂಡಿತ್ಯವನ್ನು ಇಲ್ಲಿ ಕಾಣಬಹುದು. ಅನೇಕ ಕಡೆ ಕ್ಲಿಷ್ಟವಾದ ಸಂಸ್ಕೃತ ಪದಗಳ ಭಾರದಿಂದ ಭಕ್ತಿಭಾವವು ಒಮ್ಮೊಮ್ಮೆ ಕುಗ್ಗಿದಂತಾಗುವುದು. ಆದರೂ ಒಟ್ಟಿನಲ್ಲಿ ತುಲಸೀದಾಸರ ಶ್ರೇಷ್ಠ ಕೃತಿಗಳಲ್ಲಿ ವಿನಯಪತ್ರಿಕೆಗೆ ಎರಡನೆಯ ಸ್ಥಾನ ಸಲ್ಲುವುದು. ಈ ವಿಚಾರದಲ್ಲಿ ವಿಮರ್ಶಕರಲ್ಲಿ ಮತಭೇದವಿಲ್ಲ.

ರಾಮಚರಿತಮಾನಸ: ತುಲಸೀದಾಸರು ರಚಿಸಿದ ಕಾವ್ಯಗಳಲ್ಲಿ ರಾಮಚರಿತಮಾನಸ ಅಥವಾ ತುಲಸೀ ರಾಮಾಯಣವೇ ಸರ್ವಶ್ರೇಷ್ಠವಾದದ್ದು. ಇದನ್ನು ಹಿಂದೀ ಭಾಷೆಯ ಸರ್ವೋತ್ತಮ ಗ್ರಂಥವೆಂದರೂ ಅತಿಶಯೋಕ್ತಿಯಾಗಲಾರದು. ಇದರ ರಚನಾಕಾಲದ ವಿಷಯದಲ್ಲಿ ತುಲಸೀದಾಸರು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ:

ಸಂವತ್ ಸೋರಹ ಸೈ ಇಕತೀಸಾ
ಕಹೌಂ ಕಥಾ ಹರಿಪದ ಧರಿ ಸೀಸಾ ।

(ವಿಕ್ರಮ ಸಂವತ್ಸರ ೧೬೩೧ ಅಥವಾ ಕ್ರಿ. ಶ. ೧೫೭೪ರಲ್ಲಿ ಹರಿಚರಣಕ್ಕೆರಗಿ ನಾನು ಈ ಕಥೆಯನ್ನು ಹೇಳುತ್ತೇನೆ).

ಶ್ರೀರಾಮನ ಕಥೆಯನ್ನು ಸವಿಸ್ತಾರವಾಗಿ ಒಂದು ಮಹಾಕಾವ್ಯದ ಅಚ್ಚುಕಟ್ಟಿನಲ್ಲಿ ವರ್ಣಿಸಲಾಗಿದೆ. ಇದೊಂದು ರಾಮಚರಿತ್ರೆಯ ಮಾನಸಸರೋವರ. ರಾಮಚರಿತಮಾನಸ ಒಂದು ಕಥೆ ಮಾತ್ರವಲ್ಲ, ಮಹಾಕಾವ್ಯವೂ ಆಗಿದೆ. ತುಲಸೀದಾಸರು ಕಾವ್ಯಾರಂಭದಲ್ಲಿ ಕೆಲವು ಸಂಸ್ಕೃತ ಶ್ಲೋಕಗಳನ್ನು ಹಾಡಿ ತಮ್ಮ ಕಾವ್ಯದ ಸ್ವರೂಪವನ್ನು ಸ್ಪಷ್ಟವಾಗಿ ನಿರೂಪಿಸಿರುವರು. ಒಂದು ಶ್ಲೋಕ ಹೀಗಿದೆ:

ನಾನಾಪುರಾಣನಿಗಮಾಗಮಸಮ್ಮತಂ ಯದ್ ರಾಮಾಯಣೇ
ನಿಗದಿತಂ ಕ್ವಚಿದನ್ಯತೋಽಪಿ ।
ಸ್ವಾಂತಸ್ಸುಖಾಯ ತುಲಸೀರಘುನಾಥಗಾಥಾಭಾಷಾನಿಬಂಧ
ಮತಿಮಂಜುಲಮಾತನೋತಿ ॥

"ಅನೇಕ ಪುರಾಣ, ವೇದ, ಶಾಸ್ತ್ರಗಳಿಗೆ ಸಮ್ಮತವಾದ ರಾಮಾಯಣದಲ್ಲಿ ವರ್ಣಿಸಲ್ಪಟ್ಟ ಮತ್ತು ಬೇರೆ ಗ್ರಂಥಗಳಿಂದ ಸಂಗ್ರಹಿಸಲ್ಪಟ್ಟ ಶ್ರೀ ರಘುನಾಥನ ಕಥೆಯನ್ನು ತುಲಸೀದಾಸರು ಅತ್ಯಂತ ಸುಂದರವಾದ ಭಾಷೆ (ಹಿಂದಿ)ಯಲ್ಲಿ ವಿವರಿಸುತ್ತಾರೆ".

ಮುಖ್ಯವಾಗಿ ವಾಲ್ಮೀಕಿ ರಾಮಾಯಣ ಮತ್ತು ಅಧ್ಯಾತ್ಮ ರಾಮಾಯಣಗಳಿಂದ ಕಥಾವಸ್ತುವನ್ನು ಸಂಗ್ರಹಿಸಿ ಈ ಮಹಾ ಕಾವ್ಯವನ್ನು ನಿರ್ಮಿಸಲಾಗಿದೆ. ಇವಲ್ಲದೆ ಹನುಮನ್ನಾಟಕ, ಪ್ರಸನ್ನರಾಘವ, ಶ್ರೀಮದ್ ಭಾಗವತ, ಇತ್ಯಾದಿ ಅನೇಕ ಸಂಸ್ಕೃತ ಗ್ರಂಥಗಳ ಪ್ರಭಾವ ಇದರಲ್ಲಿ ದೃಷ್ಟಿಗೋಚರವಾಗುತ್ತದೆ. ರಾಮಚರಿತಮಾನಸದಲ್ಲಿ ಮಾನವ ಜೀವನದ ವಿವಿಧ ಪರಿಸ್ಥಿತಿಗಳನ್ನು ಅತ್ಯಂತ ಹೃದಯಂಗಮವಾಗಿ ಚಿತ್ರಿಸಲಾಗಿದೆ. ರಾಮನ ಆದರ್ಶಪೂರ್ಣ ದಿವ್ಯಜೀವನದ ಬೆಳಕಿನಲ್ಲಿ ಈ ಕಾವ್ಯವು ಕಂಗೊಳಿಸುತ್ತದೆ. ತುಲಸೀದಾಸರು ರಾಮಕಥೆಯ ಜೊತೆಗೆ ಧಾರ್ಮಿಕ ಮತ್ತು ದಾರ್ಶನಿಕ ತತ್ವಗಳನ್ನು ಸರಳವಾದ ಶೈಲಿಯಲ್ಲಿ ನಿರೂಪಿಸಿದ್ದಾರೆ. ರಾಮಚರಿತಮಾನಸದಲ್ಲಿ ಘಟನೆಗಳ ಸಂವಿಧಾನಕ್ಕಿಂತ ಪಾತ್ರನಿರೂಪಣೆಗೆ ಹೆಚ್ಚು ಪ್ರಾಶಸ್ತ್ಯವಿದೆ. ಪ್ರತ್ಯೇಕ ಶ್ರೇಣಿಗೆ ಸೇರಿದ ಪಾತ್ರ ತನ್ನ ಶ್ರೇಣಿಯ ಜನಕ್ಕೆ ಒಂದು ಉಚ್ಚ ಆದರ್ಶವನ್ನು ಒದಗಿಸುತ್ತದೆ. ಪಾತ್ರರಚನೆಯಲ್ಲಿ ಲೋಕ ರಕ್ಷಣೆ ಮತ್ತು ಲೋಕಕಲ್ಯಾಣದ ಭಾವನೆ ಅಭಿವ್ಯಕ್ತವಾಗುತ್ತದೆ. ಈಶ್ವರಭಕ್ತಿ, ಧರ್ಮಪ್ರೇಮ, ಗುರುಭಕ್ತಿ, ಪಾತಿವ್ರತ್ಯ, ಮಾತಾ

ಪಿತೃಪ್ರೇಮ, ಭ್ರಾತೃಪ್ರೇಮ, ಪ್ರಜಾಪ್ರೀತಿ, ಸ್ವಾಮಿಭಕ್ತಿ, ಸತ್ಯ ನಿಷ್ಠೆ, ತ್ಯಾಗ, ಸೇವೆ, ದಯೆ ಮೊದಲಾದ ಉತ್ಕೃಷ್ಟಗುಣಗಳ ದಿವ್ಯ ಜ್ಯೋತಿಯಿಂದ ರಾಮಚರಿತಮಾನಸದ ಎಲ್ಲ ಪಾತ್ರಗಳೂ ಸಮಾಜಕ್ಕೆ ಮಾರ್ಗದರ್ಶಕವಾಗಿದೆ.

ರಾಮಚರಿತಮಾನಸ ಎಲ್ಲ ಕಾವ್ಯಗುಣಗಳಿಂದ ಶೋಭಿತ ವಾಗಿದೆ. ಘಟನೆಗಳ ಸಂವಿಧಾನ, ಪಾತ್ರನಿರೂಪಣೆ, ಅಲಂಕಾರ ಗಳ ಯೋಜನೆ, ರಸಾಭಿವ್ಯಂಜನೆ, ಇತ್ಯಾದಿ ಎಲ್ಲ ದೃಷ್ಟಿಗಳಿಂದಲೂ ಇದೊಂದು ಅನುಪಮ ಕಲಾಕೃತಿ. ರಾಮನಲ್ಲಿ ಅನನ್ಯಭಕ್ತಿಯನ್ನು ಪ್ರತಿಪಾದಿಸುವುದರ ಮೂಲಕ ವ್ಯಷ್ಟಿಯ ಉದ್ಧಾರವನ್ನು ಮಾತ್ರ ಸಾಧಿಸುವುದರಿಂದ ತುಲಸೀದಾಸರು ತೃಪ್ತರಾಗುವುದಿಲ್ಲ. ಸಮಷ್ಟಿಯ ಉದ್ಧಾರವೇ ವ್ಯಷ್ಟಿಯ ಉದ್ಧಾರಕ್ಕೆ ಆಧಾರ. ಈ ಮೂಲಭೂತ ತತ್ತ್ವವನ್ನು ತುಲಸೀದಾಸರು ಎತ್ತಿಹಿಡಿದು ಬೋಧಿಸಿದ್ದಾರೆ.

ರಾಮಚರಿತಮಾನಸ ಅವಧೀ ಭಾಷಾಸುಂದರಿಯ ಅಮೂಲ್ಯ ಕಂಠಾಭರಣ. ಸಂಸ್ಕೃತ ತತ್ಸಮ ಪದಗಳು ಈ ಕಾವ್ಯದಲ್ಲಿ ಹೆಚ್ಚಾಗಿದ್ದರೂ, ಭಾಷೆಯ ಸೌಂದರ್ಯಕ್ಕಾಗಲೀ, ಕಥಾ ಪ್ರವಾಹಕ್ಕಾಗಲೀ, ರಸಾಭಿವ್ಯಕ್ತಿಗಾಗಲೀ, ಧಕ್ಕೆ ಬರುವುದಿಲ್ಲ. ಆ ಕಾಲದಲ್ಲಿ ಪ್ರಚಲಿತವಾದ ಅರಬೀ, ಫಾರಸೀ ಮುಂತಾದ ವಿದೇಶೀ ಭಾಷೆಗಳ ಶಬ್ದಗಳನ್ನು ತುಲಸೀದಾಸರು ನಿಸ್ಸಂಕೋಚವಾಗಿ ಪ್ರಯೋಗಿಸಿದ್ದಾರೆ.

ರಾಮಚರಿತಮಾನಸವು ಹೇಗೆ ಭಕ್ತಿಯ ಅಪಾರ ನಿಧಿಯೋ ಹಾಗೆಯೇ ನವರಸಗಳ ಸಾಗರ. ರಸನಿಷ್ಪತ್ತಿ ಸ್ವಾಭಾವಿಕವಾಗಿ ಪಾತ್ರಗಳ ಸ್ವಭಾವ ನಿರೂಪಣೆಗೆ ಸಹಾಯಕವಾಗಿದೆ. ಸಂಚಾರಿ ಭಾವಗಳ ಯೋಜನೆ, ವರ್ಣನೆಗಳು ಮನೋಹರವಾಗಿವೆ.

ಡಾ॥ ಮಾತಾಪ್ರಸಾದ ಗುಪ್ತರವರು ತುಲಸೀದಾಸರ ಎಲ್ಲ ಕೃತಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಸಂಶೋಧನೆ ನಡೆಸಿದ್ದಾರೆ. ಅವರು ಈ ಕೃತಿಗಳ ರಚನಾಕಾಲಕ್ರಮವನ್ನು ಈ ಕೆಳಗಿನಂತೆ ತಿಳಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ತುಲಸೀದಾಸರು ರಾಮಲಲಾ ನಹಛೂ ಮತ್ತು ರಾಮಾಜ್ಞಾ ಪ್ರಶ್ನೆಗಳನ್ನು ತಮ್ಮ ಇಪ್ಪತ್ತೇಳರಿಂದ ಮೂವತ್ತೆರಡನೆಯ ವಯಸ್ಸಿನೊಳಗೂ; ಜಾನಕೀಮಂಗಲ, ರಾಮಚರಿತಮಾನಸ ಮತ್ತು ಪಾರ್ವತೀ ಮಂಗಲಗಳನ್ನು ಮೂವತ್ತೆಂಟರಿಂದ ಐವತ್ತನಾಲ್ಕನೆಯ ವಯಸ್ಸಿನಲ್ಲಿಯೂ; ಉಳಿದ ಕೃತಿಗಳನ್ನು ತಮ್ಮ ಜೀವನದ ಕೊನೆಯ ಕಾಲದಲ್ಲೂ ರಚಿಸಿರಬೇಕು. ಇವರ ಹೇಳಿಕೆಯಂತೆ ರಾಮಚರಿತಮಾನಸವು ತುಲಸೀದಾಸರು ನಲವತ್ತನೆಯ ವಯಸ್ಸು ಮೀರಿದ ಮೇಲೆ ರಚಿಸಿದ ಕಾವ್ಯವೆಂದು ತೀರ್ಮಾನಿಸಬಹುದು.

ಕಾವ್ಯಸೌಂದರ್ಯ

ವಸ್ತು ಸಂವಿಧಾನ: ಕಾವ್ಯವನ್ನು 'ಸ್ವಾನುಭೂತಿ ನಿರೂಪಕ' (Subjective) ಮತ್ತು 'ಬಾಹ್ಯಾರ್ಥ ನಿರೂಪಕ' (Objective) ಎಂದು ಎರಡು ಸಮೂಹವಾಗಿ ವಿಭಾಜಿಸಿದ್ದಾರೆ. ಮೊದಲನೆಯದನ್ನು ಭಾವಾತ್ಮಕ ಅಥವಾ ಭಾವಪ್ರಧಾನ ಕಾವ್ಯವೆಂದೂ ಎರಡನೆಯದನ್ನು ಬಾಹ್ಯಜಗತ್ತಿನ ವಸ್ತು. ಘಟನೆಗಳನ್ನು ಚಿತ್ರಿಸುವ ಕಾವ್ಯವೆಂದೂ ಕರೆಯಬಹುದು. ಗೋಸ್ವಾಮಿ ತುಲಸೀದಾಸರು ಈ ಎರಡು ವಿಧದ ಕಾವ್ಯಗಳನ್ನೂ ರಚಿಸಿದ್ದಾರೆ. ಈ ಎರಡು ರೀತಿಯ ಕಾವ್ಯಗಳಲ್ಲಿಯೂ ಅವರ ಪ್ರತಿಭೆಯ ವೈಭವವನ್ನು ಕಾಣಬಹುದು. ಬರವೈ ರಾಮಾಯಣ, ಕವಿತಾವಲಿ, ಗೀತಾವಲಿ, ಕೃಷ್ಣಗೀತಾವಲಿ, ವಿನಯಪತ್ರಿಕಾ ಇವು ಮೊದಲ

ನೆಯ ಜಾತಿಗೆ ಸೇರಿದ ಗ್ರಂಥಗಳು. ಇವುಗಳನ್ನು ಗೀತಕಾವ್ಯ ಗಳೆನ್ನಬಹುದು. ವಿನಯಪತ್ರಿಕೆ ಭಾಷೆ, ಭಾವ ಮತ್ತು ಕಲೆಯ ದೃಷ್ಟಿಯಿಂದ ಭಾವಪ್ರಧಾನ ಕಾವ್ಯಗಳಲ್ಲಿ ಸರ್ವಶ್ರೇಷ್ಠ. ಇದರಲ್ಲಿ ಭಕ್ತ ತುಲಸೀದಾಸರಿಗೆ ರಾಮನಲ್ಲಿರುವ ಅನನ್ಯಪ್ರೀತಿ, ದೈನ್ಯತೆ, ಆತ್ಮಸಮರ್ಪಣೆ, ಆತ್ಮಗ್ಲಾನಿ, ಅನುತಾಪ, ಆತ್ಮನಿವೇದನೆ, ಇತ್ಯಾದಿ ಭಾವನೆಗಳ ಮರ್ಮಸ್ಪರ್ಶ ಮಾಡುವ ವರ್ಣನೆಗಳಿವೆ. ಇವರಲ್ಲಿರುವ ಪ್ರತಿಯೊಂದು ಪದ್ಯವೂ ಹಾಡುವುದಕ್ಕಾಗಿಯೇ ಬರೆದುದಾಗಿದೆ. ಆದುದರಿಂದ ಈ ಗೀತೆಗಳಲ್ಲಿ ಭಕ್ತಿ ಮತ್ತು ಸಂಗೀತದ ಮಧುರಮಿಲನದ ಮೂಲಕ ಅವರು ನಾದಬ್ರಹ್ಮನ ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ.

ರಾಮಚರಿತಮಾನಸ ಮೇಲೆ ತಿಳಿಸಿದ ಕಾವ್ಯರೀತಿಗಳಲ್ಲಿ ಎರಡನೆಯ ಭಾಗಕ್ಕೆ ಸೇರಿದ್ದು. ಸಮಗ್ರ ರಾಮಕಥೆಯೇ ಇದರ ಕಾವ್ಯವಸ್ತು. ಮಹಾಕಾವ್ಯದ ಪದ್ಧತಿ ಮತ್ತು ಲಕ್ಷಣಗಳನ್ನು ಅನುಸರಿಸಿ ರಾಮಕಥೆಯನ್ನು ಅಳವಡಿಸಲಾಗಿದೆ. ಪ್ರಾಚೀನ ವಿವಿಧ ರಾಮಕಥೆಗಳ ಆಧಾರದ ಮೇಲೆ ಇದನ್ನು ನಿರ್ಮಿಸ ಲಾಗಿದೆ. ಪುರುಷೋತ್ತಮ, ಧೀರೋದಾತ್ತ ರಾಮನೇ ರಾಮ ಚರಿತಮಾನಸದ ಕಥಾನಾಯಕ. ಜಗತ್ತಿನ ಎಲ್ಲಾ ಮಹಾಕಾವ್ಯಗಳ ನಾಯಕರಂತೆಯೇ ರಾಮನು ಮಹಿಮಾನ್ವಿತ, ವಿನಯಶೀಲ, ಧರ್ಮಪರಾಯಣ, ತ್ಯಾಗಿ, ಉದಾರಿ, ಸತ್ಯಸಂಧ. ಈ ಮಹಾನ್ ಆದರ್ಶಗುಣಗಳಿಂದಲೇ ಅವನು ಕಾವ್ಯದ ಶಕ್ತಿಶಾಲೀ ಪ್ರತಿ ನಾಯಕ ರಾವಣನನ್ನು ಕೊಂದು ವಿಜಯಪಡೆಯುತ್ತಾನೆ. ರಾಮ ಚರಿತೆಯ ಮೂಲಕ ಮನುಷ್ಯತ್ವವನ್ನು ಅಶಕ್ತಿಯಿಂದ ಶಕ್ತಿಯ ಕಡೆಗೆ, ಅಶಾಂತಿಯಿಂದ ಶಾಂತಿಯ ಕಡೆಗೆ ಮತ್ತು ರಸಾತಲದಿಂದ ಸ್ವರ್ಗಲೋಕಕ್ಕೆ ಕೊಂಡೊಯ್ಯುವುದೇ ಕಾವ್ಯದ ಗುರಿ. ಮಾನವ

ಜೀವನದ ನಾನಾ ಪರಿಸ್ಥಿತಿಗಳ ವಿಶದ ವರ್ಣನೆ ರಾಮಚರಿತ ಮಾನಸದ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಪ್ರಾಸಂಗಿಕ ಕಥೆಗಳು ಬಹಳ ಕಡಿಮೆ. ಪ್ರಧಾನ ಕಥಾವಸ್ತುವಿನ ಮೇಲೆಯೇ ಕವಿಯ ಗಮನ ಹೆಚ್ಚು. ಬಾಲಕಾಂಡದಲ್ಲಿ ಶಿವಚರಿತ್ರೆ ಮತ್ತು ಉತ್ತರ ಕಾಂಡದಲ್ಲಿ ಕಾಕಭುಶುಂಡಿಯ ಕಥೆಗಳ ಸಂಬಂಧ ಮುಖ್ಯ ಕಥಾ ವಸ್ತುವಿಗೆ ಆವಶ್ಯಕವಾಗಿ ಕಾಣಿಸುವುದಿಲ್ಲ. ಆದರೆ ರಾಮನ ಭಕ್ತರಾದ ತುಲಸೀದಾಸರು ತಮ್ಮ ಆರಾಧ್ಯದೇವತೆಯಾದ ರಾಮನ ಇಬ್ಬರು ಭಕ್ತರ ಆದರ್ಶವನ್ನು ನಿರೂಪಿಸುವುದಕ್ಕಾಗಿ ಈ ಪ್ರಸಂಗಗಳನ್ನು ಕಾವ್ಯದಲ್ಲಿ ಸೇರಿಸಿದ್ದಾರೆಂದು ಊಹಿಸ ಬಹುದು. ಕಥಾವಸ್ತುವಿನ ಯೋಜನೆಯಲ್ಲಿ ಆಡಂಬರವಾಗಲಿ ಪಾಂಡಿತ್ಯ ಪ್ರದರ್ಶನದ ಚಮತ್ಕಾರವಾಗಲಿ ಎಲ್ಲಿಯೂ ಕಾಣು ವಂತಿಲ್ಲ. ಆದುದರಿಂದ ಕಾವ್ಯದ ಭವ್ಯತೆಗೆ ಕುಂದುಂಟಾಗಲು ಅವಕಾಶವೊದಗಲಿಲ್ಲ. ಪಾತ್ರನಿರೂಪಣೆ ಕಥಾವಸ್ತುವಿನ ಕ್ರಮಿಕ ವಿಕಾಸಕ್ಕೆ ಪೂರ್ಣವಾಗಿ ಅನುಕೂಲವಾಗಿರುವುದರಿಂದ ಕಾವ್ಯದ ಸಫಲತೆಗೆ ಒಂದು ಮುಖ್ಯ ಕಾರಣವಾಗಿದೆ.

ಕೆಲವರು ರಾಮಚರಿತಮಾನಸವನ್ನು ಪುರಾಣವೆಂದು ಭಾವಿಸು ತ್ತಾರೆ. ತುಲಸೀದಾಸರೇ ಈ ಕಾವ್ಯವನ್ನು ಪುರಾಣವೆಂದು ಒಪ್ಪಿದರೂ ಅದನ್ನು ಮಹಾಕಾವ್ಯವೆಂದೇ ಶೀರ್ಷಿಕೆ ನೀಡಿದ್ದಾರೆ. ಒಂದು ದೃಷ್ಟಿಯಿಂದ ರಾಮಾಯಣ ಪುರಾಣವೇ ಹೌದು. ಹಾಗಿಲ್ಲದೆ ಹೋಗಿದ್ದರೆ ಅದು ಭಾರತೀಯ ಜೀವನದ ಅಭಿನ್ನ ಅಂಗವಾಗುತ್ತಿರಲಿಲ್ಲ. ಭವಿಷ್ಯದಲ್ಲಿಯೂ ನಮ್ಮ ಜೀವನದ ಆದರ್ಶಗಳನ್ನು ಸಂಪೂರ್ಣವಾಗಿ ಕಾವ್ಯದ ಮಾಧ್ಯಮದಿಂದ ನಿರೂಪಿಸುವುದು ಅಸಾಧ್ಯವೇ ಸರಿ. ರಾಮಚರಿತ ಮಾನಸದ ಶೈಲಿ ಮತ್ತು ಭಾಷೆ ಕಥೆಯ ಮಹತ್ವವನ್ನು ಹೆಚ್ಚಿಸಿ ರಸ

ವ್ಯಂಜನೆಗೆ ಸಹಕಾಂಗಳಾಗಿವೆ. ಈ ರೀತಿ ರಾಮಚರಿತಮಾನಸವು ಸರ್ವಾಂಗಸುಂದರವಾದ ಒಂದು ಮಹಾಕಾವ್ಯ.

ತುಲಸೀದಾಸರು ಮುಖ್ಯವಾಗಿ ಅಧ್ಯಾತ್ಮ ರಾಮಾಯಣ ಮತ್ತು ವಾಲ್ಮೀಕಿ ರಾಮಾಯಣಗಳಿಂದ ಕಾವ್ಯವಸ್ತುವನ್ನು ಆಯ್ದುಕೊಂಡು ರಾಮಚರಿತಮಾನಸವನ್ನು ನಿರ್ಮಿಸಿದ್ದಾರೆ. ಮೂಲಕಥಾಭಾಗದಲ್ಲಿ ಹೆಚ್ಚು ಬದಲಾವಣೆ ಮಾಡಲು ಪ್ರಯತ್ನಿಸಲಿಲ್ಲ. ಅಲ್ಪಸ್ವಲ್ಪ ಬದಲಾವಣೆ ಮಾಡಿರುವ ಕಡೆಗಳಲ್ಲಿ ಕವಿಯ ಕಲಾತ್ಮಕ ಚಮತ್ಕಾರವನ್ನು ಕಾಣಬಹುದು. ಇದಕ್ಕೆ ಕೆಲವು ನಿದರ್ಶನಗಳನ್ನು ಕೊಡುವುದು ಅಗತ್ಯ.

ಪ್ರಸನ್ನ ರಾಘವ ನಾಟಕದ ಆಧಾರದ ಮೇಲೆ ತುಲಸೀದಾಸರು ಸೀತಾರಾಮರ ವಿವಾಹದ ಮೊದಲು ಅವರ ಪರಸ್ಪರ ಸಂದರ್ಶನವನ್ನು ಚಿತ್ರಿಸಿದ್ದಾರೆ. ಇವರಿಬ್ಬರಲ್ಲಿ ಪೂರ್ವರಾಗವನ್ನು ಹುಟ್ಟಿಸಿರುವುದರಿಂದ ವಿವಾಹದ ಘಟನೆಗೆ ಒಂದು ಮೆರಗು ಕೊಟ್ಟಂತಾಗಿದೆ. ರಾಮನ ಜೊತೆಯಲ್ಲಿ ಲಕ್ಷ್ಮಣನೂ, ಸೀತೆಯ ಜೊತೆಯಲ್ಲಿ ಸಖಿಯರೂ ಇರುವುದರಿಂದ ಯಾವುದೇ ರೀತಿಯ ಅನೌಚಿತ್ಯಕ್ಕೆ ಅವಕಾಶವಿಲ್ಲ. ಪ್ರಸನ್ನ ರಾಘವ ನಾಟಕ ಮತ್ತು ಹನುಮನ್ನಾಟಕಗಳನ್ನನುಸರಿಸಿ ರಾಜಸಭೆಯಲ್ಲಿ ಧನುರ್ಭಂಗವನ್ನು ಚಿತ್ರಿಸಿರುವುದರಿಂದ ಈ ಪ್ರಸಂಗದಲ್ಲಿ ನಾಟಕೀಯ ಚಮತ್ಕಾರ ಉಂಟಾಗುತ್ತದೆ. ಜನಕನ ರಾಜಸಭೆಯಲ್ಲಿಯೇ ಪರಶುರಾಮ–ರಾಮರ ಸಂವಾದವೂ, ಲಕ್ಷ್ಮಣ–ಪರಶುರಾಮರ ಸಂವಾದವೂ–ಸುಂದರವಾಗಿವೆ. ಈ ಎರಡು ಸಂವಾದಗಳಿಂದ ಧನುರ್ಭಂಗದಲ್ಲಿ ಸೋತುಹೋದ ರಾಜರ ಮನಸ್ಸಿನ ಮೇಲೆ ವಿಶೇಷ ಫಲಕಾರಿಯಾದ ಪರಿಣಾಮವಾಗಲು ಸಾಧ್ಯವಾಯಿತು.

ಆನಂದ ರಾಮಾಯಣವನ್ನನುಸರಿಸಿ ತುಲಸೀದಾಸರು ಹನುಮಂತನು ಲಂಕೆಗೆ ಹೋದಕಾಲದಲ್ಲಿ ವಿಭೀಷಣನೊಂದಿಗೆ ಅವನ ಸಮಾಗಮವನ್ನು ತನ್ಮಯರಾಗಿ ವರ್ಣಿಸಿದ್ದಾರೆ. ಈ ಪ್ರಸಂಗವು ಮುಂದೆ ಬರುವ ಘಟನೆಗಳಿಗೆ, ಮುಖ್ಯವಾಗಿ ವಿಭೀಷಣನು ರಾಮನಿಗೆ ಶರಣಾಗತನಾಗಿ ಅನನ್ಯಭಕ್ತನಾಗುವುದಕ್ಕೆ ಸಹಕಾರಿಯಾಗುವುದು. ಪ್ರಸನ್ನರಾಘವ ನಾಟಕದ ಆಧಾರದ ಮೇಲೆ ಅಶೋಕವನದಲ್ಲಿ ಸೀತೆ-ತ್ರಿಜಟೆಯರ ಸಂವಾದವನ್ನು ಛದ್ಮವೇಷದಲ್ಲಿ ಹನುಮಂತನು ಕೇಳುವ ವರ್ಣನೆಯನ್ನು ಮಾಡಿರುವುದರಿಂದ ರಾಮನಲ್ಲಿರುವ ಸೀತೆಯ ಪ್ರೇಮದ ಭವ್ಯ ದೃಶ್ಯ ಉಪಸ್ಥಿತವಾಗುವುದು. ರಾಮ ರಾವಣರ ಯುದ್ಧದಲ್ಲಿ ಲಕ್ಷ್ಮಣನ ಮೇಲೆ ಶಕ್ತಿಯನ್ನು ಪ್ರಯೋಗಿಸುವವನು ರಾವಣನಲ್ಲ, ಮೇಘನಾದ. ಈ ಪರಿವರ್ತನೆಯಿಂದ ಶತ್ರುಪಕ್ಷದ ಬಲವು ರಾವಣನಲ್ಲಿ ಕೇಂದ್ರೀಭೂತವಾಗದೆ ವಿಸ್ತಾರಗೊಳ್ಳುವುದು. ವಿಭೀಷಣನ ಮೇಲೆ ರಾವಣನು ಪ್ರಯೋಗಿಸುವ ಶಕ್ತ್ಯಾಸ್ತ್ರವನ್ನು ರಾಮನು ತನ್ನ ಎದೆಯಮೇಲೆ ಕೊಳ್ಳುವುದರಿಂದ ಅವನ ಭಕ್ತ ವತ್ಸಲತೆಯ ಮಹಿಮೆ ಪ್ರಕಟಗೊಳ್ಳುವುದು. ಇನ್ನೊಂದು ಬಹಳ ಮುಖ್ಯವಾದ ವ್ಯತ್ಯಾಸ ಉತ್ತರಕಾಂಡದ ಕಥೆಯಲ್ಲಿ ಕಂಡುಬರುತ್ತದೆ. ವಾಲ್ಮೀಕಿ ರಾಮಾಯಣದಲ್ಲಿರುವ ದುಃಖಾಂತ ಪ್ರಸಂಗವನ್ನು ತೊರೆದು ತುಲಸೀದಾಸರು ಭಾರತೀಯ ಪರಂಪರೆಯಂತೆ ಕಥೆಯ ಸುಖಾಂತ ನಿರೂಪಣೆ ಮಾಡಿದ್ದಾರೆ. ಈ ರೀತಿಯಲ್ಲಿ ಕವಿಯು ಮಾಡಿರುವ ವ್ಯತ್ಯಾಸಗಳಿಂದ ಕಥಾವಸ್ತುವಿನ ಮಹತ್ವ ಹೆಚ್ಚಿದೆಯೇ ಹೊರತು ಕಡಿಮೆಯಾಗಿಲ್ಲ.

ರಾಮಚರಿತಮಾನಸದ ಕೆಲವು ಪ್ರಸಂಗಗಳಲ್ಲಿ ಸ್ವಲ್ಪ ಕೊರತೆಗಳೂ ದೃಷ್ಟಿ ಗೋಚರವಾಗುತ್ತವೆ. ಬಾಲಕಾಂಡದಲ್ಲಿ ಬರುವ

ಶಿವ ಪಾರ್ವತೀ ಸಂವಾದದಲ್ಲಿ ಪಾರ್ವತಿಯು ರಾಮ ಪಟ್ಟಾಭಿಷೇಕವಾದ ಮೇಲೆ ಬರುವ ಕಥೆಯನ್ನೂ, ಪ್ರಜೆಗಳೊಂದಿಗೆ ರಾಮನ ಸ್ವರ್ಗಾರೋಹಣದ ಕಥೆಯನ್ನೂ ಹೇಳುವಂತೆ ಶಿವನನ್ನು ಕೇಳುತ್ತಾಳೆ. ಆದರೆ ಈ ಪ್ರಶ್ನೆಗಳಿಗೆ ಉತ್ತರ ಕೊಡಲು ತುಲಸೀದಾಸರು ಮರೆತಿರುವುದು ಆಶ್ಚರ್ಯ. ಕಾವ್ಯಾರಂಭದಲ್ಲಿ ರಾಮಾವತಾರದ ಕಥೆಗಳ ದೀರ್ಘವರ್ಣನೆಗಳಲ್ಲಿ ಇಂತಹ ಕೆಲವು ಲೋಪಗಳಿವೆ. ಇದೇ ಪ್ರಕಾರದ ಕೆಲವು ಚಿಕ್ಕ ಪುಟ್ಟ ಅಸಂಗತಿಗಳು ಕಥಾಸುವಿಧಾನದಲ್ಲಿ ಕಂಡುಬಂದರೂ ಮುಖ್ಯ ಕಥೆಯ ಘನತೆಗೆ ಎಲ್ಲಿಯೂ ಧಕ್ಕೆಯುಂಟಾಗಿಲ್ಲ. ಅದರ ಭವ್ಯತೆಯ ಪ್ರಕಾಶ ಕುಂದಿಲ್ಲ.

ಪಾತ್ರ ನಿರೂಪಣೆ

ಮೇಲೆ ಹೇಳಿದಂತೆ ರಾಮಚರಿತಮಾನಸಕ್ಕೆ ಮುಖ್ಯ ಆಧಾರ ಗ್ರಂಥಗಳು–ಅಧ್ಯಾತ್ಮ ರಾಮಾಯಣ ಮತ್ತು ವಾಲ್ಮೀಕಿ ರಾಮಾಯಣ. ಈ ಮೂಲಗ್ರಂಥಗಳ ಕಥೆಯಲ್ಲಿ ಕೌಸಲ್ಯೆ, ಸೀತೆ, ಲಕ್ಷ್ಮಣ, ನಿಷಾದ, ಭರತ, ಶೂರ್ಪಣಖಿ, ಅಂಗದ ಮೊದಲಾದ ಪಾತ್ರಗಳಲ್ಲಿ ಕಂಡುಬರುವ ಭಾವಾತಿರೇಕದ ಮಾತುಗಳಿವೆ. ಆದರೆ ಈ ಭಾವಾತಿರೇಕಮಾನಸದ ಪಾತ್ರಗಳಲ್ಲಿ ಕಂಡುಬರುವುದಿಲ್ಲ ಅಧ್ಯಾತ್ಮ ರಾಮಾಯಣದಲ್ಲಿ ಕೌಸಲ್ಯೆಯು ರಾಮನನ್ನು ಕಾಡಿಗೆ ಹೋಗದಂತೆ ತಡೆಯುತ್ತಾಳೆ ಮತ್ತು ಅವಳ ಆಜ್ಞೆಯನ್ನು ಉಲ್ಲಂಘಿಸಿದರೆ ಪ್ರಾಣತ್ಯಾಗ ಮಾಡುವೆನೆಂದು ಹೇಳುತ್ತಾಳೆ. ಲಕ್ಷ್ಮಣ, ಸೀತೆ, ನಿಷಾದ ಮೊದಲಾದ ಪಾತ್ರಗಳೂ ತಮ್ಮ ಇಚ್ಛೆಗೆ ವಿರುದ್ಧ ಪರಿಸ್ಥಿತಿಗಳು ಉದ್ಭವಿಸಿದ ಸಮಯದಲ್ಲಿ ಪ್ರಾಣ ತ್ಯಜಿಸುವ ತೀರ್ಮಾನ ಮಾಡುವುದನ್ನು ನೋಡಬಹುದು. ಸಿಂಹಾಸನವನ್ನೇರಬೇಕೆಂದು ಕೈಕೇಯಿಯು ಭರತನನ್ನು ಬಲವಂತ

ಪಡಿಸಿದಾಗ ಅವನು ಅಗ್ನಿಯಲ್ಲಿ ಬಿದ್ದೋ ಅಥವಾ ವಿಷ ಸೇವಿಸಿಯೋ, ಇಲ್ಲವೆ ಕತ್ತಿಯಿಂದ ಶಿರಚ್ಛೇದನ ಮಾಡಿಕೊಂಡೋ ಪ್ರಾಣ ತ್ಯಜಿಸುವೆನೆಂದು ಹೇಳುತ್ತಾನೆ. ಚಿತ್ರಕೂಟದಲ್ಲಿ ಭರತನು ರಾಮನೊಂದಿಗೆ ತಾನೂ ಕಾಡಿನಲ್ಲಿಯೇ ವಾಸಿಸುವೆನೆಂದೂ. ರಾಮನು ಇದಕ್ಕೆ ಅನುಮತಿಯನ್ನು ಕೊಡದಿದ್ದರೆ ಪ್ರಾಣ ಬಿಡುವೆನೆಂದೂ ತಿಳಿಸುತ್ತಾನೆ. ತುಲಸೀದಾಸರು ತಮ್ಮ ಆಧಾರ ಗ್ರಂಥಗಳಲ್ಲಿರುವ ಈ ಪ್ರಸಂಗಗಳನ್ನು ತಮ್ಮ ಪಾತ್ರಗಳಲ್ಲಿ ಬರದಂತೆ ನೋಡಿಕೊಂಡಿದ್ದಾರೆ. ಇದರಿಂದ ಅಧ್ಯಾತ್ಮ ರಾಮಾಯಣದ ಅಂಧಾನುಕರಣದಿಂದಲೇ ಅವರು ತಮ್ಮ ಪಾತ್ರ ಗಳನ್ನು ಸೃಷ್ಟಿಸಿಲ್ಲವೆಂಬುದು ತಿಳಿಯುತ್ತದೆ.

ಈಗ ತುಲಸೀದಾಸರು ತಮ್ಮ ಕಾವ್ಯಗಳಲ್ಲಿ. ಮುಖ್ಯತಃ ರಾಮಚರಿತಮಾನಸದಲ್ಲಿ ಚಿತ್ರಿಸಿರುವ ಕೆಲವು ಪ್ರಮುಖ ಪಾತ್ರ ಗಳ ಸ್ವರೂಪವನ್ನು ಇಲ್ಲಿ ನಿರೂಪಿಸಿದೆ.

ರಾಮ : ಗೋಸ್ವಾಮಿ ತುಲಸೀದಾಸರು ನಿರ್ಮಿಸಿದ ಪಾತ್ರ ಗಳಲ್ಲಿ ರಾಮನು ಸರ್ವಶ್ರೇಷ್ಠ. ಲೋಕೋತ್ತರ ಗುಣಗಳಿಂದ ಕೂಡಿದ ಆದರ್ಶವ್ಯಕ್ತಿ. ಶಾರೀರಿಕ ಸೌಂದರ್ಯ. ಮಾನಸಿಕ ದೃಢತೆ. ನಿರ್ಮಲ ಹೃದಯ. ಅದಮ್ಯ ಉತ್ಸಾಹ. ಶೀಲ. ಗಾಂಭೀರ್ಯ. ಧರ್ಮಪ್ರೇಮ. ಬಂಧುಪ್ರೇಮ. ದಯೆ. ಧೈರ್ಯ. ಕ್ಷಮಾಶೀಲತೆ. ವಿನಯ. ಸಹನಶಕ್ತಿ. ತ್ಯಾಗ. ಉದಾರತೆ ಈ ಎಲ್ಲ ಉದಾತ್ತ ಗುಣಗಳ ಪ್ರತಿಮೂರ್ತಿ ಅವನು. ರಾಮಚರಿತ ಮಾನಸದ ಆರಂಭದಿಂದ ಕೊನೆಯವರೆಗೆ ಸಂಭವಿಸುವ ನಾನಾ ಘಟನೆಗಳಲ್ಲಿ ರಾಮನ ಗುಣಗಳು ಪ್ರತಿಬಿಂಬಿಸುವುವು. ಅವನ ಅಸಾಧಾರಣ ಚರಿತ್ರೆಯ ಪ್ರಭಾವ ಎಲ್ಲಾ ಪಾತ್ರಗಳಲ್ಲಿಯೂ ವ್ಯಕ್ತವಾಗುವುದು.

ರಾಮನ ಪಾತ್ರನಿರೂಪಣೆಯಲ್ಲಿ ಕವಿಯು ಆಸಕ್ತ ರಾಮನ ನಾಮಕರಣದ ಪ್ರಸಂಗದಿಂದಲೇ ಪ್ರಾರಂಭವಾಗಿ, ಬೆಳೆಯುತ್ತಾ ಹೋಗುತ್ತದೆ. ವಶಿಷ್ಠ ಮುನಿಗಳು ವಿಧಿಪೂರ್ವಕವಾಗಿ ನಾಮಕರಣ ಮಾಡಿ ರಾಮನಾಮದ ಗುಣಗಳನ್ನು ಹೀಗೆಂದು ವರ್ಣಿಸುತ್ತಾರೆ :

ಜೋ ಆನಂದ ಸಿಂಧು ಸುಖರಾಶೀ । ಸೀಕರ ತೈ ತ್ರೈಲೋಕ ಸುಪಾಸೀ ॥
ಸೋ ಸುಖಧಾಮ ರಾಮ ಅಸ ನಾಮಾ । ಅಖಿಲಲೋಕ ದಾಯಕ ವಿಸ್ರಾಮಾ ॥

"ರಾಮ" ಎಂಬ ಹೆಸರು ಮೂರು ಲೋಕಕ್ಕೆ ಸುಖ, ವಿಶ್ರಾಮ ಕೊಡುವ ಆನಂದ ಸಾಗರ ಮತ್ತು ಸುಖದ ಭಂಡಾರ.

ಹೃದಯ ಅನುಗ್ರಹ ಇಂದು ಪ್ರಕಾಸಾ । ಸೂಚಿತ ಕಿರನ ಮನೋಹರ ಹಾಸಾ ॥

ಬಾಲಕ ರಾಮನ ಮುಖದಿಂದ ಹೊರಸೂಸುವ ಮುಗುಳುನಗೆ ಅವನ ಹೃದಯದಲ್ಲಿರುವ ದಯೆಯೆಂಬ ಚಂದ್ರನ ಪ್ರಕಾಶವಾಗಿದೆ.

ಅವನ ಶ್ಯಾಮಲ ಶರೀರ 'ಕಾಮಕೋಟಿ ಛವಿ' ಯಂತೆ ಶೋಭಾಯಮಾನವಾಗಿದೆ. ಮಿಥಿಲಾನಗರದಲ್ಲಿ ರಾಮನ ರೂಪ ಸೌಂದರ್ಯವನ್ನು ನೋಡಿ ನೋಡಿ ಪುಲಕಿತರಾಗಿ ಆನಂದಾಶ್ರು ಸುರಿಸದ ನರನಾರಿಯರಿಲ್ಲ. ಇಷ್ಟೇಕೆ, ಜಟಾಧಾರಿಯಾಗಿ, ನಾರುಮಡಿಯನ್ನುಟ್ಟು ಲಕ್ಷ್ಮಣ ಸೀತೆಯರ ಒಡನೆ ಅಯೋಧ್ಯೆಯನ್ನು ಬಿಟ್ಟು ಅರಣ್ಯವಾಸಕ್ಕಾಗಿ ಹಳ್ಳಿಯ ಮಾರ್ಗವಾಗಿ ಹೋಗುತ್ತಿರುವ ರಾಮನ ಮನಮೋಹಕ ರೂಪವನ್ನು ನೋಡಿ ಹಳ್ಳಿಯ ಸ್ತ್ರೀ ಪುರುಷರು ತಮ್ಮ ತಮ್ಮ ಕೆಲಸಕಾರ್ಯಗಳನ್ನು

ಮರೆತು ನಿಂತಲ್ಲಿಯೇ ನಿಂತು ಬಿಡುವರು. ಆ ಜನರ ಆನಂದ ವನ್ನು ವರ್ಣನಾತೀತವೆಂದು ತುಲಸೀದಾಸರು ಹೀಗೆ ಹೇಳಿದ್ದಾರೆ:

ಬರನಿ ನ ಜಾಯಿ ದಸಾ ತಿನ್‌ಕೇರೀ। ಲಹಿ ಜನು ರಂಕನ್ಹ ಸುರಮನಿ ಢೇರೀ॥
ಏಕನ್ಹ ಏಕ ಬೋಲಿ ಸಿಖ ದೇಹೀಂ। ಲೋಚನ ಲಾಹು ಲೇಹು ಛನ ಏಹೀ॥
ರಾಮಹಿಂ ದೇಖಿ ಏಕ ಅನುರಾಗೇ। ಚಿತವತ ಚಲೇ ಜಾಹಿಂ ಸಂಗ ಲಾಗೇ॥
ಏಕ ನಯನ ಮಗ ಛವಿ ಉರ ಆನೀ। ಹೋಹಿಂ ಸಿಥಿಲ ತನಮನ ಬರಬಾನೀ॥

"ರಾಮನ ರೂಪವನ್ನು ನೋಡಿ ಆ ಜನರಿಗುಂಟಾದ ಆನಂದ ವರ್ಣಿಸಲಸದಳವಾದದ್ದು. ಅವರ ಸ್ಥಿತಿ ದರಿದ್ರನಿಗೆ ಸುರ ಲೋಕದ ಮಣಿ ದೊರೆತಂತಾಗಿತ್ತು. ಒಬ್ಬರನ್ನೊಬ್ಬರು ಹತ್ತಿರ ಕರೆದು ಒಂದು ಘಳಿಗೆ ರಾಮನನ್ನು ನೋಡಿ ಕಣ್ಣುಗಳ ಪ್ರಯೋಜನವನ್ನು ಪಡೆಯಬೇಕೆಂದು ಉಪದೇಶಿಸುತ್ತಿದ್ದರು. ಕೆಲವರು ರಾಮನನ್ನು ನೋಡಿ ಪ್ರೀತಿಯಿಂದ ತಮ್ಮನ್ನು ತಾವೇ ಮರೆತು ಅವನ ಹಿಂದೆ ಹಿಂದೆಯೇ ಹೊರಟುಹೋಗುತ್ತಿದ್ದರು. ಕೆಲವರು ತಮ್ಮ ಕಣ್ಣುಗಳ ಮೂಲಕ ರಾಮನ ರೂಪಕಾಂತಿ ಯನ್ನು ಹೃದಯಕ್ಕೆ ತಂದುಕೊಂಡು ತನುಮನ ವಚನಗಳಲ್ಲಿ ಶಿಥಿಲರಾಗುತ್ತಿದ್ದರು".

ಈ ರೀತಿಯಾಗಿ ರಾಮನ ಶರೀರಸೌಂದರ್ಯ, ಕೇವಲ ಶರೀರ ಸೌಂದರ್ಯವಲ್ಲ, ಅದು ಅವನ ನಿರ್ಮಲ ಹೃದಯದಲ್ಲಿ ಇರುವ ಪವಿತ್ರಪ್ರೇಮದ ಪ್ರತಿಫಲನ. ಆದುದರಿಂದಲೇ ಅವನನ್ನು ನೋಡಿದವರೆಲ್ಲ ಆನಂದ ಮತ್ತು ಭಾವಾವೇಶದಿಂದ ತಮ್ಮನ್ನು ತಾವೇ ಮರೆತುಬಿಟ್ಟರು.

ವಿಪತ್ಕಾಲದಲ್ಲಿಯೇ ವ್ಯಕ್ತಿಯ ಗುಣಗಳ ಪರೀಕ್ಷೆ ನಡೆಯುತ್ತದೆ. ಕೈಕೇಯಿ ಬೇಡಿದ ವರಗಳ ಕಾರಣದಿಂದ ರಾಮನು ತನ್ನ ಜೀವನದಲ್ಲಿ ಹಿಂದೆಂದೂ ಸಂಭವಿಸದ ದೊಡ್ಡ ವಿಪತ್ತನ್ನು ಎದುರಿಸಬೇಕಾಗುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನ ದಲ್ಲಿ ಇಂತಹ ಗಂಡಾಂತರವು ಒದಗಿದ್ದರೆ ಅವನ ಗತಿ ಏನಾಗು ತ್ತಿತ್ತೋ ಹೇಳುವುದು ಅಸಾಧ್ಯ. ಆದರೆ ತುಲಸೀರಾಮಾಯಣ ದಲ್ಲಿ ನಿರೂಪಿತವಾದ ರಾಮನ ಮನಸ್ಸಿನಲ್ಲಾಗಲಿ, ಮಾತುಗಳ ಲ್ಲಾಗಲಿ ಎಳ್ಳಿನಷ್ಟು ಕೋಪ, ಅಸಮಾಧಾನ, ಉದ್ವೇಗಗಳು ಕಾಣುವುದಿಲ್ಲ. ಶೋಕದಿಂದ ವಿಹ್ವಲನಾದ ತಂದೆಯನ್ನು ರಾಮನು ಸಂತೈಸುತ್ತಾ ಹೀಗೆನ್ನುತ್ತಾನೆ:

> ಅತಿ ಲಘು ಬಾತ್ ಲಾಗಿ ದುಖಪಾವಾ। ಕಾಹು ನ ಮೋಹಿ ಕಹಿ ಪ್ರಥಮ ಜನಾವಾ॥
> ಧನ್ಯ ಜನಮು ಜಗತೀತಲ ತಾಸೂ। ಪಿತಹಿ ಪ್ರಮೋದು ಚರಿತ ಸುನಿ ಜಾಸೂ॥
> ಚಾರಿ ಪದಾರಥ ಕರತಲ ತಾಕೇ। ಪ್ರಿಯ ಪಿತು ಮಾತು ಪ್ರಾಣ ಸಮ ಜಾಕೇ॥
> ಅಯಸು ಪಾಲಿ ಜನಮ ಫಲುಪಾಯೀ। ಇಹವುಂ ವೇಗಿಹಿ ಹೋವು ರಜಾಯೀ॥

"ಇಷ್ಟು ಚಿಕ್ಕ ಮಾತಿಗಾಗಿ ನೀವು ದುಃಖವೇಕೆ ಪಡಬೇಕು? ಈ ವಿಚಾರವನ್ನು ಯಾರೂ ಇಷ್ಟರವರೆಗೆ ನನಗೆ ತಿಳಿಸಲಿಲ್ಲ. ಯಾವ ಪುತ್ರನ ಗುಣಗಳನ್ನು ಕೇಳಿ ತಂದೆ ಸಂತೋಷ ಪಡುತ್ತಾನೆಯೋ. ಆ ಪುತ್ರನು ಧನ್ಯ. ಅವನ ಜನ್ಮ ಜಗತ್ತಿನಲ್ಲಿ ಸಫಲ. ತಂದೆ ತಾಯಿಗೆ ಪ್ರಿಯನಾದ ಮಗನಿಗೆ ನಾಲ್ಕು ಪದಾರ್ಥಗಳು (ಧರ್ಮ, ಅರ್ಥ. ಕಾಮ. ಮೋಕ್ಷ) ಕರತಲಾಮಲಕದಂತೆ ಪ್ರಾಪ್ತವಾಗು ವುವು. ಆದುದರಿಂದ, ಹೇ ಪಿತನೇ! ನನಗೆ ಆಜ್ಞೆಯನ್ನು ಕೊಡಿ.

ಜನ್ಮವನ್ನು ಸಫಲಗೊಳಿಸಿ ಬೇಗನೆ ಕಾಡಿನಿಂದ ಹಿಂತಿರುಗಿ ಬರುವೆನು ”.

ಭರತನ ವಿಚಾರದಲ್ಲಿ ರಾಮನ ಮನಸ್ಸು ಕಲುಷಿತವಾಗುವುದಿಲ್ಲ. ರಾಮನ ಹೃದಯದ ಪಾವಿತ್ರ್ಯತೆಯನ್ನು ಪುರಜನರ ಬಾಯಿಯಿಂದಲೇ ವ್ಯಕ್ತಪಡಿಸಿ ಕವಿಯು ತನ್ನ ಕಥಾನಾಯಕನ ಮಹತ್ವವನ್ನು ಇನ್ನೂ ಹೆಚ್ಚಿಸುತ್ತಾನೆ—“ ರಾಮ ಭರತು ಕಹುಂ ಪ್ರಾನಪಿಯಾರೇ ”, ರಾಮನು ಭರತನಿಗೆ ಪ್ರಾಣದಂತೆ ಪ್ರಿಯನಾಗಿದ್ದಾನೆ ಎಂದು ಒಬ್ಬ ನಾಗರಿಕ ಹೇಳಿದರೆ. ಇನ್ನೊಬ್ಬನು ಹೇಳುತ್ತಾನೆ :

ಚಂದು ಚವಯಿ ಬರು ಅನಲಕನ, ಸುಧಾ ಹೋಇ ಬಿಷತೂಲ ।
ಸಪನೇಹುಂ ಕಬಹುಂ ನ ಕರಹಿಂ ಕಛು, ಭರತು ರಾಮ ಪ್ರತಿಕೂಲ ॥

“ ಚಂದ್ರನು ಬೆಂಕಿಯ ಕಿಡಿಗಳನ್ನು ಸುರಿಸಿದರೂ, ಅಮೃತವು ವಿಷವಾದರೂ ಸ್ವಪ್ನದಲ್ಲಿಯೂ ಕೂಡ ಭರತನು ರಾಮನಿಗೆ ವಿರುದ್ಧವಾಗಿ ವರ್ತಿಸಲಾರ ”.

ರಾಮನ ಅಸಾಧಾರಣವಾದ ಔದಾರ್ಯವನ್ನು ಚಿತ್ರಕೂಟದಲ್ಲಿ ರಾಮನನ್ನು ಹಿಂತಿರುಗಿಸಿ ಕರೆದುಕೊಂಡು ಹೋಗುವುದಕ್ಕಾಗಿ ಭರತನು ಬಂದ ಕಾಲದಲ್ಲಿ ನಾವು ನೋಡಬಹುದು. ರಾಮನು ಮೊಟ್ಟಮೊದಲು ಕೈಕೇಯಿ ತಂಗಿದ್ದ ಬಿಡಾರಕ್ಕೆ ಬಂದು ಭೇಟಿ ಮಾಡುವನು :

ಪ್ರಥಮ ರಾಮ ಭೇಂಟೀ ಕೈಕೇಯೀ । ಸರಲ ಸುಭಾಯ
ಭಗತಿಮತಿ ಬೇಯೀ ॥
ಪಗ ಪರಿ ಕೀನ್ಹ ಪ್ರಬೋಧು ಬಹೋರೀ । ಕಾಲ ಕರಮ ಬಿಧಿ
ಸಿರಧರಿ ಖೋರೀ ॥

“ ಸ್ವಾಭಾವಿಕವಾದ ಸರಳತೆಯಿಂದಲೂ, ಭಕ್ತಿಯ ಬುದ್ಧಿ

ಯಿಂದಲೂ ರಾಮನು ಕೈಕೇಯಿಯನ್ನು ಮೊಟ್ಟಮೊದಲು ಭೇಟಿ ಮಾಡಿ, ಅವಳ ಚರಣಕ್ಕೆ ವಂದಿಸಿ ಕಾಲ, ಕರ್ಮ, ವಿಧಿಗಳ ತಲೆಯ ಮೇಲೆ ಎಲ್ಲಾ ದೋಷಗಳನ್ನು ಹೊರಿಸಿ ಸಮಾಧಾನ ಪಡಿಸಿದನು ".

ಇನ್ನಿತರ ತಾಯಿಯರನ್ನು ಹೀಗೆ ಸಂಬೋಧಿಸಿ ಹೇಳಿದನು :

"ಅಂಬ, ಈಸ ಅಧೀನ ಜಗು, ಕಾಹು ನ ದೇಯಿಯ ದೋಷು"

"ಹೇ ತಾಯಿ, ಈ ಜಗತ್ತಿನಲ್ಲಿ ಎಲ್ಲವೂ ಈಶ್ವರನ ಅಧೀನ ವಾಗಿದೆ, ಯಾರಮೇಲೂ ದೋಷವನ್ನು ಹೊರಿಸಬಾರದು".

ರಾಮನು ವಿನಯದ ಮೂರ್ತಿ. ಮಿಥಿಲಾನಗರದಲ್ಲಿ ಶಿವ ಧನುಸ್ಸನ್ನು ರಾಮನು ಮುರಿದಮೇಲೆ ಪರಶುರಾಮ ಅಲ್ಲಿಗೆ ಆಗಮಿಸುತ್ತಾನೆ. ಈ ಸಂದರ್ಭದಲ್ಲಿ ಪರಶುರಾಮ, ರಾಮ ಮತ್ತು ಲಕ್ಷ್ಮಣ ಇವರ ಮಧ್ಯದಲ್ಲಿ ನಡೆಯುವ ಮಾತುಕತೆಯ ಪ್ರಸಂಗ ಮನೋಹರವಾಗಿದೆ. ಲಕ್ಷ್ಮಣನ ಅವಿನಯದ ಮಾತು ಗಳನ್ನು ಕೇಳಿ ಪರಶುರಾಮನು ಕೋಪಾವೇಶದಿಂದ ಗರ್ಜಿಸು ತ್ತಾನೆ. ಇಂತಹ ಸನ್ನಿವೇಶದಲ್ಲಿ ರಾಮನು ಅತ್ಯಂತ ವಿನಯ ದಿಂದಲೂ ನಮ್ರತೆಯಿಂದಲೂ ಪರಶುರಾಮನನ್ನು ಸಮಾಧಾನ ಮಾಡುತ್ತಾನೆ. ಲಕ್ಷ್ಮಣನು ಮಾಡಿದ ತಪ್ಪಿಗಾಗಿ ತಾನೇ ಕ್ಷಮೆ ಯನ್ನು ಬೇಡುತ್ತಾನೆ.

ರಾಮನು ಎಷ್ಟು ವಿನಯಶೀಲನೋ ಅಷ್ಟೇ ಧೈರ್ಯಶಾಲಿ, ಸಾಹಸಿ, ವೀರ. ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಅವನ ಮನಸ್ಸು ವಿಚಲಿತವಾಗುವುದಿಲ್ಲ. ಅವನು ಧರ್ಮವನ್ನು ಬಿಟ್ಟು ಅಧರ್ಮದ ಮಾರ್ಗದಲ್ಲಿ ಕಾಲಿಡುವುದಿಲ್ಲ. ರಾಮನ ಜೀವನ ದಲ್ಲಿ ಕಾಣಬರುವ ಅಸಂಬದ್ಧ ಸಂಗತಿಗಳು ಎರಡೇ— ಶೂರ್ಪಣಖಿಯ ಕಿವಿ ಮೂಗುಗಳನ್ನು ಕೊಯ್ಯುವುದಕ್ಕೆ ಆಜ್ಞೆ

ಮಾಡುವುದು ಮತ್ತು ವಾಲಿಯನ್ನು ಅನುಚಿತ ರೀತಿಯಿಂದ ಕೊಲ್ಲುವುದು. ಆದರೆ ಈ ಎರಡು ಕೊರತೆಗಳಿಂದ ರಾಮನ ವ್ಯಕ್ತಿತ್ವದ ಕಳೆ ಕುಂದುವುದಿಲ್ಲ. ತಪ್ಪು ಮಾಡದ ಮನುಷ್ಯ. ಮನುಷ್ಯನಾಗಿರದೆ ದೇವತಾಪುರುಷನಾಗುತ್ತಾನೆ. ಅವನು ಹೇಗೆ ಆರಾಧ್ಯದೇವತೆಯೆಂಬುದನ್ನು ಮುಂದೆ ನಿರೂಪಿಸಿದೆ.

ಗೀತಾವಲಿ ರಾಮಾಯಣದಲ್ಲಿ ರಾಮನ ಸ್ವಭಾವದಲ್ಲಿ ಅತ್ಯಧಿಕ ಮಾಧುರ್ಯ ಮತ್ತು ಔದಾರ್ಯ ಗುಣಗಳನ್ನು ಕಾಣ ಬಹುದು. ಚಿತ್ರಕೂಟದಲ್ಲಿ ರಾಮನು ಸೀತೆಗೆ ಆಭರಣಗಳನ್ನು ತೊಡಿಸಿ, ಲಲಾಟದಲ್ಲಿ ತಿಲಕವನ್ನಿಟ್ಟು ಅಲಂಕರಿಸುವುದು, ಜಟಾಯು ಮತ್ತು ಶಬರಿಯರನ್ನು ತಂದೆ ತಾಯಿಗಳಂತೆ ಪ್ರೀತಿಸು ವುದು, ಸಾಮಾನ್ಯ ಪ್ರಜೆಗಳೊಂದಿಗೆ ಸೇರಿ ವಸಂತೋತ್ಸವವನ್ನು ಆಚರಿಸುವುದು, ಇತ್ಯಾದಿ ಇದಕ್ಕೆ ನಿದರ್ಶನ.

ಭರತ: ಅಯೋಧ್ಯಾ ಕಾಂಡದಲ್ಲಿ ಭರತನ ಶೀಲ ಸ್ವಭಾವ ಗಳು ಪೂರ್ಣರೂಪದಿಂದ ಪ್ರಕಟವಾಗುವುವು. ಭರತನ ಭ್ರಾತೃ ಪ್ರೇಮ ಅದ್ವಿತೀಯ. ಅನಾಯಾಸವಾಗಿಯೇ ಕೈಗೆ ಬಂದಿರುವ ರಾಜ್ಯವನ್ನು ಭರತನು ತಿರಸ್ಕರಿಸುವುದಲ್ಲದೆ ರಾಮನನ್ನು ಹಿಂತಿರುಗಿ ಕರೆತಂದು ರಾಜ್ಯವನ್ನು ಅವನ ಚರಣಾರವಿಂದದಲ್ಲಿ ಅರ್ಪಿಸಬೇಕೆಂದು ದೃಢಸಂಕಲ್ಪ ಮಾಡುತ್ತಾನೆ. ದಶರಥನು ಸ್ವರ್ಗಾರೋಹಣ ಮಾಡಿದಮೇಲೆ ಗುರು ವಸಿಷ್ಠರು, ಮಂತ್ರಿ ಗಳು, ಮಾತೆಯರು, ಹಿರಿಯರು ನಾನಾ ರೀತಿಯಲ್ಲಿ ಹಿತವಚನ ಗಳನ್ನು ಹೇಳಿ, ಧರ್ಮದ ರಹಸ್ಯವನ್ನು ತಿಳಿಸಿ ಸಿಂಹಾಸನ ವನ್ನೇರಬೇಕೆಂದು ಭರತನನ್ನು ಪ್ರಾರ್ಥಿಸುತ್ತಾರೆ. ಈ ಸಂದರ್ಭ ದಲ್ಲಿ ಕೌಸಲ್ಯೆಯ ಉಪದೇಶ ಉಲ್ಲೇಖನೀಯವಾಗಿದೆ:

ಕೌಸಲ್ಯಾ ಧರಿ ಧೀರಜು ಕಹಯೀ। ಪೂತ ಪಥ್ಯ ಗುರು ಆಯಸು ಅಹಯೀ ॥
ಸೋ ಆದರಿಅ ಕರಿಅ ಹಿತಮಾನೀ। ತಜಿಅ ಬಿಷಾದು ಕಾಲ ಗತಿ ಜಾನೀ ॥
ಬನ ರಘುಪತಿ, ಸುರಪುರ ನರನಾಹೂ। ತುಮ್ಹ ಏಹಿ ಭಾಂತಿ ತಾತ ಕದರಾಹೂ ॥
ಪರಿಜನ ಪ್ರಜಾ ಸಚಿವ ಸಬ ಅಂಬಾ। ತುಮಹೀ ಸುತ ಸಬ ಕಹಂ ಅವಲಂಬಾ ॥
ಲಖಿ ಬಿಧಿ ಬಾಮ ಕಾಲು ಕಠಿನಾಯೀ। ಧೀರಜು ಧರಹು ಮಾತು ಬಲಿ ಜಾಯೀ ॥
ಸಿರಧರಿ ಗುರು ಆಯುಸು ಅನುಸರಹೂ। ಪ್ರಜಾಪಾಲಿ ಪುರಜನ ದುಖ ಹರಹೂ ॥

"ಧೈರ್ಯವನ್ನು ತಂದುಕೊಂಡು ಕೌಸಲ್ಯೆಯು ಹೀಗೆಂದಳು: ಗುರುವಿನ ಆಜ್ಞೆ ಯುಕ್ತವಾದುದು. ಅದನ್ನು ಕಲ್ಯಾಣಕರವೆಂದು ಭಾವಿಸಿ ಆದರಿಸು. ಕಾಲಗತಿಯನ್ನು ತಿಳಿದು ದುಃಖವನ್ನು ತ್ಯಜಿಸು. ರಾಜನು ಸ್ವರ್ಗದಲ್ಲಿದ್ದಾನೆ. ರಘುಪತಿಯು ವನದಲ್ಲಿದ್ದಾನೆ. ನೀನು ಈ ರೀತಿ ಕೊರಗುತ್ತಿದ್ದೀಯೆ. ಪರಿವಾರದವರು, ಪ್ರಜೆಗಳು, ಮಂತ್ರಿಗಳು, ಮಾತೆಯರು, ಎಲ್ಲರಿಗೂ ಹೇ ಪುತ್ರ, ನೀನೊಬ್ಬನೇ ಆಧಾರ. ಅದೃಷ್ಟವು ಪ್ರತಿಕೂಲವಾಗಿದೆ. ಕಾಲವು ಕಠೋರವಾಗಿದೆ. ತಾಯಿಯಾದ ನಾನು ನಿನಗೆ ಹೇಳುವುದಿಷ್ಟೆ. ಗುರುವಿನ ಆಜ್ಞೆಯನ್ನು ಪಾಲಿಸು. ಪ್ರಜೆಗಳ, ಪುರಜನರ ದುಃಖವನ್ನು ಹೋಗಲಾಡಿಸು".

ಈ ಸಂದರ್ಭದಲ್ಲಿ ಭರತನು ಕೈಜೋಡಿಸಿ ಅಮೃತದಂತಹ ಮಾತುಗಳಿಂದ ಎಲ್ಲರಿಗೂ ಸರಿಯಾದ ಉತ್ತರ ಕೊಡುತ್ತಾನೆ. "ಗುರು, ತಂದೆ, ತಾಯಿ ಹೇಳುವ ಹಿತವಚನವನ್ನು ಕೇಳಿ ಸಂತೋಷದಿಂದ ಪಾಲಿಸಬೇಕಾದುದು ಪುತ್ರನ ಕರ್ತವ್ಯ. ಅದು

ಹಿತವೇ ಅಥವಾ ಅಹಿತವೇ ಎಂದು ವಿಚಾರ ಮಾಡುವುದರಿಂದ ಧರ್ಮರಕ್ಷೆಯು ಹೊಂದಿ ಪಾಪದ ಭಾರ ತಲೆಯಮೇಲೆ ಏರುತ್ತದೆ. ನೀವು ಕೊಡುವ ಸರಳ ಉಪದೇಶದಿಂದ ನನಗೆ ಒಳಿತಾಗುವುದು. ಇದನ್ನು ನಾನು ಚೆನ್ನಾಗಿ ಬಲ್ಲೆ. ಆದರೂ ನನ್ನ ಮನಸ್ಸಿಗೆ ಸಂತೋಷವಿಲ್ಲ. ತಾವೆಲ್ಲಾ ನನ್ನ ವಿನಂತಿಯನ್ನು ಆಲಿಸಿರಿ. ಆಮೇಲೆ ಉಪದೇಶ ಕೊಡುವಿರಂತೆ. ನಿಮ್ಮ ಮಾತುಗಳಿಗೆ ಉತ್ತರ ಕೊಡುತ್ತಿದ್ದೇನೆ: ಇದು ದೊಡ್ಡ ಅಪರಾಧ. ತಾವೆಲ್ಲಾ ಸಜ್ಜನರು. ಸಜ್ಜನರಾದವರು ದುಃಖೀಜನರ ಗುಣದೋಷಗಳನ್ನು ಲೆಕ್ಕಿಸುವುದಿಲ್ಲ. ತಂದೆ ಸ್ವರ್ಗದಲ್ಲಿದ್ದಾರೆ. ಸೀತಾರಾಮರು ಕಾಡಿನಲ್ಲಿದ್ದಾರೆ. ನಾನು ರಾಜ್ಯವಾಳಬೇಕೆಂದು ನೀವು ಹೇಳು ತ್ತಿದ್ದೀರಿ. ಇದರಿಂದ ನನಗೆ ಒಳ್ಳೆಯದಾಗುವುದೇ? ನಿಮ್ಮೆಲ್ಲರ ಕಾರ್ಯಸಾಧಿಸುವುದೇ? ಸೀತಾರಾಮರ ಸೇವೆಯಿಂದಲೇ ನನ್ನ ಉದ್ಧಾರ. ದುಷ್ಟತಾಯಿಯ ಕಾರಣದಿಂದ ನಾನು ಈ ಸೇವೆಯ ಅವಕಾಶವನ್ನು ಕಳೆದುಕೊಂಡಿದ್ದೇನೆ. ಇದು ನಾನು ಚೆನ್ನಾಗಿ ಯೋಚಿಸಿ ತಿಳಿದುಕೊಂಡ ವಿಚಾರ. ಹೇಗೆ ವಸ್ತ್ರವಿಲ್ಲದಿದ್ದರೆ ಆ ಭೂಷಣಗಳು ವ್ಯರ್ಥವೋ, ಹೇಗೆ ಬ್ರಹ್ಮವಿಚಾರವಿಲ್ಲದ ವೈರಾಗ್ಯ ವ್ಯರ್ಥವೋ, ಹಾಗೆಯೇ ಸೀತೆ, ರಾಮ ಮತ್ತು ಲಕ್ಷ್ಮಣರಿಲ್ಲದ ಈ ಲೋಕಸಮಾಜವು ವ್ಯರ್ಥ. ರೋಗೀಶರೀರಕ್ಕೆ ಭೋಗಗಳೆಲ್ಲ ವ್ಯರ್ಥ. ಭಗವದ್ಭಕ್ತಿ ಇಲ್ಲದ ಜಪ, ಯೋಗ ಇವೆಲ್ಲ ವ್ಯರ್ಥ. ಜೀವವಿಲ್ಲದ ಸುಂದರ ಶರೀರ ವ್ಯರ್ಥ. ಅದೇ ರೀತಿ, ರಾಮ ನಿಲ್ಲದಿದ್ದರೆ ನನ್ನ ಸರ್ವಸ್ವವೂ ವ್ಯರ್ಥ".

ರಾಮನ ವಿಚಾರದಲ್ಲಿ ತನ್ನ ಮನಸ್ಸಿನಲ್ಲಿರುವ ಪ್ರೇಮದ ಕಾಠಿಣ್ಯವನ್ನು ಭರತನು ವರ್ಣಿಸುವ ವಿಧಾನ ಎಷ್ಟು ಅಸಾಧಾರಣವಾದದ್ದು!

ಕಾರನ ತೆಂ ಕಾರಜು ಕಠಿನ ಹೋಯಿ ದೋಷು ನಹಿಂ ಮೋರ।
ಕುಲಿಸ ಅಸ್ಥಿ ತೆಂ ಉಪಲ ತೆಂ ಲೋಹ ಕರಾಲ ಕಠೋರ॥

"ಕಾರಣಕ್ಕಿಂತ ಕಾರ್ಯ ಕಠಿಣ. ಇದರಲ್ಲಿ ನನ್ನದೇನೂ ತಪ್ಪಿಲ್ಲ. ಮೂಳೆಗಿಂತ ವಜ್ರಾಯುಧ ಕಠೋರ. ಕಲ್ಲಿಗಿಂತ ಕಬ್ಬಿಣ ಬಹಳ ಕಠೋರ". ಇದರ ಧ್ವನ್ಯಾರ್ಥ ಬಹಳ ಸುಂದರವಾಗಿದೆ. ಕೈಕೇಯಿಯ ಪುತ್ರನಾದುದರಿಂದ ಭರತನ ಜನ್ಮಕ್ಕೆ ಅವಳೇ ಕಾರಣ. ಮತ್ತು ಭರತನೇ ಕಾರ್ಯ. ಆದ್ದರಿಂದ ಕೈಕೇಯಿಯ ಕಠೋರತೆಗಿಂತ ಭರತನ ಸ್ವಭಾವದಲ್ಲಿ ಕಠೋರತೆ ಹೆಚ್ಚು. ಹೀಗೆ ಭರತನು ಗುರುಗಳ, ಮಂತ್ರಿಗಳ ಮತ್ತು ಮಾತೆಯರ ಉಪದೇಶವನ್ನು ಕೇಳಿ ತನ್ನ ಸಂಕಲ್ಪವನ್ನು ಬದಲಾಯಿಸಲಿಲ್ಲ. ಇದರಲ್ಲಿ ತಪ್ಪೇನೂ ಕಾಣದು.

ರಾಮನ ಭೇಟಿಗಾಗಿ ಕಾಡಿನಲ್ಲಿ ಹೋಗುತ್ತಿರುವಾಗ ಭರತನ ಭ್ರಾತೃಭಕ್ತಿಯ ಉಜ್ವಲ ಸ್ವರೂಪವನ್ನು ನೋಡಿ ಯಾರ ಹೃದಯವಾದರೂ ಕರಗದಿರದು! ಪ್ರಯಾಣಕ್ಕೆ ನಾನಾ ವಾಹನಗಳು ಸಿದ್ಧವಾದುವು. ಆದರೆ ಭರತನು ಕಾಲುನಡಿಗೆಯಲ್ಲಿ ಪ್ರಯಾಣವನ್ನು ಆರಂಭಿಸುತ್ತಾನೆ. ಏಕೆಂದರೆ—

ವನ ಸಿಯ ರಾಮು ಸಮುಝಿ ಮನ ಮಾಹೀಂ।
ಸಾನುಜ ಭರತ ಪಯಾದೆಹಿ ಜಾಹೀಂ॥

"ಸೀತಾರಾಮರು ವನವಾಸ ಮಾಡುತ್ತಿರುವುದನ್ನು ಮನಸ್ಸಿನಲ್ಲಿಯೇ ಸ್ಮರಿಸಿ ಭರತನು ಸಹೋದರ ಶತ್ರುಘ್ನನೊಂದಿಗೆ ಕಾಲುನಡಿಗೆಯಲ್ಲಿಯೇ ಹೊರಟನು".

ಇದನ್ನು ಕೌಸಲ್ಯೆಯು ನೋಡಿ ತನ್ನ ಪಲ್ಲಕ್ಕಿಯನ್ನು ನಿಲ್ಲಿಸಿ ಹೀಗೆಂದಳು—

ತಾತ ಚಢಹು ರಥ ಬಲಿ ಮಹತಾರೀ। ಹೋಇಹಿ ಪ್ರಿಯ
ಪರಿವಾರು ದುಖಾರೀ॥

ತುಮ್ಹರೇ ಚಲತ ಚಲಿಹಿ ಸಬುಲೋಗೂ। ಸಕಲ ಸೋಕ ಕೃಸ
ನಹಿ ಮಗಜೋಗೂ॥
ಸಿರಧರಿ ವಚನ ಚರನ ಸಿರುನಾಯೀ। ರಥ ಚಢಿ ಚಲತ ಭಯೀ
ದೋವು ಭಾಯೀ॥

"ಹೇ ಮಗನೇ, ರಥವನ್ನೇರು. ಇಲ್ಲವಾದರೆ ಎಲ್ಲರಿಗೂ ದುಃಖವಾಗುವುದು. ನೀನು ಕಾಲುನಡಿಗೆಯಲ್ಲಿ ಹೋಗುವುದನ್ನು ನೋಡಿ ಎಲ್ಲರೂ ಹಾಗೆಯೇ ಮಾಡುವರು. ಎಲ್ಲರೂ ಶೋಕ ದಿಂದ ಕೃಶರಾಗಿದ್ದಾರೆ. ಹಾದಿ ನಡೆಯಲು ಶಕ್ತರಲ್ಲ". ಆಗ ಭರತನು ಮಾತೃವಚನವನ್ನು ಶಿರಸಾವಹಿಸಿ, ಅವರ ಕಾಲಿಗೆ ನಮಸ್ಕರಿಸಿ, ಶತ್ರುಘ್ನನೊಡನೆ ರಥವನ್ನೇರಿ ಹೊರಟನು.

ರಾಮನು ಹೋಗುವಾಗ ಎಲ್ಲೆಲ್ಲಿ ಹೆಜ್ಜೆ ಇಟ್ಟಿದ್ದನೋ, ಎಲ್ಲೆಲ್ಲಿ ಕುಳಿತಿದ್ದನೋ, ಎಲ್ಲೆಲ್ಲಿ ಮಲಗಿ ನಿದ್ದೆ ಮಾಡಿದ್ದನೋ ಅಲ್ಲಲ್ಲಿ ಭರತನು ನಿಂತು, ಆ ಸ್ಥಳಗಳಿಗೆ ವಂದಿಸಿ ಮುಂದೆ ಹೋಗು ತ್ತಿದ್ದನು. ತ್ರಿವೇಣಿ ಸಂಗಮವನ್ನು ಸೇರಿ ಆ 'ತೀರ್ಥರಾಜ' ನನ್ನು ಈ ರೀತಿ ಪ್ರಾರ್ಥಿಸುವನು—

ಅರಥ ನ ಧರಮ ನ ಕಾಮರುಚಿ ಗತಿ ನ ಚಹಮಂ ನಿರಬಾನ್।
ಜನಮ ಜನಮ ರತಿ ರಾಮಪದ ಯಹ ವರದಾನು ನ ಆನ್॥

"ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿ ನನಗೆ ರುಚಿಯೂ ಇಲ್ಲ ಆಸೆಯೂ ಇಲ್ಲ. ಜನ್ಮ ಜನ್ಮದಲ್ಲಿಯೂ ಶ್ರೀರಾಮನ ಚರಣಾರವಿಂದಗಳಲ್ಲಿ ಪ್ರೇಮ ಒಂದಿದ್ದರೆ ಸಾಕು. ಈ ವರವನ್ನು ದಯಪಾಲಿಸು. ಬೇರೇನೂ ಬೇಡ.

ಚಿತ್ರಕೂಟದಲ್ಲಿ ಭರತನು ವಿಶಾಲ ಸೇನೆಯೊಂದಿಗೆ ಬರುತ್ತಿರು ವುದನ್ನು ನೋಡಿ ಲಕ್ಷ್ಮಣನಿಗೆ ಭರತನ ವಿಚಾರದಲ್ಲಿ ಸಂದೇಹ ವುಂಟಾಗುತ್ತದೆ. ಆಗ ರಾಮನು ಲಕ್ಷ್ಮಣನ ಭ್ರಮೆಯನ್ನು ಹೋಗಲಾಡಿಸಲು ಹೀಗೆನ್ನುತ್ತಾನೆ.

ಭರತಹಿ ಹೋಇಯ ನ ರಾಜಮದು ವಿಧಿ ಹರಿಹರಪದ ಪಾಯಿ।
ಕಬಹುಂ ಕಿ ಕಾಂಜೀ ಸೀಕರನಿ ಛೀರ ಸಿಂಧು ಬಿನಸಾಯಿ॥

"ಬ್ರಹ್ಮ, ವಿಷ್ಣು, ಶಿವರ ಪದವಿ ಪಡೆದರೂ ಭರತನಲ್ಲಿ ರಾಜಮದ ವುಂಟಾಗಲಾರದು. ಒಂದು ತೊಟ್ಟು ನೀರುಮಜ್ಜಿಗೆಯಿಂದ ಕ್ಷೀರಸಾಗರವು ಕೆಡುವುದೇ?" ಬ್ರಹ್ಮನ ಸೃಷ್ಟಿಯಲ್ಲಿ ಭರತನಿಗೆ ಸಮನಾದ ವ್ಯಕ್ತಿಯನ್ನು ಯಾರೂ ನೋಡಿಲ್ಲ, ಕೇಳಿಯೂ ಇಲ್ಲ.

ಸುನಹು ಲಖನ ಭಲ ಭರತ ಸರೀಸಾ। ವಿಧಿ ಪ್ರಪಂಚ ಮಹಂ
ಸುನಾ ನ ದೀಸಾ॥

ರಾಮನ ಧರ್ಮನಿಷ್ಠೆ ದೊಡ್ಡದೋ ಅಥವಾ ಭರತನದೋ ಹೇಳಲು ಸಾಧ್ಯವಿಲ್ಲ! ಎಷ್ಟು ವಿಧವಾಗಿ ಪ್ರಾರ್ಥಿಸಿದರೂ ರಾಮನು ಹಿಂತಿರುಗುವುದಕ್ಕೆ ಒಪ್ಪದಿದ್ದುದರಿಂದ ನಿರುಪಾಯನಾಗಿ ಭರತನು ಶ್ರದ್ಧಾಭಕ್ತಿಗಳಿಂದ ರಾಮನ ಪಾದುಕೆಗಳನ್ನು ಪಡೆದು ಹಿಂದಿರುಗಿದನು. ಆದರೆ ಅಯೋಧ್ಯೆಗೆ ಹೋಗದೆ ನಂದಿಗ್ರಾಮದಲ್ಲಿಯೇ ನೆಲಸಿ ರಾಮನ ಪಾದುಕೆಗಳ ಹೆಸರಿನಿಂದ ರಾಜ್ಯಭಾರ ನಡೆಸಿದನು.

ಒಂದೇ ಒಂದು ವಾಕ್ಯದಲ್ಲಿ ಭರತನ ಗುಣಗಳ ಮಹಿಮೆಯನ್ನು ವರ್ಣಿಸುತ್ತಾ ತುಲಸೀದಾಸರು "ಭರತ ಭರತಸಮ ಜಾನಿ"—ಭರತನಿಗೆ ಸಮನಾದವನು ಭರತನೇ ಎಂದು ಹೇಳಿರುವುದು ಎಷ್ಟು ದಿವ್ಯವಾದ ಮಾತು!

ಇತರ ಪಾತ್ರಗಳು : ಲಕ್ಷ್ಮಣನ ಭ್ರಾತೃಪ್ರೇಮ ಭರತನಷ್ಟು ಉಜ್ವಲ ಮತ್ತು ಭವ್ಯವಾಗಿಲ್ಲ. ಆದರೂ ನಿಷ್ಠೆಯ ದೃಷ್ಟಿಯಿಂದ ಎಳ್ಳಷ್ಟು ವ್ಯತ್ಯಾಸವಿಲ್ಲ. ಯಾವ ರೀತಿಯಲ್ಲಿ ಭರತನು ತನ್ನ ಸರ್ವಸ್ವವನ್ನು ರಾಮನ ಚರಣಾರವಿಂದಗಳಲ್ಲಿ ಅರ್ಪಿಸಿರುವನೋ ಅದೇ ರೀತಿಯಲ್ಲಿ ಲಕ್ಷ್ಮಣನೂ ರಾಮನ ಸೇವೆಗಾಗಿಯೇ ತನ್ನ

ಜೀವನವನ್ನು ಮೀಸಲಾಗಿಟ್ಟಿದ್ದಾನೆ. ಭರತನಂತೆಯೇ ಅವನ ಹೃದಯ ಪರಿಶುದ್ಧವಾಗಿದೆ. ನಿರ್ಭಯತೆ, ನಿರ್ಮಲತೆ, ನಿಸ್ಪೃಹತೆ, ಇತ್ಯಾದಿ ಗುಣಗಳು ಇಬ್ಬರಲ್ಲೂ ಸಮಾನವಾಗಿವೆ. ವ್ಯತ್ಯಾಸವಿರುವುದು ಸ್ವಭಾವದಲ್ಲಿ ಮತ್ತು ವ್ಯವಹಾರದಲ್ಲಿ. ಲಕ್ಷ್ಮಣನದು ದುಡುಕುವ ಸ್ವಭಾವ. ತಾಳ್ಮೆ, ಸಂಯಮ ಅವನಲ್ಲಿ ಕಡಿಮೆ. ಕ್ಷಮಾದಾನ ಅವನಿಗೆ ತಿಳಿಯದು. ಜಿಂಕೆಯಂತಹ ಸ್ವಭಾವ ಅವನದು. ಅವನಲ್ಲಿ ಕೋಮಲತೆಗೆ ಅವಕಾಶವಿಲ್ಲ. ತಾಯಿ, ತಂದೆ, ಪತ್ನಿ, ಪರಿಜನ, ಪುರಜನ ಯಾರೂ ಅವನಿಗೆ ಬೇಕಾಗಿಲ್ಲ. ರಾಮನ ಸೇವೆಯೇ ಅವನ ಜೀವನದ ಗುರಿ. ಅನನ್ಯತೆಯ ಪರಮಾವಧಿ ಅವನು.

ದಶರಥನ ಪಾತ್ರ ನಿರೂಪಣೆಯಲ್ಲಿ ತುಲಸೀದಾಸರ ಧಾರ್ಮಿಕ ಬುದ್ಧಿಯ ಪ್ರತಿಬಿಂಬವನ್ನು ನೋಡಬಹುದು. ವಚನಬದ್ಧನಾದುದರಿಂದ ದಶರಥನು ತನ್ನ ಇಚ್ಛೆಗೆ ವಿರುದ್ಧವಾಗಿ ವರ್ತಿಸಿದನು. ತನ್ನ ಇಚ್ಛೆಗೆ ವಿರುದ್ಧವಾದುದನ್ನು ತಡೆಯಲು ಅಸಮರ್ಥನಾದನು. ಅವನಲ್ಲಿರುವ ಸತ್ಯನಿಷ್ಠೆಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಏಕೆಂದರೆ, ಅವನೇ ತನ್ನ ಕುಲಪರಂಪರೆಯಿಂದ ಬಂದಿರುವ ಆದರ್ಶವನ್ನು ತಾನೇ ಘೋಷಿಸುತ್ತಾನೆ:

> "ರಘುಕುಲ ರೀತಿ ಸದಾಚಲಿ ಆಯೀ। ಪ್ರಾನಜಾಯಿ ಬರು
> ವಚನುನ ಜಾಯೀ"

"ಪ್ರಾಣ ಹೋದರೂ ಮಾತು ಹೋಗುವಂತಿಲ್ಲ, ಇದು ರಘುಕುಲದ ರೀತಿ".

ಆದರೂ ದಶರಥನಲ್ಲಿ ಸತ್ಯಸಂಧನಾಗಿರಬೇಕಾದ ಧೈರ್ಯ ಮತ್ತು ದೃಢತೆಗಳಿಲ್ಲ. ಭರತನು ಅಯೋಧ್ಯೆಯಲ್ಲಿಲ್ಲದ ವೇಳೆಯಲ್ಲಿ ಅವಸರದಿಂದ ರಾಮನಿಗೆ ಯುವರಾಜ ಪಟ್ಟಾಭಿಷೇಕ

ಮಾಡುವುದಕ್ಕೆ ಕಾರಣವೇನೆಂಬುದು ಸ್ಪಷ್ಟವಾಗಿಲ್ಲ. ಮಂಥರೆಯು ಬಂದು ತಿಳಿಸುವವರೆಗೆ ಕೈಕೇಯಿಗೆ ಯುವರಾಜ ಪಟ್ಟಾಭಿಷೇಕದ ಸಮಾಚಾರ ತಿಳಿಯದಿರುವುದಕ್ಕೆ ಕಾರಣವೇನೆಂದು ಗೊತ್ತಾಗುವುದಿಲ್ಲ. ತುಲಸೀದಾಸರು ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಪಟ್ಟಿಲ್ಲ.

ರಾಮಭಕ್ತರಾದ ತುಲಸೀದಾಸರು ರಾವಣನ ಪಾತ್ರನಿರೂಪಣೆಯಲ್ಲಿ ಹೆಚ್ಚಿನ ಕುಶಲತೆಯನ್ನು ತೋರಿಸಿಲ್ಲ. ರಾವಣ ವೀರ, ಸಾಹಸಿ, ವಾಕ್‌ಪಟು, ವಿನೋದಪ್ರಿಯ, ದುರಾಗ್ರಹ, ದಂಭ ಅಭಿಮಾನವಿದ್ದರೂ ಆತ್ಮವಿಶ್ವಾಸವುಳ್ಳವನು. ವಿಭೀಷಣ ರಾಮನ ಅನನ್ಯಭಕ್ತ. ಆದುದರಿಂದ ಅವನ ರಾಜನೈತಿಕ ವ್ಯವಹಾರದಲ್ಲಿ ಭಕ್ತಿಯ ಪ್ರಭಾವವೇ ಹೆಚ್ಚು. ಹನುಮಂತನನ್ನು ತುಲಸೀದಾಸರು ದಾಸ್ಯಭಕ್ತಿಯ ಪ್ರತಿಮೂರ್ತಿಯಾಗಿ ಚಿತ್ರಿಸಿದ್ದಾರೆ. ವಾಲ್ಮೀಕೀ ರಾಮಾಯಣದ ಹನುಮಂತನಲ್ಲಿರುವ ಎಲ್ಲ ಗುಣಗಳನ್ನೂ ಇಲ್ಲಿ ಕಾಣಬಹುದು. ಅವನು ಅಸಾಧಾರಣ ವೀರ, ಸಾಹಸಿ, ಬುದ್ಧಿವಂತ, ಜಿತೇಂದ್ರಿಯ, ನಿಸ್ವಾರ್ಥ ಸೇವೆಯ ಪ್ರತೀಕ. ಅಂಗದನೂ ರಾಮಭಕ್ತನು ; ನಿರ್ಮಲ ಹೃದಯವುಳ್ಳ ಧಾರ್ಮಿಕ ವ್ಯಕ್ತಿ ಅವನು.

ಪುರುಷ ಪಾತ್ರಗಳ ನಿರೂಪಣೆಯಲ್ಲಿ ತುಲಸೀದಾಸರು ತೋರಿಸಿರುವ ಶ್ರದ್ಧೆ, ಕಲ್ಪನಾಶಕ್ತಿ, ಕೌಶಲಗಳು ಸ್ತ್ರೀಪಾತ್ರಗಳ ರಚನೆಯಲ್ಲಿ ಕಂಡುಬರುವುದಿಲ್ಲ. ಸೀತೆ ಕಥಾನಾಯಕಿ. ಸ್ತ್ರೀಪಾತ್ರಗಳಲ್ಲಿ ಅವಳ ಸ್ಥಾನ ಮುಖ್ಯ. ಪ್ರಾಚೀನ ಕಾವ್ಯಗಳಲ್ಲಿ ಚಿತ್ರಿತವಾಗಿರುವ ಸೀತೆಯ ಸ್ವರೂಪವನ್ನು ತುಲಸೀದಾಸರು ಬದಲಾಯಿಸಲು ಪ್ರಯತ್ನಪಟ್ಟಂತೆ ಕಾಣುವುದಿಲ್ಲ. ಅವಳು ಶೀಲ, ವಿನಯ, ಲಜ್ಜೆ ಮತ್ತು ಆತ್ಮಸಮರ್ಪಣೆಯ ಪ್ರತೀಕವಾದ ಆದರ್ಶನಾರಿ.

ಸೇವೆಯೇ ಅವಳ ಜೀವನದ ಏಕಮಾತ್ರ ಗುರಿ. ಅಯೋಧ್ಯೆಯಿಂದ ಹೊರಟು ರಾಮ, ಸೀತೆ, ಲಕ್ಷ್ಮಣರು ವನಕ್ಕೆ ಅಭಿಮುಖವಾಗಿ ಹೋಗುತ್ತಿದ್ದಾಗ, ಮಾರ್ಗಾಯಾಸದಿಂದಲೂ ಬಿಸಿಲಿನ ಬೇಗೆಯಿಂದಲೂ ಮೂವರೂ ಸ್ವಲ್ಪ ವಿಶ್ರಾಂತಿಗಾಗಿ ತಂಗಿದರು. ಆಗ ಕೋಮಲಾಂಗಿನಿ, ಪತಿಪರಾಯಣೆ ಸೀತೆಯ ಮನೋಹರ ಚಿತ್ರವನ್ನು ತುಲಸೀದಾಸರು ಈ ರೀತಿ ನಮ್ಮ ಮುಂದೆ ತಂದು ನಿಲ್ಲಿಸುತ್ತಾರೆ :

> ಪುರತೇಂ ನಿಕಸೀ ರಘುವೀರವಧೂ, ಧರ ಧೀರ ದಯೇ ಮಗಮೇ ಡಗ ದ್ವೈ,
> ಝಲಕೀಂ ಭರಿ ಭಾಲ ಕನೀ ಜಲಕೀ, ಪುಟ ಸೂಖಿಗಯೇ ಮಧುರಾಧರ ವ್ವೈ,
> ಫಿರಿ ಬೂಝತಿ ಹೈಂ "ಚಲನೋ ಅಬ ಕೇತಿಕ ಪರ್ಣಕುಟೀ ಕರಿ ಹೌ ಕಿತ ಹ್ವೈ?"
> ತಿಯಕೀ ಲಖಿ ಆತುರತಾ ಪಿಯಕೀ ಅಂಖಿಯಾಂ ಅತಿ ಚಾರು ಚಲೀ ಜಲ ಚ್ವೈ ॥
> "ಜಲಕೋ ಗಯೆಲಕ್ಖನ, ಹೈ ಲರಿಕಾ, ಪರಿಖೌ, ಪಿಯ! ಛಾಹ ಘರೀಕ ಹ್ವೈಠಾಢೇ,
> ಪೋಂಛಿ ಪಸೇವು, ಬಯಾರಿ ಕರೌಂ, ಅರು ಪಾಯ ಪಖಾರಿ ಹೌಂ ಭೂಭುರಿಡಾಢೇ,"
> ತುಲಸೀ ರಘುವೀರ ಪ್ರಿಯಾಸ್ರಮ ಜಾನಿಕೈ ಬೈಠಿ ಬಿಲಂಬ ಲೌಂ ಕಂಟಕ ಕಾಢೇ,
> ಜಾನಕಿ ನಾಹ ಕೋ ನೇಹ ಲಖ್ಯೋ, ಪುಲಕೋ ತನು, ಬಾರಿ ಬಿಲೋಚನ ಬಾಢೇ ॥

"ರಘುವೀರನ ವಧು ಸೀತೆ ನಗರದಿಂದ ಹೊರಟು, ಸಾಹಸಪಟ್ಟು ಎರಡು ಹೆಜ್ಜೆಗಳನ್ನಿಟ್ಟಿದ್ದಾಳಷ್ಟೆ. ಲಲಾಟದಲ್ಲಿ ಬೆವರಿನ ಕಣಗಳು ಮಿಂಚಿದವು. ಮಧುರವಾದ ಅಧರಗಳು ಒಣಗಿದವು. ಆಗ ಅವಳು ಪತಿಯನ್ನು ಕೇಳುತ್ತಾಳೆ 'ಇನ್ನೆಷ್ಟು ದೂರ

ನಡೆಯಬೇಕು? ಪರ್ಣಕುಟೀರ ಎಲ್ಲಿ ರಚಿಸುವಿರಿ?' ಪತ್ನಿಯ ಆತುರತೆಯನ್ನು ನೋಡಿ ರಾಮನ ಕಣ್ಣುಗಳಲ್ಲಿ ನೀರು ಹರಿಯಿತು".

ಸೀತೆ ಪುನಃ ಹೇಳುತ್ತಾಳೆ—"ನೀರು ತರುವುದಕ್ಕಾಗಿ ಲಕ್ಷ್ಮಣ ಹೋಗಿದ್ದಾನೆ. ಅವನು ಇನ್ನೂ ಹುಡುಗ, ಪ್ರಿಯನೇ, ನಾವು ಸ್ವಲ್ಪಹೊತ್ತು ಇಲ್ಲಿಯೇ ವಿಶ್ರಮಿಸೋಣ. ಉರಿಯುವ ಮರಳ ಮೇಲೆ ನಡೆದುದರಿಂದ ನಿಮ್ಮ ಕಾಲುಗಳು ಬೆಂದುಹೋಗಿವೆ. ಅವುಗಳನ್ನು ತೊಳೆದು, ಗಾಳಿ ಬೀಸುತ್ತೇನೆ". "ರಘುವೀರನು ತನ್ನ ಪತ್ನಿಯ ಆಯಾಸವನ್ನು ನೋಡಿ ಸ್ವಲ್ಪ ಹೊತ್ತು ಕಾಲಿನ ಮುಳ್ಳುತೆಗೆಯುವ ನೆಪದಿಂದ ಕುಳಿತುಕೊಂಡನು. ಜಾನಕಿಯ ಸ್ನೇಹವನ್ನು ನೋಡಿ ರಾಮನ ಶರೀರ ಪುಲಕಿತವಾಯಿತು, ಕಣ್ಣುಗಳಿಂದ ನೀರು ಸುರಿಯಿತು."

ಸೀತೆಯನ್ನು ಕಾಡಿಗೆ ಕಳುಹಿಸುವ ಪ್ರಸಂಗ ಗೀತಾವಲಿ ರಾಮಾಯಣದಲ್ಲಿ ಬರುತ್ತದೆ. ಆದರೆ ರಾಮಚರಿತಮಾನಸದಲ್ಲಿ ಈ ಪ್ರಸಂಗವಿಲ್ಲ. ಈ ಘಟನೆಗೆ ಸಂಬಂಧಪಟ್ಟ ವರ್ಣನೆಯಲ್ಲಿ ಸೀತೆಯ ನಿರಾಶೆ ಮತ್ತು ಭಗ್ನ ಹೃದಯವನ್ನು ನೋಡಬಹುದು. ರಾಮಚರಿತಮಾನಸದಲ್ಲಿರುವ ಸೀತೆ ಭಾರತೀಯ ಆದರ್ಶ ಗೃಹಿಣಿ.

ಕೌಸಲ್ಯೆಯ ಪಾತ್ರ ಸುಂದರವಾಗಿದೆ. ಅವಳ ಪುತ್ರಪ್ರೇಮದಲ್ಲಿ ಭಾವಾವೇಶವಿದ್ದರೂ ಅವಿವೇಕಕ್ಕೆ ಅವಕಾಶವಿಲ್ಲ. ಕರ್ತವ್ಯಬುದ್ಧಿ ಅವಳನ್ನು ಸನ್ಮಾರ್ಗದಲ್ಲಿ ಕೈಹಿಡಿದು ಮುಂದಕ್ಕೆ ಒಯ್ಯುತ್ತದೆ. ರಾಮನು ವನವಾಸಕ್ಕೆ ಹೋಗುವ ಸಮಾಚಾರವನ್ನು ಕೇಳಿ ಕೌಸಲ್ಯೆಗೆ ಆಗುವ ದುಃಖ ಅಷ್ಟಿಷ್ಟಲ್ಲ. ಆದರೆ ಇಂತಹ ವಿಷಮಸ್ಥಿತಿಯಲ್ಲಿಯೂ ಅವಳ ವಿವೇಕ ಜಾಗೃತವಾಗಿರುತ್ತದೆ.

ಧರಮು ಸನೇಹ ಉಭಯು ಮತಿ ಘೇರೀ। ಭಯಿಗತಿ ಸಾಂಪ್ ಛಛೂಂದರಿ ಕೇರೀ ॥

ಸರ್ಪ ಮತ್ತು ಮುಂಗುಸಿಗಳ ಜಗಳದಂತೆ ಅವಳ ಮನಸ್ಸಿನಲ್ಲಿ ಧರ್ಮ ಮತ್ತು ಸ್ನೇಹಗಳ ಸಂಘರ್ಷ ನಡೆಯಿತು. ಆಗ ಸರಳ ಸ್ವಭಾವದ ಕೌಸಲ್ಯೆ ಧೈರ್ಯದಿಂದ ಹೀಗೆಂದಳು—"ಪಿತು ಆಯಸು. ಸಬ ಧರಮ ಕ ಟೀಕಾ" ತಂದೆಯ ಆಜ್ಞೆ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠ.

ಜೌಂ ಕೇವಲ ಪಿತು ಆಯಸು ತಾತಾ। ತೌ ಜನಿ ಜಾಹು. ಜಾನಿ ಬಡ ಮಾತಾ॥

ಜಾಂ ಪಿತು ಮಾತು ಕಹೇವು ಬನಜಾನಾ। ತೌ ಕಾನನ ಸತ ಅವಧ ಸಮಾನಾ॥

"ತಂದೆ ಮಾತ್ರ ಆಜ್ಞೆಯನ್ನಿತ್ತಿರುವುದಾದರೆ ತಾಯಿಯ ಸ್ಥಾನ ದೊಡ್ಡದೆಂದು ತಿಳಿದು ನೀನು ಕಾಡಿಗೆ ಹೋಗಬೇಡ. ತಂದೆ ತಾಯಿಗಳಿಬ್ಬರೂ (ದಶರಥ ಮತ್ತು ಕೈಕೇಯಿ) ಕಾಡಿಗೆ ಹೋಗ ಬೇಕೆಂದು ಹೇಳಿರುವುದಾದರೆ ನೀನು ವನವನ್ನು ನೂರು ಅಯೋಧ್ಯೆಗಳಿಗೆ ಸಮಾನವೆಂದು ಭಾವಿಸು".

ದಶರಥನ ಮರಣಾನಂತರ ಸಿಂಹಾಸನವನ್ನೇರಿ ರಾಜ್ಯಭಾರ ನಡೆಸಬೇಕೆಂದು ಗುರು ವಸಿಷ್ಠರು ಭರತನಿಗೆ ಉಪದೇಶ ಮಾಡಿ ದರು. ಆ ಸಮಯದಲ್ಲಿ ಕೌಸಲ್ಯೆಯು ರಾಣಿಯರ ಪರವಾಗಿ ವಸಿಷ್ಠರ ಉಪದೇಶವನ್ನು ಅಂಗೀಕರಿಸಬೇಕೆಂದು ಭರತನಿಗೆ ಹೇಳುವುದು ನಿರ್ಮಲಹೃದಯದ ನಿವೇದನೆ.

ಕೈಕೇಯಿಯು ನಿಷ್ಠುರ ಮಹತ್ವಾಕಾಂಕ್ಷೆಯ ಪೂರ್ಣಾವತಾರ. ತೋರಿಕೆಗೆ ಮಂಥರೆಯ ಪ್ರೇರಣೆಯಿಂದಲೇ ಅವಳು ಅನಿಷ್ಟ ಕರವಾದ ವರಗಳನ್ನು ಕೇಳಿರಬೇಕೆಂದು ಕಂಡರೂ ಅವಳ ನೈಜ ಸ್ವಭಾವ ಸ್ಪಷ್ಟವಾಗಿ ತಿಳಿಯುವುದಿಲ್ಲ. ದೇವತೆಗಳ ಇಷ್ಟವಾದ

ರಾವಣನ ಸಂಹಾರಕ್ಕೆ ಅವಳು ಒಂದು ಸಾಧನ ಎಂಬ ಭಾವನೆ ಬರುವಂತೆ ಕವಿಯು ಚಿತ್ರಿಸಿದ್ದಾನೆ. ಮಂಥರೆಯ ಉಪದೇಶಕ್ಕೆ ಮೊದಲು ರಾಮನಲ್ಲಿರುವ ಅವಳ ನಿರ್ಮಲ ಪ್ರೇಮವೇ ಇದಕ್ಕೆ ನಿದರ್ಶನ. ಆದರೂ ಕೈಕೇಯಿಯು ನಮ್ಮ ಸಹಾನುಭೂತಿಗೆ ಪಾತ್ರಳಾಗುವುದಿಲ್ಲ.

ರಾಮಾಯಣದಲ್ಲಿ ಮಂಥರೆಯ ಪಾತ್ರ ಮಾನವನ ಸ್ವಾಭಾವಿಕ ಪ್ರವೃತ್ತಿಗಳನ್ನು ಪ್ರತಿಬಿಂಬಿಸುವ ಒಂದು ಕಲಾತ್ಮಕ ಚಿತ್ರ. ಆದರೂ ಭಕ್ತರಾದ ತುಲಸೀದಾಸರು ಅವಳನ್ನು ಮಂದಮತಿ, ಕುಬುದ್ಧಿ, ಕುಜಾತೆ, ಕುಟಿಲೆ, ಪಾಪಿನಿ, ಅವಧ ಸಾಢ ಸಾತೀ (ಅಯೋಧ್ಯೆಯ ಶನಿ), ಪಾತಕಿನಿ, ಇತ್ಯಾದಿ ಹೆಸರುಗಳಿಂದ ಕರೆದಿದ್ದಾರೆ.

ತುಲಸೀದಾಸರು ನಿರ್ಮಿಸಿರುವ ಕೆಲವು ಪ್ರಮುಖ ಪಾತ್ರಗಳ ಸಂಕ್ಷಿಪ್ತ ಪರಿಚಯ ಪಡೆದಮೇಲೆ ಸ್ತ್ರೀ ಜಾತಿಯನ್ನು ಕುರಿತು ಅವರು ಹೇಳಿರುವ ಕೆಲವು ಮಾತುಗಳನ್ನು ಉಲ್ಲೇಖಿಸುವುದು ಆಗತ್ಯ. ಸೀತೆ, ಕೌಸಲ್ಯೆ ಮೊದಲಾದ ಸ್ತ್ರೀ ಪಾತ್ರಗಳ ನಿರೂಪಣೆ ಅತ್ಯಂತ ಭವ್ಯವಾದರೂ ಸ್ತ್ರೀ ಜಾತಿಯ ನಿಂದೆ ಎಷ್ಟರಮಟ್ಟಿಗೆ ನ್ಯಾಯವಾಗಿದೆ ಎಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಉದ್ಭವಿಸುವುದು ಸಹಜ. ಈ ಕೆಳಗಿನ ಕೆಲವು ಉಕ್ತಿಗಳು ಉಲ್ಲೇಖನೀಯವಾಗಿವೆ :

ಅಯೋಧ್ಯೆಯ ನಿವಾಸಿಗಳು ಹೀಗೆನ್ನುತ್ತಾರೆ—

ಸತ್ಯ ಕಹಹಿಂ ಕವಿ, ನಾರಿ ಸುಭಾವು। ಸಬ ವಿಧಿ ಅಗಹು ಅಗಾಧ ದುರಾವು ॥

ನಿಜ ಪ್ರತಿಬಿಂಬು ಬರುಕಗಹಿ ಜಾಯೀ। ಜಾನಿ ನ ಜಾಯಿ ನಾರಿಗತಿ ಭಾಯೀ ॥

"ಕವಿಗಳು ಹೇಳುವುದು ನಿಜ. ಎಲ್ಲಾ ರೀತಿಯಲ್ಲಿಯೂ ನಾರೀಸ್ವಭಾವ ಅಗಾಧ, ಅಗ್ರಾಹ್ಯ, ರಹಸ್ಯಮಯ. ನಮ್ಮ ಪ್ರತಿಬಿಂಬವನ್ನು ಕೈಯಲ್ಲಿ ಹಿಡಿಯಬಹುದು. ಆದರೆ ನಾರಿಯ ರೀತಿಯನ್ನು ಅರಿಯುವುದು ಅಸಾಧ್ಯ". ಭರತನ ಅಭಿಪ್ರಾಯ—

ಬಿಧಿಹುಂ ನ ನಾರಿ ಹೃದಯಗತಿ ಜಾನೀ। ಸಕಲ ಕಪಟ ಅಘ ಅವಗುನಖಾನೀ॥
ಸರಲ ಸುಸೀಲ ಧರಮರತರಾವೂ। ಸೋ ಕಿಮಿ ಜಾನೈ ತೀಯ ಸ್ವಭಾವೂ॥

"ವಿಧಿಯೂ ಸಹ ನಾರಿಯ ಹೃದಯದ ಗತಿಯನ್ನು ತಿಳಿಯ ಲಾರನು. ಅದು ಎಲ್ಲ ಕಪಟ, ಪಾಪ ಮತ್ತು ಅವಗುಣಗಳ ಭಂಡಾರ. ರಾಜನು (ದಶರಥನು) ಸುಶೀಲ, ಸರಳ ಮತ್ತು ಧರ್ಮಪರಾಯಣ. ಅವನು ಹೇಗೆ ತಾನೇ ಸ್ತ್ರೀಯ ಸ್ವಭಾವ ತಿಳಿಯಬಲ್ಲ?"

ಕೈಕೇಯಿ ನಾರಿಯಾಗಿದ್ದೂ ಮಂಥರೆಯನ್ನು ಕುರಿತು ಹೀಗೆನ್ನು ತ್ತಾಳೆ:

ಕಾನೇ ಖೋರೇ ಕೂಬರೇ ಕುಟಿಲ ಕುಚಾಲೀ ಜಾನಿ।
ತಿಯ ಬಿಸೇಷಿ, ಪುನಿ ಚೇರಿ. ಕಹಿ ಭರತಮಾತು ಮುಸುಕಾನಿ॥

"ಒಕ್ಕಣ್ಣಿನವನು, ಕುಂಟ, ಗೂನುಬೆನ್ನುಳ್ಳವನು, ಇವರೆಲ್ಲರನ್ನೂ ಕುಟಿಲ ದುರಾಚಾರಿಗಳೆಂದು ತಿಳಿಯಬೇಕು. ಅವರಲ್ಲೂ ನೀನು ಸ್ತ್ರೀ ಮತ್ತು ದಾಸಿ. ಹೀಗೆಂದು ಹೇಳಿ ಭರತನ ತಾಯಿಯು ನಕ್ಕಳು". ತಪಸ್ವಿನಿಯಾದ ಶಬರಿಯ ಮಾತುಗಳು ಈ ರೀತಿ ಯಾಗಿವೆ:

"ಅಧಮ ತೇಂ ಅಧಮ, ಅಧಮ ಅತಿನಾರೀ"
"ನಾರಿಯು ಅಧಮರಿಗಿಂತಲೂ ಅತಿ ಅಧಮಳು."

ಇನ್ನೊಂದೆಡೆಯಲ್ಲಿ

"ಢೋಲ ಗಂವಾರ ಸೂದ್ರ ಅರು ನಾರೀ। ಸಕಲ ತಾಡನಾಕೇ ಅಧಿಕಾರೀ"

"ಢೋಲು, ಅನಾಗರಿಕ, ಶೂದ್ರ ಮತ್ತು ಹೆಂಗಸು ಇವರುಗಳು ಶಿಕ್ಷೆಗೆ ಯೋಗ್ಯರು."

ಮೇಲಿನ ಉದಾಹರಣೆಗಳಿಂದ ಸ್ತ್ರೀಜಾತಿಯ ವಿಚಾರದಲ್ಲಿ ತುಲಸೀದಾಸರ ಮನೋದಶೆ ಸ್ಪಷ್ಟವಾಗಿ ತಿಳಿಯುತ್ತದೆ. ಅವರ ವೈಯಕ್ತಿಕ ಜೀವನದಲ್ಲಿ ಸ್ತ್ರೀಯ ಕಾರಣದಿಂದ ಯಾವುದೋ ಒಂದು ಮಹತ್ತರ ದುಃಖ ಸಂಭವಿಸಿರಬಹುದು.

ಭಾವಾಭಿವ್ಯಂಜನೆ

ರಸವೇ ಕಾವ್ಯದ ಪ್ರಾಣ. ರಸ ನಿಷ್ಪತ್ತಿಯೇ ಕಾವ್ಯದ ಗುರಿ. "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್ ರಸನಿಷ್ಪತ್ತಿಃ" ರಸ ನಿಷ್ಪತ್ತಿಗೆ ವಿಭಾವ, ಅನುಭಾವ, ಸಂಚಾರಿ ಭಾವಗಳ ಸಂಯೋಜನೆ ಅಗತ್ಯ. ಈ ಮೂರು ತತ್ವಗಳನ್ನು ಯೋಜಿಸುವ ಪೂರ್ಣಶಕ್ತಿ ಪಡೆದ ಕವಿಯೇ ಮಹಾಕವಿ. ಕವಿಯು ತನ್ನಲ್ಲಿರುವ ಭಾವುಕತೆಯ ಸಹಾಯದಿಂದ ಕಾವ್ಯವಸ್ತುವಿನ ಮಾರ್ಮಿಕ ಸ್ಥಳಗಳನ್ನು ಗ್ರಹಿಸಿ ಪಾತ್ರಗಳ ಸ್ವಭಾವವನ್ನು ನಿರೂಪಿಸಲು ಸಮರ್ಥನಾಗುತ್ತಾನೆ. ಇಂತಹ ಸಾಮರ್ಥ್ಯವನ್ನು ಕವಿಪ್ರತಿಭೆಯೆನ್ನುತ್ತಾರೆ. ಈ ಪ್ರತಿಭೆ ಯಾವ ಕವಿಯಲ್ಲಿ ಹೆಚ್ಚಿರುವುದೋ ಅವನೇ ರಸ ನಿಷ್ಪತ್ತಿಯ ಸಾಧನೆಯಲ್ಲಿ ಪೂರ್ಣ ಸಫಲನಾಗುತ್ತಾನೆ. ಗೋಸ್ವಾಮಿ ತುಲಸೀದಾಸರು ಪ್ರತಿಭಾಸಂಪನ್ನ ಕವಿಗಳು. ಅವರು ತಮ್ಮ ಕಾವ್ಯವಸ್ತುವಿನ ಮಾರ್ಮಿಕ ಸ್ಥಾನಗಳನ್ನು ಅರಿತಿದ್ದಾರೆ. ರಾಮಚರಿತಮಾನಸದಲ್ಲಿ ಮಾರ್ಮಿಕ ಸ್ಥಳಗಳು

ಅನೇಕವಿವೆ. ನಾನಾ ಘಟನೆಗಳ ಸೂಕ್ಷ್ಮ ವರ್ಣನೆಗಳ ಮೂಲಕ ತುಲಸೀದಾಸರು ವಿವಿಧ ಭಾವಗಳನ್ನು ತನ್ಮಯರಾಗಿ ನಿರೂಪಿಸಿರುತ್ತಾರೆ. ಈ ನಿರೂಪಣೆಗಳು ಕಥಾವಸ್ತುವಿನ ಪ್ರವಾಹಕ್ಕೂ ಪಾತ್ರಗಳ ವ್ಯಕ್ತಿತ್ವದ ವಿಸ್ತಾರಕ್ಕೂ ಪೂರ್ಣ ಸಹಕಾರಿಗಳಾಗಿವೆ. ರಸವತ್ತಾದ ಕೆಲವು ಪ್ರಸಂಗಗಳ ಸಂಕ್ಷೇಪ ಪರಿಚಯ ಈಗ ಕೊಡಲಾಗುವುದು.

ತುಲಸೀದಾಸರು ಪ್ರಥಮತಃ ಭಕ್ತರಾದುದರಿಂದ ಅವರ ಕಾವ್ಯಗಳಲ್ಲಿ ಶೃಂಗಾರ ಭಾವಕ್ಕೆ ಹೆಚ್ಚು ಪ್ರಾಧಾನ್ಯತೆ ಇಲ್ಲ. ಆದರೆ ಆದರ್ಶದಾಂಪತ್ಯ ಜೀವನಕ್ಕೆ ಪೋಷಕವಾದ ದಿವ್ಯ ಶೃಂಗಾರವನ್ನು ಅವರು ಅನೇಕ ಪ್ರಸಂಗಗಳಲ್ಲಿ ವರ್ಣಿಸಿದ್ದಾರೆ. ಮಿಥಿಲಾನಗರದಲ್ಲಿ ಸೀತಾಸ್ವಯಂವರಕ್ಕೆ ಮುಂಚಿತವಾಗಿ ಪಾರ್ವತೀಪೂಜೆಯನ್ನು ಮುಗಿಸಿಕೊಂಡು ಸಖಿಯರೊಂದಿಗೆ ಸೀತೆಯು ಹೋಗುತ್ತಿರುವಾಗ ಒಂದು ಪುಷ್ಪವಾಟಿಕೆಯ ಬಳಿ ಸೀತಾರಾಮರ ಪ್ರಥಮ ಸಂದರ್ಶನವಾಗುತ್ತದೆ. ಈ ಸಮಾಗಮದ ವರ್ಣನೆಯಲ್ಲಿ ಶೃಂಗಾರಕ್ಕೆ ಸಂಬಂಧಪಟ್ಟ ಪೂರ್ವ ಪ್ರಣಯಾನುರಾಗದ ಅಭಿವ್ಯಂಜನೆ ಅತ್ಯಂತ ಚಿತ್ತಾಕರ್ಷಕವಾಗಿದೆ. ಒಬ್ಬ ಸಖಿಯು ರಾಮ ಲಕ್ಷ್ಮಣರನ್ನು ಮೊದಲು ನೋಡಿ ಅವರ ಸೌಂದರ್ಯವನ್ನು ಈ ರೀತಿ ವರ್ಣಿಸುತ್ತಾಳೆ:

"ದೇಖನ ಬಾಗ ಕುವರ ದುಯಿ ಆಯೇ। ವಯ ಕಿಶೋರ ಸಬ ಭಾಂತಿ ಸುಹಾಯೇ॥
ಸ್ಯಾಮ ಗೌರ ಕಿಮಿ ಕಹವ್ರು ಬಖಾನೀ। ಗಿರಾ ಅನಯನ ನಯನ ಬಿನುಬಾನೀ॥

"ಇಬ್ಬರು ರಾಜಕುಮಾರರು ಉದ್ಯಾನವನ್ನು ನೋಡುವುದಕ್ಕೆ ಬಂದಿರುತ್ತಾರೆ. ಇಬ್ಬರಿಗೂ ಕಿಶೋರ ವಯಸ್ಸು. ಎಲ್ಲಾ

ರೀತಿಯಲ್ಲೂ ಸುಂದರರಾಗಿದ್ದಾರೆ. ಒಬ್ಬನದು ಶ್ಯಾಮಲವರ್ಣ, ಇನ್ನೊಬ್ಬನದು ಗೌರವರ್ಣ. ಅವರ ವರ್ಣನೆಯನ್ನು ಹೇಗೆ ಮಾಡಲಿ? ವರ್ಣನೆ ಮಾಡುವ ನಾಲಗೆಗೆ ಕಣ್ಣಿಲ್ಲ ಮತ್ತು ನೋಡುವ ಕಣ್ಣುಗಳಿಗೆ ನಾಲಗೆಯಿಲ್ಲ". ಇದನ್ನು ಸೀತೆ ಕೇಳಿ ಅವರನ್ನು ನೋಡುವುವಕ್ಕೆ ಉತ್ಕಂಠಿತಳಾದಳು. ಆ ಸಖಿಯನ್ನು ಮುಂದಿಟ್ಟುಕೊಂಡು ರಾಜಕುಮಾರರನ್ನು ನೋಡುವುದಕ್ಕೆ ಸ್ವಲ್ಪ ಮುಂದೆಹೋದಳು. ಆಗ ಸೀತೆಯನ್ನು ನೋಡುವುದಕ್ಕೆ ಮೊದಲೇ ರಾಮನ ಮನಸ್ಸಿನಲ್ಲುಂಟಾದ ಭಾವವಿಕಾರವಿದು :—

> ಕಂಕನ ಕಿಂಕಿಣಿ ನೂಪುರಧುನಿ ಸುನಿ। ಕಹತ ಲಷನಸನ ರಾಮ ಹೃದಯಗುನಿ ॥
>
> ಮಾನಹುಂ ಮದನ ದುಂದುಭೀ ದೀನ್ಹೀ। ಮನಸಾ ವಿಶ್ವ ವಿಜಯ ಕಹಂ ಕೀನ್ಹೀ ॥

"ಸೀತೆಯ ಕಂಕಣ, ಕಟಿಯಲ್ಲಿರುವ ಮೇಖಲೆ ಮತ್ತು ಕಾಲುಗಳಲ್ಲಿರುವ ಗೆಜ್ಜೆಗಳ ಮಧುರಧ್ವನಿಯನ್ನು ಕೇಳಿ ಮನಸ್ಸಿನಲ್ಲಿಯೇ ಯೋಚಿಸುತ್ತಾ ರಾಮನು ಲಕ್ಷ್ಮಣನನ್ನು ನೋಡಿ ನುಡಿಯುತ್ತಾನೆ. ಮನ್ಮಥನು ಜಗತ್ತನ್ನೇ ಗೆಲ್ಲಬೇಕೆಂಬ ಇಚ್ಛೆಯಿಂದ ತನ್ನ ದುಂದುಭಿಯನ್ನು ಮೊಳಗಿಸಿದನೋ ಎಂಬಂತೆ ಇದೆ". ಆಮೇಲೆ ರಾಮನು ಸೀತೆಯನ್ನೂ, ಸೀತೆಯು ರಾಮನನ್ನೂ ಪರಸ್ಪರ ನೋಡುತ್ತಾರೆ. ಸೌಂದರ್ಯಕ್ಕೂ ಸೌಂದರ್ಯವನ್ನು ಹೆಚ್ಚಿಸುವ ಸೀತೆಯ ಮುಖವೆಂಬ ಚಂದ್ರನನ್ನು ನೋಡಿ ರಾಮನ ಕಣ್ಣುಗಳೆಂಬ ಚಕೋರಗಳು ಸ್ತಂಭಿತವಾದುವು. ಇವರಿಬ್ಬರಲ್ಲಿ ಉಂಟಾದ ಪೂರ್ವಾನುರಾಗವು ಪವಿತ್ರವಾದದ್ದು. ಏಕೆಂದರೆ ರಾಮನು ಹೀಗೆ ಹೇಳುತ್ತಾನೆ—

ರಘುವಂಶಿನ್ಹ ಕರ ಸಹಜಸ್ವಭಾವೂ। ಮನು ಕುಪಂಥ ಪಗು ಧರಹಿಂ
ನ ಕಾವೂ॥
ಮೋಹಿ ಅತಿಶಯ ಪ್ರತೀತಿ ಮನಕೇರೀ। ಜೆಹಿ ಸಪನೆಹು ಪರನಾರಿ
ನ ಹೇರೀ॥

"ರಘುವಂಶದಲ್ಲಿ ಹುಟ್ಟಿದವರ ಮನಸ್ಸು ಎಂದೂ ಕುಪಥಗಾಮಿಯಾಗುವುದಿಲ್ಲ. ನನ್ನ ಮನಸ್ಸಿನ ಮೇಲೆ ನನ್ನ ಪೂರ್ಣ ವಿಶ್ವಾಸವಿದೆ. ಅದು ಸ್ವಪ್ನದಲ್ಲಿಯೂ ಪರನಾರಿಯನ್ನು ನೋಡಿಲ್ಲ".

ತುಲಸೀದಾಸರು ಚಿತ್ರಿಸಿರುವ ಶೃಂಗಾರದ ಪೂರ್ವಾನುರಾಗ ಇಷ್ಟು ಭವ್ಯವಾಗಿರುವಾಗ ಅವರ ಕಲ್ಪನೆಯ ಶೃಂಗಾರಭಾವ ಎಷ್ಟು ಮಹತ್ವದ್ದಿರಬೇಕೆಂಬುದನ್ನು ನಾವು ಊಹಿಸಬಹುದು.

ರಾಮನನ್ನು ಕಾಡಿಗೆ ಕಳುಹಿಸಬೇಕೆಂದು ಕೈಕೇಯಿ ವರವನ್ನು ಕೇಳಿದ ಮೇಲೆ ದಶರಥನ ಹೃದಯದಲ್ಲಿ ಉಂಟಾಗುವ ಶೋಕವನ್ನು ತುಲಸೀದಾಸರು ಮನಕರಗುವಂತೆ ಚಿತ್ರಿಸಿದ್ದಾರೆ—

ವ್ಯಾಕುಲ ರಾವು, ಸಿಥಿಲ ಸಬ ಗಾತಾ। ಕರಿನಿ ಕಲಪತರು ಮನಹುಂ
ನಿಪಾತಾ॥
ಕಂಠಸೂಖಿ, ಮುಖಿ ಆವ ನ ಬಾನೀ। ಜನು ಪಾಠೀನ ದೀನ
ಬಿನುಪಾನೀ॥
ರಾಮ ರಾಮ ರಟ ವಿಕಲ ಭುವಾಲೂ। ಜನು ಬಿನು ಪಂಖ
ಬಿಹಂಗ ಬೇಹಾಲೂ॥

"ರಾಜನು ಅತ್ಯಂತ ವ್ಯಾಕುಲನಾದನು. ಶರೀರವೆಲ್ಲಾ ಶಿಥಿಲವಾಯಿತು. ಕಲ್ಪವೃಕ್ಷವನ್ನು ಆನೆಯು ಉರುಳಿಸಿದಂತಾಯಿತು. ಗಂಟಲು ಒಣಗಿತು. ಬಾಯಲ್ಲಿ ಮಾತೇ ಹೊರಡಲಿಲ್ಲ. ಮೀನಿಗೆ ನೀರೇ ಇಲ್ಲದಂತಾಯಿತು. 'ರಾಮ, ರಾಮ' ಎನ್ನುತ್ತಾ ರೆಕ್ಕೆಗಳನ್ನು ಕಳೆದುಕೊಂಡ ಪಕ್ಷಿಯಂತಾಯಿತು ಅವನ ಪಾಡು."

ರಾಮನು ಕಾಡಿಗೆ ಹೊರಡುವ ವೇಳೆಯಲ್ಲಿ ಅಯೋಧ್ಯಾ ನಗರವೇ ಶೋಕಸಾಗರದಲ್ಲಿ ಮುಳುಗಿತು. ಬಂಧುಗಳು, ಪರಿಜನರು, ಪುರಜನರು ಮಾತ್ರವಲ್ಲ ಪಶುಪ್ರಾಣಿಗಳೂ, ಗಿಡ ಬಳ್ಳಿಗಳೂ ರಾಮನ ವಿಯೋಗದ ಶೋಕಾತಿರೇಕದಿಂದ ನರಳುವಂತಾಯಿತು. ಆ ಹೃದಯವಿದ್ರಾವಕ ದೃಶ್ಯವನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಈ ಸಂದರ್ಭದ ಒಂದೆರಡು ಸನ್ನಿವೇಶಗಳು ಹೀಗಿವೆ—

ಲಾಗತಿ ಅವಧ ಭಯಾವನಿ ಭಾರೀ। ಮಾನಹುಂ ಕಾಲರಾತಿ ಅಂಧಿಯಾರೀ॥
ಘೋರಜಂತು ಸಮ ಪುರನರನಾರೀ। ಡರಪಹಿಂ ಏಕಹಿಂ ಏಕ ನಿಹಾರೀ॥
ಘರ ಮಸಾನ ಪರಿಜನ ಜನುಭೂತಾ। ಸುತಹಿತ ಮೀತು ಮನಹುಂಜಮದೂತಾ॥
ಬಾಗನ್ಹ ಬಿಟಪ ಬೇಲಿ ಕುಂಭಿಲಾಹೀಂ। ಸರಿತ ಸರೋವರ ದೇಖಿನ ಜಾಹೀಂ॥
ಹಯಗಯ ಕೋಟಿನ ಕೇಲಿಮೃಗು ಪುರಪಸು ಚಾತಕ ಮೋರ।
ಪಿಕ ರಥಾಂಗ ಸುಕ ಸಾರಿಕಾ ಸಾರಸ ಹಂಸ ಚಕೋರ॥
ರಾಮ ಬಿಯೋಗ ವಿಕಲ ಸಬ ಠಾಢೇ। ಜಹಂ ತಹಂ ಮನಹುಂ ಚಿತ್ರ ಲಿಖಿಕಾಢೇ॥
ನಗರು ಸಕಲ ಬನು ಗಹಬರ ಭಾರೀ। ಖಿಗಮೃಗ ವಿಪುಲ ಸಕಲ ನರನಾರೀ॥

"ಕಾಲರಾತ್ರಿಯ ಅಂಧಕಾರವೋ ಎಂಬಂತೆ ಅಯೋಧ್ಯೆಯು ಭಯಂಕರವಾಗಿ ಕಾಣುತ್ತದೆ. ನಗರದ ಸ್ತ್ರೀಪುರುಷರು ಒಂದನ್ನೊಂದು ಕಂಡು ಭಯಪಡುವ ಭಯಂಕರ ಜಂತುಗಳಂತೆ ಕಾಣುತ್ತಿದ್ದಾರೆ. ಮನೆಗಳು ಸ್ಮಶಾನಗಳಂತಾಗಿವೆ. ಮನೆಯಲ್ಲಿರುವ

ಬಂಧುಗಳು ಭೂತಗಳಂತೆಯೂ, ಮಕ್ಕಳು, ಹಿತೈಷಿಗಳು, ಮಿತ್ರರು ಯಮದೂತರಂತೆಯೂ ಕಾಣುತ್ತಿರುವರು. ಉದ್ಯಾನಗಳಲ್ಲಿರುವ ವೃಕ್ಷಗಳೂ ಲತೆಗಳೂ ಬಾಡಿಹೋಗಿವೆ. ಸರೋವರ ಮತ್ತು ನದಿಗಳ ಪಾಡು ನೋಡಲಾಗದು. ಆನೆ. ಕುದುರೆ, ಜಿಂಕೆ, ಪಶುಗಳು, ನವಿಲು, ಕೋಗಿಲೆ, ಚಕ್ರವಾಕ, ಗಿಣಿ, ಮೈನಾ, ಸಾರಸ, ಹಂಸ, ಮೊದಲಾದ ಕೋಟಿಕೋಟಿ ಪಶುಪಕ್ಷಿಗಳು ರಾಮನ ವಿಯೋಗದ ಶೋಕದಿಂದ ಚಿತ್ರದ ಬೊಂಬೆಗಳಂತೆ ನಿಂತವು. ನಗರವೇ ಒಂದು ದೊಡ್ಡ ಕಾಡಿನಂತಾಯಿತು. ಸ್ತ್ರೀಪುರುಷರು ಅದರಲ್ಲಿರುವ ಅಸಂಖ್ಯಾತ ಪಶುಪಕ್ಷಿಗಳಂತಾದರು".

ರಾಮನ ವಿಯೋಗದ ದುಃಖ ಸಹಿಸಲಾರದೆ ಭಾವಪರವಶರಾಗಿ ಅಯೋಧ್ಯೆಯ ಪುರಜನರು ರಾಮನಿಲ್ಲದ ಅಯೋಧ್ಯೆಯಲ್ಲಿದ್ದು ಫಲವಿಲ್ಲವೆಂದು ತಿಳಿದು ರಾಮನ ಹಿಂದೆಯೇ ಹೊರಟು ಹೋದರು. ರಾಮನ ಚರಣಾರವಿಂದದಲ್ಲಿ ಮನಸ್ಸನ್ನು ಸ್ಥಿರಪಡಿಸಿ ತಮ್ಮ ತಮ್ಮ ಮನೆಯ ಸುಖಭೋಗಗಳನ್ನು ಮರೆತು ಬಿಟ್ಟರು. ಈ ಗುಂಪಿನಲ್ಲಿ ಮಕ್ಕಳೂ ವೃದ್ಧರೂ ಸೇರಿದ್ದರು. ಜನರ ಪ್ರೇಮವನ್ನು ನೋಡಿ ಅವರನ್ನು ಹಿಂತಿರುಗಿ ಹೋಗಿರೆಂದು ಹೇಳುವುದಕ್ಕೂ ರಾಮನಿಗೆ ಸಂಕೋಚವಾಗುತ್ತದೆ. ನಾನಾ ರೀತಿಯಲ್ಲಿ ಧರ್ಮೋಪದೇಶ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ರಾಮನ ಉಭಯಸಂಕಟ ಇನ್ನೂ ಹೆಚ್ಚಾಯಿತು. ಶೀಲ ಸ್ನೇಹದ ಮೂರ್ತಿಯಾದ ರಾಮನ ಅವಸ್ಥೆ ಹೇಳತೀರದು. ಕೊನೆಗೆ ತಮಸಾ ನದೀತೀರದಲ್ಲಿ ತಂಗಿದಾಗ ಎಲ್ಲರೂ ಯಾತ್ರೆಯ ಆಯಾಸದಿಂದ ನಿದ್ರಾದೇವಿಯ ವಶರಾದರು. ಮಧ್ಯರಾತ್ರಿಯ ವೇಳೆಯಲ್ಲಿ ರಾಮನು ನಿರುಪಾಯನಾಗಿ ಕಾಲಿಟ್ಟ ಹೆಜ್ಜೆಯ ಗುರುತು ಸಿಕ್ಕದ ರೀತಿಯಲ್ಲಿ ಕುದುರೆಗಳನ್ನು ಓಡಿಸಿ ಮುಂದಕ್ಕೆ

ಪ್ರಯಾಣ ಬೆಳಸಬೇಕೆಂದು ನಮ್ರತೆಯಿಂದ ಸುಮಂತ್ರನನ್ನು ಪ್ರಾರ್ಥಿಸಿದನು.

ರಾಮ, ಲಕ್ಷ್ಮಣ, ಸೀತೆ ಇವರನ್ನು ಚಿತ್ರಕೂಟದಲ್ಲಿ ಬಿಟ್ಟು ಸುಮಂತ್ರನು ಹಿಂತಿರುಗುವ ಪ್ರಸಂಗ ಅತ್ಯಂತ ಹೃದಯ ವಿದ್ರಾವಕವಾಗಿದೆ.

"ರಾಮ ರಾಮ ಸಿಯ ಲಷನು ಪುಕಾರೀ। ಪರೇವು ಧರನಿತಲ ವ್ಯಾಕುಲ ಭಾರೀ॥
ದೇಖಿ ದಖಿನ ದಿಸಿ ಹಯ ಹಿಹಿನಾಹೀಂ। ಜನು ಬಿನು ಪಂಖ ವಿಹಂಗ ಅಕುಲಾಹೀಂ॥
ನಹಿಂ ತೃನ ಚರಹಿಂ, ನ ಪಿಯಹಿಂ ಜಲು, ಮೋಚಹಿಂ ಲೋಚನ ವಾರಿ।
ವ್ಯಾಕುಲ ಭಯೇ ನಿಷಾದ ಸಬ ರಘುವರ ಬಾಜಿ ನಿಹಾರಿ॥"

"ರಾಮ, ರಾಮ, ಸೀತೆ, ಲಕ್ಷ್ಮಣ" ಎನ್ನುತ್ತಾ ಅಸಹನೀಯ ದುಃಖದಿಂದ ಸುಮಂತ್ರನು ನೆಲದಮೇಲೆ ಬಿದ್ದನು. ದಕ್ಷಿಣ ದಿಕ್ಕನ್ನು ನೋಡುತ್ತಾ ಕುದುರೆಗಳು ರೆಕ್ಕೆಯಿಲ್ಲದ ಪಕ್ಷಿಗಳಂತೆ ಕೆನೆಯ ತೊಡಗಿದವು. ಅವು ಹುಲ್ಲು ಮೇಯದೆ, ನೀರು ಕುಡಿಯದೆ, ಕಣ್ಣುಗಳಿಂದ ನೀರು ಸುರಿಸುತ್ತಿರುವುದನ್ನು ನೋಡಿ ನಿಷಾದರೆಲ್ಲರೂ ಚಿಂತಿತರಾದರು".

ದಶರಥನು ಸ್ವರ್ಗವಾಸಿಯಾದಮೇಲೆ ಭರತನು ಶತ್ರುಘ್ನ ನೊಡನೆ ತನ್ನ ಸೋದರಮಾವನ ಮನೆಯಿಂದ ಅಯೋಧ್ಯೆಗೆ ಹಿಂತಿರುಗಿದನು. ಆಗ ಶೋಕಸಾಗರದಲ್ಲಿ ಮುಳುಗಿದ ಅಯೋಧ್ಯೆಯ ದೃಶ್ಯ ಕರುಣಾಜನಕವಾಗಿದೆ. ನದಿಗಳು, ಸರೋವರಗಳು, ಉಪವನಗಳು ಇವೆಲ್ಲವೂ ಶ್ರೀ ಹೀನವಾಗಿ ಭರತನಿಗೆ ಕಂಡವು. ಕತ್ತೆಗಳೂ ನರಿಗಳೂ ವಿಕಾರಸ್ವರದಿಂದ ಕೂಗಿದವು. ಗಳಿಗೆ ಗಳಿಗೆಗೂ ಭರತನ ದುಃಖ ಹೆಚ್ಚಾಗುತ್ತಾ

ಹೋಯಿತು. ಕೌಸಲ್ಯೆಯನ್ನು ಸಂದರ್ಶಿಸಿದಾಗ ಭರತನ ಹೃದಯ ಗ್ಲಾನಿ ಮತ್ತು ಪಶ್ಚಾತ್ತಾಪದಿಂದ ಬೆಂದು ಬೇಗುದಿಗೊಂಡಿತು. ಭರತನಿಗೆ ರಾಮನಲ್ಲಿರುವ ನಿಷ್ಕಲ್ಮಷ ಸ್ನೇಹವನ್ನು ನೋಡಿ ಕೌಸಲ್ಯೆ ತಡೆಯಲಾರದ ದುಃಖದಿಂದ ಕಣ್ಣೀರು ಸುರಿಸುತ್ತಾ ಅವನನ್ನು ಆಲಿಂಗಿಸಿ, ತೊಡೆಯಮೇಲೆ ಎತ್ತಿಕೊಂಡು ಅವನ ಕಣ್ಣೀರನ್ನು ಸೆರಗಿನಿಂದ ಒರಸಿದಳು. ಈ ತಾಯಿ ಮಕ್ಕಳ ದುಃಖವನ್ನು ನೋಡಿ ಅಂತಃಪುರವೇ ಶೋಕಸಾಗರದಲ್ಲಿ ಮುಳುಗಿತು. ಆ ವೇಳೆ

"ಅಸ ಕಹಿ ಮಾತು ಭರತ ಹಿಯಲಾಯೇ ।
ಥನ ಪಯ ಸ್ರವಹಿಂ ನಯನಜಲ ಛಾಯೇ ॥"

"ಹೀಗೆಂದು ಹೇಳಿ ಕೌಸಲ್ಯೆ ಭರತನನ್ನು ಅಪ್ಪಿಕೊಂಡಳು. ಆಗ ಅವಳ ಸ್ತನಗಳಿಂದ ಹಾಲೂ, ಕಣ್ಣುಗಳಿಂದ ನೀರೂ ಹರಿಯತೊಡಗಿದವು". ಎಂತಹ ಅದ್ಭುತ ದೃಶ್ಯ!

ಚಿತ್ರಕೂಟಕ್ಕೆ ಭರತನು ಹೋಗುತ್ತಿರುವಾಗ ಹಾಗೂ ಉದ್ಧವನ ಕಂಡುಬರುವ ಕರುಣ ದೃಶ್ಯ, ಚಿತ್ರಕೂಟದಲ್ಲಿ ರಾಮಭರತರ ಮಿಲನ, ಯುದ್ಧಕಾಂಡದಲ್ಲಿ ಮೇಘನಾದನು ಪ್ರಯೋಗಿಸಿದ ಶಕ್ತಿಯಿಂದ ಲಕ್ಷ್ಮಣನು ಮೂರ್ಛಿತನಾಗಿ ಬಿದ್ದಿರುವಾಗ ರಾಮನ ವಿಲಾಪ, ಮೊದಲಾದ ಅನೇಕ ಪ್ರಸಂಗಗಳನ್ನು ತುಲಸೀದಾಸರು ಹೃದಯಂಗಮವಾಗಿ ವರ್ಣಿಸಿ ಕರುಣರಸದ ಪ್ರವಾಹವನ್ನು ಹರಿಸಿದ್ದಾರೆ.

ಸಂದರ್ಭಾನುಸಾರವಾಗಿ ತುಲಸೀದಾಸರು ಔಚಿತ್ಯಕ್ಕೆ ಮೀರದಂತೆ ನವರಸಗಳನ್ನು ವರ್ಣಿಸಿದ್ದಾರೆ. ಲಕ್ಷ್ಮಣ, ಹನುಮಂತ, ಅಂಗದ, ಮೇಘನಾದ, ಮೊದಲಾದ ಪಾತ್ರಗಳ ಸ್ವಭಾವದ ಅಂಗವಾಗಿ ವೀರರಸವು ಸಹಜ ಸೌಂದರ್ಯದಿಂದ ವ್ಯಕ್ತವಾಗು

ತ್ತದೆ. ಭರತನು ಸಾವಿರಾರು ಜನರಿಂದೊಡಗೂಡಿ ಚಿತ್ರಕೂಟಕ್ಕೆ ಬರುತ್ತಿರುವುದನ್ನು ನೋಡಿ ಲಕ್ಷ್ಮಣನು ಎದ್ದು ನಿಂತು ಕೈ ಜೋಡಿಸಿಕೊಂಡು ಹೇಳುವ ಮಾತುಗಳಲ್ಲಿ ವೀರರಸ ಚಿಮ್ಮುತ್ತದೆ.

"ಉಠಿ ಕರ ಜೋರಿ ರಜಾಯಸು ಮಾಂಗಾ। ಮನಹು ವೀರರಸ ಸೋವತ ಜಾಗಾ॥
ಬಾಂಧಿ ಜಟಾ ಸಿರ ಕಸಿ ಕಟಿ ಭಾಥಾ। ಸಾಜಿ ಸರಾಸನು ಸಾಯಕು ಹಾಥಾ॥"

"ಎದ್ದು ನಿಂತು, ಕೈಜೋಡಿಸಿ ಅಪ್ಪಣೆಯನ್ನು ಬೇಡುತ್ತಿರುವ ಲಕ್ಷ್ಮಣನು ವೀರರಸವೇ ನಿದ್ರೆಯಿಂದ ಎಚ್ಚತ್ತು ನಿಂತಿದೆಯೋ ಎಂಬಂತೆ ಕಾಣುತ್ತಿದ್ದನು. ತಲೆಯ ಜಟೆಗಳನ್ನು ಬಿಗಿದುಕೊಂಡು, ಸೊಂಟಕ್ಕೆ ಬತ್ತಳಿಕೆಗಳನ್ನು ಕಟ್ಟಿಕೊಂಡು ಅವನು ಕೈಯಲ್ಲಿ ಧನುರ್ಬಾಣಗಳನ್ನು ಧರಿಸಿದನು."

ಭರತನು ಸೇನಾ ಸಮೇತನಾಗಿ ಬರುತ್ತಿರುವುದನ್ನು ಕಂಡು ನಿಷಾದ ರಾಜನು ಹೇಳುವ ಮಾತುಗಳಲ್ಲಿಯೂ ವೀರರಸ ತುಂಬಿ ತುಳುಕಾಡುತ್ತದೆ. ಕವಿತಾವಲಿಯಲ್ಲಿ ಹನುಮಂತನ ಶೌರ್ಯ ವರ್ಣನೆ ಮನೋಹರವಾಗಿದೆ. ಭಾವಕ್ಕನುಸಾರವಾದ ಶಬ್ದಾವಳಿಯ ಸೊಬಗು ವರ್ಣನಾತೀತವಾಗಿದೆ.

ಮತ್ತ ಭಟ–ಮುಕುಟ–ದಸಕಂಧ–ಸಾಹಸ ಸಯಿಲ
ಸೃಂಗ–ಬಿದ್ದರನಿ ಜನು ವಜ್ರ ಟಾಂಕೀ।
ದಸನ ಧರಿ ಧರನಿ ಚಿಕ್ಕರತ ದಿಗ್ಗಜ ಕಮಠ,
ಸೇಷ ಸಂಕುಚಿತ, ಸಂಕಿತ ಪಿನಾಕೀ॥
ಚಲಿತ ಮಹಿ ಮೇರು ಉಚ್ಛಲಿತ ಸಾಯರ ಸಕಲ
ವಿಕಲ ವಿಧಿ ಬಧಿರ ದಿಸಿ ಬಿದಿಸ ಝಾಂಕೀ।
ರಜನಿಚರ–ಘರನಿ ಘರ ಗರ್ಭ–ಅರ್ಭಕ ಸ್ರವತ,
ಸುವತ ಹನುಮಾನ ಕೀ ಹಾಂಕ ಬಾಂಕೀ॥

"ವೀರಶಿರೋಮಣಿಯಾದ ರಾವಣನ ಸಾಹಸವೆಂಬ ಪರ್ವತ ಶಿಖರವನ್ನು ವಿಚ್ಛೇದಿಸುವುದಕ್ಕಾಗಿ ವಜ್ರಾಯುಧದ ಪ್ರಹಾರವೋ ಎಂಬಂತೆ ವೀರ ಹನುಮಂತನ ಭಯಂಕರ ರಣಗರ್ಜನೆಯು ಕೇಳಿಸಿತು. ಈ ಗರ್ಜನೆಯನ್ನು ಕೇಳಿ ದಿಗ್ಗಜಗಳು ತಮ್ಮ ದಂತಗಳನ್ನು ಭೂಮಿಯ ಮೇಲಿಟ್ಟು ಭಾರವನ್ನು ಸಹಿಸಲಾರದೆ ನಡುಗಿದುವು. ಕೂರ್ಮವೂ ಮತ್ತು ಶೇಷನಾಗನೂ ಮುದುರಿ ಕೊಂಡರು. ಪಿನಾಕಪಾಣಿ ಮಹಾದೇವನಿಗೆ ಸಂದೇಹವುಂಟಾ ಯಿತು. ಮೇರು ಪರ್ವತವು ಅಲ್ಲಾಡತೊಡಗಿತು. ಸಮುದ್ರವು ಅಲ್ಲೋಲಕಲ್ಲೋಲವಾಯಿತು. ಬ್ರಹ್ಮನು ಕಿವುಡನಂತಾಗಿ ಅತ್ತ ಇತ್ತ ನೋಡತೊಡಗಿದನು. ರಾಕ್ಷಸರ ಮನೆಯ ಗರ್ಭಿಣಿಯರಿಗೆ ಗರ್ಭಸ್ರಾವವಾಯಿತು".

ಕವಿತಾವಲಿಯಲ್ಲಿ ಲಂಕಾ ದಹನ ವರ್ಣನೆ ಸ್ವಾಭಾವಿಕ ಸೌಂದರ್ಯದಿಂದ ಕೂಡಿರುವುದಲ್ಲದೆ ಭಯಾನಕರಸಕ್ಕೆ ಉತ್ತಮ ಉದಾಹರಣೆಯಾಗಿದೆ—

ಬಾಲಧೀ ಬಿಸಾಲ ಬಿಕರಾಲ ಜ್ವಾಲ–ಜಾಲ ಮಾನೋಂ.
ಲಂಕ ಲೀಲಿಬೇಕೋ ಕಾಲ ರಸನಾ ಪಸಾರೀ ಹೈ।
ಕೈಧೌಂ ವ್ಯೋಮ ವೀಥಿಕಾ ಭರೇ ಹೈಂ ಭೂರಿಧೂಮಕೇತು.
ವೀರರಸ ವೀರ ತರವಾರಿ ಸೀ ಉಘಾರೀ ಹೈ।
ತುಲಸೀ ಸುರೇಸ, ಚಾಪ–ಕೈಧೌಂ ದಾಮಿನೀ ಕಲಾಪ.
ಕೈಧೌಂ ಚಲೀ ಮೇರು ತೇಂ ಕೃಸಾನು–ಸಾರಿ ಭಾರೀ ಹೈ।
ದೇಖೇ ಜಾತುಧಾನ ಜಾತುಧಾನೀ ಅಕುಲಾನೀ ಕಹೈಂ.
"ಕಾನನ ಉಜಾರ್‍ಯೋ, ಅಬ್ ನಗರ ಪ್ರಜಾರೀ ಹೈ"॥

"ವಿಕರಾಳ ಜ್ವಾಲೆಯಿಂದ ಕೂಡಿದ ಹನುಮಂತನ ಉದ್ದವಾದ ಬಾಲವು ಎಷ್ಟು ಭಯಂಕರವಾಗಿತ್ತೆಂದರೆ ಲಂಕೆಯನ್ನೇ ನುಂಗು ವುದಕ್ಕಾಗಿ ಯಮನು ನಾಲಗೆಯನ್ನು ಚಾಚಿದ್ದಾನೋ ಅಥವಾ

ಆಕಾಶ ಮಾರ್ಗದಲ್ಲಿ ಬಹಳ ಧೂಮಕೇತುಗಳು ತುಂಬಿದೆಯೋ ಅಥವಾ ವೀರರಸವೇ ವೀರನೆಂಬ ಕತ್ತಿಯನ್ನು ಸೆಳೆದಿದೆಯೋ ಅಥವಾ ಇಂದ್ರನ ಬಿಲ್ಲೋ ಅಥವಾ ಮಿಂಚಿನ ಸಮೂಹವೋ ಅಥವಾ ಮೇರು ಪರ್ವತದಿಂದ ಬೆಂಕಿಯು ಹೊಳೆ ಹರಿಯು ತ್ತಿದೆಯೋ ಎಂಬಂತೆ ಇತ್ತು. ರಾಕ್ಷಸ ರಾಕ್ಷಸಿಯರು ಇದನ್ನು ನೋಡಿ ಗಾಬರಿಗೊಂಡು ಹೀಗೆಂದರು—“ಆಗ ಉದ್ಯಾನವನ್ನು ಹಾಳುಮಾಡಿದನು, ಈಗ ನಗರವನ್ನು ಹೊತ್ತಿಸಿ ಉರಿಸು ತ್ತಿದ್ದಾನೆ”.

ಘಟನೆಗಳ ನಿರೂಪಣೆಗೆ ಅನುಕೂಲವಾಗುವಂತೆ ತುಲಸೀ ದಾಸರು ಜುಗುಪ್ಸೆ, ನಿರ್ವೇದ, ವಾತ್ಸಲ್ಯ, ಮೊದಲಾದ ಭಾವ ಗಳನ್ನು ವರ್ಣಿಸಿದ್ದಾರೆ. ಹಾಸ್ಯರಸವನ್ನು ಚಿತ್ರಿಸಿರುವ ರೀತಿಯಲ್ಲಿ ತುಲಸೀದಾಸರ ವೈಶಿಷ್ಟ್ಯ ಎದ್ದು ಕಾಣುತ್ತದೆ. ಹಾಸ್ಯರಸವೂ ಭಕ್ತಿಭಾವಕ್ಕೆ ಪೋಷಕವಾಗಿದೆ. ಅಯೋಧ್ಯೆಯಿಂದ ಹೊರಟು ರಾಮನು ಸೀತೆ ಮತ್ತು ಲಕ್ಷ್ಮಣರೊಡನೆ ಗಂಗಾನದಿಯ ದಡ ವನ್ನು ಸೇರುತ್ತಾನೆ. ಆಗ ಅಂಬಿಗ ಮತ್ತು ರಾಮ ಇವರ ಮಧ್ಯೆ ನಡೆಯುವ ಸಂಭಾಷಣೆ ಬಹಳ ಚಿತ್ತಾಕರ್ಷಕವಾಗಿದೆ—

ಮಾಂಗೀ ನಾವ, ನ ಕೇವಟು ಆನಾ । ಕಹಯಿ ತುಮ್ಹಾರ ಮರಮು ಮೈಜಾನಾ ॥
ಚರನ ಕಮಲಜ ರಜ-ಕಹುಂ ಸಬ ಕಹಯೀ । ಮಾನುಷಕರನಿ ಮೂರಿ ಕಛು ಅಹಯೀ ॥
ಛುವತ ಶಿಲಾಭಯಿ ನಾರಿ ಸುಹಾಯೀ । ಪಾಹನ ತೇಂ ನ ಕಾಠ ಕಠಿನಾಯೀ ॥
ತರನಿಪ್ರು ಮುನಿಘರನೀ ಹೊಯಿಜಾಯೀ । ಬಾಟಪರೇಂ ಮೋರಿ ನಾವ ಉಡಾಯೀ ॥
ಏಹಿ ಪ್ರತಿ ಪಾಲವುಂ ಸಬು ಪರಿವಾರೂ । ನಹಿಂ ಜಾನೌಂ ಕಛು ಔರ ಕಬಾರೂ ॥

ಜೌಂ ಪ್ರಭು ಪಾರ ಅವಸಿ ಗಾ ಚಹಹೂ। ಮೋಹಿ ಪದ ಪದುಮ
ಪಖಾರನ ಕಹಹೂ॥

*　*　*　*　*

ಸುನಿ ಕೇವಟಕೇ ಬೈನ ಪ್ರೇಮ ಲಪೇಟೇ ಅಟಪಟೇ।
ಬಿಹಂಸೇ ಕರುನಾ ಅಯನ ನಿರಖಿ ಜಾನಕೀ ಲಖನ ತನ॥

"ದೋಣಿ ತರುವುದಕ್ಕಾಗಿ ರಾಮನು ಹೇಳುತ್ತಾನೆ. ಆದರೆ ಅಂಬಿಗನು ತರಲು ಒಪ್ಪುವುದಿಲ್ಲ. ಅವನು ಹೇಳುತ್ತಾನೆ "ನಿನ್ನ ಉಪಾಯ ನನಗೆ ಗೊತ್ತಿದೆ. ನಿನ್ನ ಚರಣಕಮಲಗಳ ಧೂಳಿನಲ್ಲಿ ಎಲ್ಲಾ ವಸ್ತುಗಳನ್ನು ಮನುಷ್ಯರನ್ನಾಗಿ ಮಾಡುವ ಅದ್ಭುತ ಔಷಧಿಯ ಗುಣವಿದೆ. ಅದರ ಸ್ಪರ್ಶದಿಂದಲೇ ಕಲ್ಲು ಸುಂದರ ಸ್ತ್ರೀರೂಪ ತಾಳಿತು. ಕಲ್ಲಿಗಿಂತ ಮರ ಕಠಿಣವಲ್ಲ. ನನ್ನ ಈ ದೋಣಿಯೂ ಮುನಿಪತ್ನಿಯಾಗಿ ಬಿಟ್ಟರೆ ನನ್ನ ಗತಿಯೇನಾದೀತು? ಇದರಿಂದಲೇ ನನ್ನ ಕುಟುಂಬದ ಪೋಷಣೆಯಾಗುತ್ತಿದೆ. ನನಗೆ ಬೇರೆ ಯಾವ ವೃತ್ತಿಯೂ ತಿಳಿಯದು. ಸ್ವಾಮಿಗಳು ನಿಜವಾಗಿಯೂ ನದೀ ದಾಟಬೇಕೆಂದು ಇಷ್ಟಪಡುವುದಾದರೆ ಪಾದಪದ್ಮಗಳನ್ನು ತೊಳೆಯುವುದಕ್ಕೆ ಅಪ್ಪಣೆಯಾಗಲಿ".

*　*　*　*

"ಅಂಬಿಗನ ಪ್ರೇಮಪೂರಿತ ಮಾತುಗಳನ್ನು ಕೇಳಿ ಕರುಣಾಮಯನಾದ ರಾಮನು ಸೀತೆ ಮತ್ತು ಲಕ್ಷ್ಮಣರ ಕಡೆಗೆ ನೋಡಿ ನಸುನಕ್ಕನು".

ಹಾಸ್ಯ ಮತ್ತು ಭಕ್ತಿಯಿಂದ ಕೂಡಿದ ಇನ್ನೊಂದು ಸುಂದರ ವರ್ಣನೆಯನ್ನು ಕವಿತಾವಲಿಯಲ್ಲಿ ಕಾಣಬಹುದು.

ವಿಂಧ್ಯಕೆ ವಾಸೀ ಉದಾಸೀ ತಪೋವ್ರತಧಾರೀ
ಮಹಾ ಬಿನು ನಾರಿ ದುಖಾರೇ ।
ಗೌತಮತೀಯ ತರೀ, ತುಲಸೀ, ಸೋ ಕಥಾ ಸುನಿಭೇ
ಮುನಿವೃಂದ ಸುಖಾರೇ ॥
ಹ್ವೈಹೈಂ ಸಿಲಾ ಸಬ ಚಂದ್ರಮುಖೀ ಪರಸೇ ಪದ–ಮಂಜುಲ–ಕಂಜ
ತಿಹಾರೇ ।
ಕೀನ್ಹೀಂ ಭಲೀ ರಘುನಾಯಕಜೂ ಕರುನಾ ಕರಿ ಕಾನನ ಕೋ ಪಗು
ಧಾರೇ ॥

" ವಿಂಧ್ಯನಿವಾಸಿಗಳಾದ ಮಹಾತಪಸ್ವಿಗಳೂ ವೈರಾಗಿಗಳೂ ಸ್ತ್ರೀಯರಿಲ್ಲದೆ ದುಃಖಿತರಾಗಿದ್ದರು. ಗೌತಮನ ಪತ್ನಿಯ ಉದ್ಧಾರದ ಕಥೆ ಕೇಳಿ ಆ ಮುನಿಗಳಿಗೆ ಸಂತೋಷವಾಯಿತು. ರಾಮನ ಚರಣಾರವಿಂದದ ಸ್ಪರ್ಶದಿಂದ ಕಲ್ಲುಗಳೆಲ್ಲ ಚಂದ್ರಮುಖಿಯರಾಗುವರು. ರಘುನಾಥನು ದಯೆಯಿಟ್ಟು ಕಾಡಿಗೆ ಬಂದಿರುವುದು ಒಳ್ಳೆಯದೇ ಆಯಿತು ".

ಅಲಂಕಾರವಿನ್ಯಾಸ

ತುಲಸೀದಾಸರು ಕಾವ್ಯಶಾಸ್ತ್ರವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಕಾವ್ಯದಲ್ಲಿ ಅಲಂಕಾರಗಳ ಪ್ರಯೋಜನವೇನೆಂದು ಅವರು ತಿಳಿದಿದ್ದರು. ಪಾಂಡಿತ್ಯ ಪ್ರದರ್ಶನವಾಗಲಿ, ಚಮತ್ಕಾರಗಳನ್ನು ತೋರಿಸಿ ಆಶ್ಚರ್ಯಗೊಳಿಸುವುದಾಗಲಿ ಅವರ ಉದ್ದೇಶವಾಗಿರಲಿಲ್ಲ. ಉದಾತ್ತವಾದ ಗುರಿಯನ್ನಿಟ್ಟುಕೊಂಡೇ ಅವರು ಕಾವ್ಯಗಳನ್ನು ರಚಿಸಿದರು. ಆದುದರಿಂದ ಅವರ ಕೃತಿಗಳಲ್ಲಿ ಅಲಂಕಾರಗಳ ಯೋಜನೆ ಕೃತ್ರಿಮವಾಗಿಲ್ಲ. ಪಾತ್ರಗಳ ಸ್ವಭಾವ ನಿರೂಪಣೆ ಮತ್ತು ಪರಿಸ್ಥಿತಿಗಳ ಮಾರ್ಮಿಕ ವರ್ಣನೆಗಳಿಗೆ ಸಹಾಯಕವಾಗುವಂತೆ ಅವರು ನಾನಾ ಅಲಂಕಾರಗಳನ್ನು ಪ್ರಯೋಗಿಸಿದ್ದಾರೆ.

ತುಲಸೀದಾಸರು ತಮ್ಮ ಕೃತಿಗಳಲ್ಲಿ ಉಪಮೆ, ರೂಪಕ, ಉತ್ಪ್ರೇಕ್ಷೆ, ಅತಿಶಯೋಕ್ತಿ, ಯಮಕ, ಅನುಪ್ರಾಸ, ದೃಷ್ಟಾಂತ, ಮೊದಲಾದ ಅಲಂಕಾರಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಪಾತ್ರಗಳ ವ್ಯಕ್ತಿತ್ವದ ಹಿರಿಮೆಯನ್ನು ತುಲಸೀದಾಸರು ಅಲಂಕಾರಗಳ ಸಹಾಯದಿಂದ ಎಷ್ಟು ಚೆನ್ನಾಗಿ ವರ್ಣಿಸುತ್ತಾರೆಂಬುದನ್ನು ಒಂದೆರಡು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು.

> "ಲಸತ ಮಂಜುಮುನಿ ಮಂಡಲೀ ಮಧ್ಯ ಸೀಯ ರಘು ಚಂದು।
> ಗ್ಯಾನ ಸಭಾ ಜನು ತನು ಧರೇಂ ಭಗತಿ ಸಚ್ಚಿದಾನಂದು॥"

"ಶರೀರಧಾರಣೆ ಮಾಡಿದ ಜ್ಞಾನವೆಂಬ ಸಭೆಯಲ್ಲಿ ಭಕ್ತಿ ಮತ್ತು ಸಚ್ಚಿದಾನಂದರು ಸಶರೀರರಾಗಿ ಕುಳಿತಿರುವರೋ ಎಂಬಂತೆ ಮುನಿಗಳ ಮಂಡಲಿಯ ಮಧ್ಯದಲ್ಲಿ ಸೀತೆ ಮತ್ತು ರಾಮಚಂದ್ರರು ಕಂಗೊಳಿಸುತ್ತಿದ್ದಾರೆ". ಇಲ್ಲಿ ಸಾಂಗರೂಪಕ ಮತ್ತು ವಸ್ತೂತ್ಪ್ರೇಕ್ಷೆ ಈ ಎರಡು ಅಲಂಕಾರಗಳ ಪ್ರಯೋಗ ಎಷ್ಟು ಸಮರ್ಪಕ ಮತ್ತು ಪ್ರಭಾವಶಾಲಿಯಾಗಿದೆ!

ದೃಷ್ಟಾಂತ ಅಲಂಕಾರದ ಸಹಾಯದಿಂದ ಕೈಕೇಯಿ ಮತ್ತು ರಾಮ ಇವರಿಬ್ಬರ ಸ್ವಭಾವವನ್ನು ತುಲಸೀದಾಸರು ಬಹಳ ಸೊಗಸಾಗಿ ಚಿತ್ರಿಸಿದ್ದಾರೆಂಬುದನ್ನು ಈ ಕೆಳಗಿನ ಪದ್ಯದಿಂದ ಅರಿತುಕೊಳ್ಳಬಹುದು—

> ಸಹಜ ಸರಲ ರಘುವರ ವಚನ ಕುಮತಿ ಕುಟಿಲ ಕರಿ ಜಾನ।
> ಚಲಯಿ ಜೋಂಕ ಜಿಮಿ ವಕ್ರಗತಿ ಜದ್ಯಪಿ ಸಲಿಲು ಸಮಾನ॥

"ನೀರು ಡೊಂಕಾಗಿಲ್ಲದಿದ್ದರೂ ನೀರುಜಿಗಣೆ ಡೊಂಕಾಗಿ ನಡೆಯುವಂತೆ ಸರಲ ಸಹಜ ಸ್ವಭಾವವುಳ್ಳ ರಾಮಚಂದ್ರನ ಮಾತುಗಳನ್ನು ದುಷ್ಟಬುದ್ಧಿಯ ಕೈಕೇಯಿ ಕುಹಕವೆಂದು ಭಾವಿಸಿದಳು".

ರಘುಕುಲರೀತಿ ಸದಾ ಚಲಿ ಆಯೀ ।
ಪ್ರಾಣ ಜಾಯಂ ಪರವಚನ ನ ಜಾಯೀ ॥

ಇದು ಅಂತ್ಯಾನುಪ್ರಾಸಕ್ಕೆ ಉತ್ತಮ ಉದಾಹರಣೆಯಾಗಿದೆ ವೃತ್ತ್ಯಾನುಪ್ರಾಸದ ಸುಂದರ ಪ್ರಯೋಗಕ್ಕೆ ಕೆಳಗಿನ ಪದ್ಯವನ್ನು ನೋಡಬಹುದು.

"ಸಮ ಸುಬರನ ಸುಖಮಾಕರ ಸುಖದ ನ ಥೋರ ।
ಸಿಯ ಸಂಗ ಸಖಿ ಕೋಮಲ ಕನಕ ಕಠೋರ ॥"

ಕಾಡಿನ ಕಷ್ಟಗಳನ್ನು ವಿವರಿಸಿ ಸೀತೆಯು ಅಯೋಧ್ಯೆಯಲ್ಲಿ ಇರುವುದು ಸರಿ ಎಂದು ರಾಮನು ಉಪದೇಶಮಾಡಿದ್ದಕ್ಕೆ ಸೀತೆ ಹೀಗೆನ್ನುತ್ತಾಳೆ:—

ಮೈ ಸುಕುಮಾರಿ ನಾಥ ಬನ ಜೋಗೂ ।
ತುಮಹಿ ಉಚಿತ ತಪ, ಮೋಕಹಂ ಭೋಗೂ ॥

"ನಾನು ಸುಕುಮಾರಿ, ನಾಥನು ಕಾಡಿಗೆ ಯೋಗ್ಯನು. ನಿಮಗೆ ತಪಸ್ಸೂ ನನಗೆ ಭೋಗವೂ ಬಹಳ ಸರಿ". ಕಾಕು ವಕ್ರೋಕ್ತಿಯ ಪ್ರಯೋಗ ಎಷ್ಟು ಅಂದವಾಗಿದೆ ಇಲ್ಲಿ. ಪರಮಾತ್ಮನ ಸಗುಣ ನಿರ್ಗುಣ ಸ್ವರೂಪವನ್ನು ಉಪಮಾ ಅಲಂಕಾರದ ಸಹಾಯದಿಂದ ತುಲಸೀದಾಸರು ಹೀಗೆ ವರ್ಣಿಸಿರುತ್ತಾರೆ:

ಜೋ ಗುನ ರಹಿತ ಸಗುನ ಸೋಯಿ ಕೈಸೆ ।
ಜಲುಹಿಮ ಉಪಲ ವಿಲಗ ನಹಿಂ ಜೈಸೆ ॥

"ಹಿಮದ ಹೆಂಟೆ ಮತ್ತು ನೀರು ಯಾವ ರೀತಿ ಬೇರೆ ಬೇರೆ ಯಾಗಿಲ್ಲವೋ ಅದೇ ರೀತಿಯಲ್ಲಿ ಪರಮಾತ್ಮನ ಸಗುಣ ಮತ್ತು ನಿರ್ಗುಣ ಸ್ವರೂಪಗಳು ಬೇರೆ ಬೇರೆಯಲ್ಲ".

ಸಜ್ಜನರ ಗುಣಗಳನ್ನು ವರ್ಣಿಸುವ ಈ ಕೆಳಗಿನ ಪದ್ಯದಲ್ಲಿ ಸಾಂಗ ರೂಪಕ ಅಲಂಕಾರ ಬಹಳ ಸುಂದರವಾಗಿದೆ—

"ಸಂತ ಹಂಸ ಗುನ ಗಹಹಿಂ ಪಯ ಪರಿಹರಿ ಬಾರಿ ವಿಕಾರ ॥"

"ಹಂಸದಂತಿರುವ ಸಜ್ಜನರು ನೀರಿನಂತಿರುವ ದುರ್ಗುಣಗಳನ್ನು ತ್ಯಜಿಸಿ ಹಾಲಿನಂತಿರುವ ಸದ್ಗುಣಗಳನ್ನು ಗ್ರಹಿಸುತ್ತಾರೆ".

ಅನೇಕ ವೇಳೆ ತುಲಸೀದಾಸರು ವಸ್ತು, ಪಾತ್ರ, ಘಟನೆಗಳನ್ನು ವರ್ಣಿಸುತ್ತಾ "ಇನ್ನು ಇದು ಅವರ್ಣನೀಯು". "ಇದು ಉಪಮಾರಹಿತವಾದುದು", "ಭರತನಿಗೆ ಸಮಾನ ಭರತನೇ", "ರಾಮನಿಗೆ ಸಮಾನ ರಾಮನೇ" ಎನ್ನುವುದುಂಟು. ಒಟ್ಟಿನಲ್ಲಿ ತುಲಸೀದಾಸರ ಕೃತಿಗಳಲ್ಲಿ ಅಲಂಕಾರಗಳ ಪ್ರಯೋಗ ಸ್ವಾಭಾವಿಕವಾಗಿರುವುದಲ್ಲದೆ ರಸಾಭಿವ್ಯಂಜನೆಗೆ ಪೂರ್ಣ ಸಹಕಾರಿಯಾಗಿದೆ.

ಭಾಷೆ—ಶೈಲಿ

ತುಲಸೀದಾಸರು ತಮ್ಮ ಕಾಲದಲ್ಲಿ ಬಳಕೆಯಲ್ಲಿದ್ದ ವ್ರಜ ಮತ್ತು ಅವಧೀ ಈ ಎರಡೂ ಭಾಷೆಗಳಲ್ಲಿ ಸಮಾನ ಪಾಂಡಿತ್ಯ ಪಡೆದಿದ್ದರು. ಸೂರದಾಸರ ಸೂರಸಾಗರದಲ್ಲಿ ವ್ರಜಭಾಷೆಯ ಯಾವ ಮಾಧುರ್ಯವಿದೆಯೋ ಅದೇ ಮಾಧುರ್ಯ ತುಲಸೀದಾಸರ ಕವಿತಾವಲಿ ಮತ್ತು ಕೃಷ್ಣ ಗೀತಾವಲಿಯಲ್ಲಿದೆ. ಇದೇ ರೀತಿಯಲ್ಲಿ ಜಾಯಸಿಯು ರಚಿಸಿದ ಪದ್ಮಾವತದ ಅವಧೀ ಭಾಷೆಯಲ್ಲಿರುವ ಸಹಜ ಸ್ವಾರಸ್ಯವನ್ನು ತುಲಸೀದಾಸರ ಜಾನಕೀ ಮಂಗಲ, ಪಾರ್ವತೀ ಮಂಗಲ, ಬರವೈ ರಾಮಾಯಣ ಮತ್ತು ರಾಮಲಲಾ ನಹಛೂ, ಮೊದಲಾದ ಕೃತಿಗಳಲ್ಲಿ ಕಾಣಬಹುದು. ತುಲಸೀದಾಸರು ಸಂಸ್ಕೃತ ಭಾಷೆಯಲ್ಲಿ ಎಂತಹ ಪ್ರಕಾಂಡ ಪಂಡಿತರಾಗಿದ್ದರೆಂಬುದನ್ನು ಅವರ ವಿನಯ ಪತ್ರಿಕೆಯಿಂದ ತಿಳಿಯಬಹುದು. ರಾಮಚರಿತಮಾನಸದಲ್ಲಿ ಸಂಸ್ಕೃತದ ತತ್ಸಮ ಶಬ್ದಗಳು ಹೆಚ್ಚಾಗಿರುವುದಾದರೂ ಭಾಷೆಯು ಸರಳವಾಗಿದೆ

ಮತ್ತು ಪ್ರಸಾದ ಗುಣಕ್ಕೆ ಧಕ್ಕೆ ಬಂದಿಲ್ಲ. ತುಲಸೀದಾಸರು ವೇದ, ವೇದಾಂಗ, ಕಾವ್ಯ, ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದುದರಿಂದ ಅವರ ಕೃತಿಗಳಲ್ಲಿರುವ ಭಾಷೆಯು ವ್ಯಾಕರಣಬದ್ಧವಾಗಿದ್ದು ನಿರ್ದೋಷ ವಾಗಿದೆ. ಅವರು ಮುಖ್ಯವಾಗಿ ಅವಧೀ ಮತ್ತು ವ್ರಜ ಭಾಷೆ ಗಳನ್ನು ಬಳಸಿದ್ದರೂ ಭೋಜಪುರೀ, ಬುಂದೇಲ್‌ಖಂಡೀ, ಮೊದಲಾದ ಪ್ರಾದೇಶಿಕ ನುಡಿಗಳ ಶಬ್ದಗಳನ್ನೂ, ಅರಬೀ. ಫಾರಸೀ ಶಬ್ದಗಳನ್ನೂ ನಿಸ್ಸಂಕೋಚದಿಂದ ಉಪಯೋಗಿಸಿದ್ದಾರೆ.

"ಸರಲ ಕಬಿತ ಕೀರತಿ ವಿಮಲ, ಸೋಯಿ ಆದರಹಿಂ ಸುಜಾನ" ಭಾಷೆಯು ಸರಳವಾಗಿರುವುದೇ ಅದರ ಕೀರ್ತಿ. ಅಂತಹ ಕಾವ್ಯವನ್ನೇ ಸಜ್ಜನರು ಗೌರವಿಸುತ್ತಾರೆ. ಇದೇ ಕಾವ್ಯ ಭಾಷೆಯ ವಿಷಯದಲ್ಲಿ ತುಲಸೀದಾಸರ ಆದರ್ಶವಾಗಿತ್ತು. ಏತಕ್ಕೆಂದರೆ, ಕಾವ್ಯ ರಚಿಸುವುದು ಪಾಂಡಿತ್ಯ ಪ್ರದರ್ಶನಕ್ಕಲ್ಲ. ಸರ್ವರೂ ಓದಿ ಆನಂದಪಡುವುದಕ್ಕೆ.

ತುಲಸೀದಾಸರ ಇನ್ನೊಂದು ವೈಶಿಷ್ಟ್ಯವೆಂದರೆ ಅವರು ತಮ್ಮ ಕಾಲದಲ್ಲಿ ಬಳಕೆಯಲ್ಲಿದ್ದ ಎಲ್ಲಾ ಕಾವ್ಯಶೈಲಿಗಳಲ್ಲಿ ಗ್ರಂಥಗಳನ್ನು ರಚಿಸಿರುವುದು. ವೀರಗಾಥಾ ಕಾಲದ "ಛಪ್ಪಯ ಪದ್ಧತಿ" ವಿದ್ಯಾಪತಿ ಮತ್ತು ಸೂರದಾಸರು ಉಪಯೋಗಿಸಿದ "ಗೀತ ಪದ್ಧತಿ", ಗಂಗಕವಿ ಮತ್ತು ಚಾರಣಕವಿಗಳ "ಕವಿತ್ತ–ಸವೈಯಾ ಪದ್ಧತಿ", ಕಬೀರದಾಸ ಮುಂತಾದ ನಿರ್ಗುಣ ಸಂತ ಕವಿಗಳ "ದೋಹಾ ಪದ್ಧತಿ" ಮತ್ತು ಸೂಫೀ ಕವಿಗಳ "ದೋಹಾ ಚೌಪಾಯಿ ಪದ್ಧತಿ". ಇತ್ಯಾದಿ ಐದು ರೀತಿಯ ಕಾವ್ಯಶೈಲಿ ಗಳಲ್ಲಿ ತುಲಸೀದಾಸರು ಕಾವ್ಯಗಳನ್ನು ರಚಿಸಿ ತಮ್ಮ ಸೈಪುಣ್ಯತೆ ಯನ್ನು ತೋರಿಸಿದ್ದಾರೆ. ವಿನಯಪತ್ರಿಕೆ, ಗೀತಾವಲಿ, ಕೃಷ್ಣ ಗೀತಾವಲಿ, ಮೊದಲಾದ ಕಾವ್ಯಗಳಲ್ಲಿ ನಾನಾ ರಾಗಗಳಿಗನು

ಸಾರವಾಗಿ ಬರೆದಿರುವ ಗೀತೆಗಳು ಬಹಳ ಸುಂದರವಾಗಿವೆ. ಕವಿತಾವಲಿಯಲ್ಲಿ ಕವಿತ್ತ ಮತ್ತು ಸವೈಯಾ ಛಂದಸ್ಸುಗಳ ಪ್ರಯೋಗ ಆಕರ್ಷಣೀಯವಾಗಿದೆ. ದೋಹಾವಲಿ. ದೋಹಾ ಛಂದಸ್ಸಿನಲ್ಲಿ ಬರೆದ ಕಾವ್ಯ. ರಾಮಚರಿತಮಾನಸವು ದೋಹಾ ಚೌಪಾಯಿ ಶೈಲಿಯ ಉತ್ತಮ ನಿದರ್ಶನ. ಈ ರೀತಿ ಮೇಲಿನ ಅನೇಕ ಕಾವ್ಯಶೈಲಿಗಳನ್ನು ಉಪಯೋಗಿಸಿ ರಚಿಸಿರುವ ಕಾವ್ಯಗಳ ಮುಖ್ಯ ವಸ್ತು ರಾಮಕಥೆ. ರಾಮಕಥೆಯನ್ನು ಎಷ್ಟು ವಿಧವಾಗಿ ಹಾಡಿದರೂ ತುಲಸೀದಾಸರಿಗೆ ತೃಪ್ತಿಯಿಲ್ಲ. ರಾಮನ ಮೇಲಿರುವ ಅನನ್ಯ ಭಕ್ತಿಯು ನಿದರ್ಶನವಿದು.

ತುಲಸೀದಾಸರ ಭಕ್ತಿಮಾರ್ಗ

ತುಲಸೀದಾಸರು ಪ್ರಥಮತಃ ಭಕ್ತರು, ಅನಂತರ ಕವಿ. ಭಕ್ತಿಭಾವದ ನಿರೂಪಣೆ, ಅಭಿವ್ಯಂಜನೆ ಇವೇ ಅವರ ಕಾವ್ಯ ಸಾಧನೆಯ ಮುಖ್ಯ ಉದ್ದೇಶ. ತುಲಸೀದಾಸರ ಇಷ್ಟದೇವತೆ ರಾಮ. ರಾಮ ಪರಮಾತ್ಮ. ಜಗತ್ತಿನ ಸಕಲ ಜಡ ಚೇತನ ವಸ್ತುಗಳ ರೂಪದಲ್ಲಿರುವವನೂ ಅವನೇ.

"ಜಡ ಚೇತನ ಜಗ ಜೀವ ಜತ ಸಕಲ ರಾಮ ಮಯ ಜಾನಿ।
ಬಂದೌಂ ಸಬಕೇ ಪದಕಮಲ ಸದಾ ಜೋರಿ ಜುಗಪಾನಿ॥"

"ಜಗತ್ತಿನ ಸಕಲ ಜಡ ಚೇತನ ವಸ್ತುಗಳು ರಾಮಮಯವೆಂದು ಭಾವಿಸಿ, ಕರಗಳನ್ನು ಜೋಡಿಸಿ ಎಲ್ಲರ ಚರಣಾರವಿಂದಗಳಿಗೂ ವಂದಿಸುತ್ತೇನೆ".

ತುಲಸೀದಾಸರ ರಾಮ ನಿರ್ಗುಣ, ನಿರಾಕಾರ ಪರಬ್ರಹ್ಮ. ಅರೂಪ, ಅನಾಮ, ಅಜ, ಸಚ್ಚಿದಾನಂದ, ವಿಶ್ವವ್ಯಾಪಕ. ಈ ರಾಮನೇ ದೇಹವನ್ನು ಧರಿಸಿ ನಾನಾ ಲೀಲೆಗಳನ್ನು ಮಾಡು

ತ್ತಾನೆ. ರಾಮನು ನಿರ್ಗುಣನೂ ಹೌದು, ಸಗುಣನೂ ಹೌದು; ಆದರೆ ತುಲಸೀದಾಸರಿಗೆ ಸಗುಣ ರಾಮನೇ ಪ್ರಿಯ.

"ರಾಮ ಬ್ರಹ್ಮ ಪರಮಾರಥ ರೂಪಾ। ಅಬಿಗತ ಅಲಖ ಅನಾದಿ
ಅನೂಪಾ॥
ಸಕಲ ವಿಕಾರ ರಹಿತ ಗತ ಭೇದಾ। ಕಹಿ ನಿತ ನೇತಿ ನಿರೂ
ಪಹಿಂ ವೇದಾ॥
ಭಗತ ಭೂಮಿ ಭೂಸುರ ಸುರಭಿ ಸುರಹಿತ ಲಾಗಿ ಕೃಪಾಲ।
ಕರತ ಚರಿತ ಧರಿ ಮನುಜ ತನು ಸುನತ ಮಿಟಹಿಂ ಜಗ ಜಾಲ॥"

"ರಾಮನು ಪರಬ್ರಹ್ಮ ಪರಮಾತ್ಮ. ಅವಿಗತ, ಅಲಖ, ಅನಾದಿ, ಅನೂಪ. ಸಕಲ ವಿಕಾರ ರಹಿತ, ಭೇದರಹಿತ. ವೇದಗಳು ನೇತಿನೇತಿ ಎಂದು ಸದಾ ನಿರೂಪಿಸುವುವು. ಇಂತಹ ಕೃಪಾಲು ಪರಮಾತ್ಮನೇ ಭಕ್ತರಿಗಾಗಿ, ಭೂಮಿ, ಭೂಸುರ, ಧೇನು, ಸುರ ಮೊದಲಾದವರ ಹಿತಕ್ಕಾಗಿ ಮನುಷ್ಯ ಶರೀರವನ್ನು ಧರಿಸಿ ನಾನಾ ವ್ಯವಹಾರಗಳನ್ನು ಮಾಡುವನು. ಈ ರಾಮನ ಚರಿತ್ರೆಯನ್ನು ಕೇಳುವುದರಿಂದ ಜಗತ್ತಿನ ತಾಪಗಳು ತೊಲಗುವುವು".

ತುಲಸೀದಾಸರಿಗೆ ಪರಮಾತ್ಮನ ಅವತಾರದಲ್ಲಿ ದೃಢನಂಬಿಕೆ. ದಶರಥಪುತ್ರ ರಾಮನೇ ಪರಬ್ರಹ್ಮ ಪರಮಾತ್ಮ. ರಾಮಚರಿತ ಮಾನಸದಲ್ಲಿ ರಾಮನ ಪಾತ್ರವನ್ನು ನಿರೂಪಿಸುತ್ತಾ ತುಲಸೀದಾಸರು ಆಗಾಗ ರಾಮನು ಮನುಷ್ಯನಲ್ಲ, ಈಶ್ವರ ಎಂಬುವುದನ್ನು ಸ್ಪಷ್ಟಪಡಿಸುವರು.

"ತಾತ ರಾಮಕಹಂ ನರ ಜನಿ ಮಾನಹು। ನಿರ್ಗುನ ಬ್ರಹ್ಮ
ಅಜಿತ ಅಜ ಜಾನಹು॥"
"ತಾತ ರಾಮ ನಹಿ ನರ ಭೂಪಾಲಾ। ಭುವನೇಶ್ವರ ಕಾಲಹು
ಕರ ಕಾಲಾ॥"

“ರಾಮನನ್ನು ಮನುಷ್ಯನೆಂದು ತಿಳಿಯಬೇಡ. ಅವನು ನಿರ್ಗುಣ, ಅಜ, ಬ್ರಹ್ಮನೆಂದು ತಿಳಿ”.

“ರಾಮನು ಮಾನವನಲ್ಲ. (ಎಲೈ ಭೂಪಾಲನೇ ಕೇಳು) ಅವನು ಭುವನೇಶ್ವರ, ಯಮನಿಗೂ ಯಮ”.

ನಿರ್ಗುಣ ಮತ್ತು ಸಗುಣ ಇವೆರಡಕ್ಕೂ ಏನೂ ಭೇದವಿಲ್ಲ. “ಭಗತ ಪ್ರೇಮ ಬಸ ಸಗುನ ಸೋ ಹೋಯೀ”. ನಿರ್ಗುಣ ಬ್ರಹ್ಮನು ಭಕ್ತರ ಮೇಲಿನ ಪ್ರೀತಿಯಿಂದ ಸಗುಣನಾಗುತ್ತಾನೆ. ಈ ಸಗುಣ ರೂಪವನ್ನು ತರ್ಕಬುದ್ಧಿ, ಶಕ್ತಿ ಮತ್ತು ವಾಣಿಯಿಂದ ತಿಳಿಯಲು ಸಾಧ್ಯವಿಲ್ಲ. ಪ್ರೇಮದಿಂದಲೇ ಅವನು ಕಾಣಿಸಿಕೊಳ್ಳುವನು. “ಪ್ರೇಮ ತೆಂ ಪ್ರಗಟ ಹೋಯಿ, ಮೈ ಜಾನಾ”. ಸೀತೆಯು ಆದಿನಾರಾಯಣ ರಾಮನ ಯೋಗಮಾಯೆ ಅಥವಾ ಮೂಲ ಪ್ರಕೃತಿ. ರಾಮ ಮತ್ತು ಸೀತೆ ಬೇರೆ ಬೇರೆಯಲ್ಲ.

“ಗಿರಾ ಅರಥ ಜಲ ಬೀಚಿ ಸಮ ಕಹಿಯತ ಭಿನ್ನ ನ ಭಿನ್ನ” ವಾಣಿ ಮತ್ತು ಅರ್ಥ, ನೀರು ಮತ್ತು ಅಲೆಗೆ ಸಮ. ಶಬ್ದದಲ್ಲಿ ಬೇರೆಯಾದರೂ ನಿಜವಾಗಿ ಬೇರೆಯಲ್ಲ. ಆದ್ದರಿಂದ ತುಲಸೀದಾಸರು—

“ಸೀಯ ರಾಮ ಮಯ ಸಬ ಜಗ ಜಾನೀ ।
ಕರವುಂ ಪ್ರನಾಮ ಜೋರಿ ಜುಗ ಪಾನೀ ।”

“ಜಗತ್ತು ಸೀತಾರಾಮಮಯವೆಂದು ತಿಳಿದು ಕರಗಳನ್ನು ಜೋಡಿಸಿ ವಂದಿಸುತ್ತೇನೆ”.

“ಸೋದಾಸೀ ರಘುವೀರ ಕೈ ಸಮುಝೇಂ ಮಿಥ್ಯಾ ಸೋಪಿ ।
ಮಾಯಾಧೀಶ ಗ್ಯಾನಗುನ ಧಾಮಾ ॥”

“ಮಾಯೆಯು ರಾಮನ ದಾಸಿ, ರಾಮ ಆದರ ಸ್ವಾಮಿ. ಆದ್ದರಿಂದಲೇ ರಾಮನು ‘ಮಾಯಾಧೀಶ’ ಅಥವಾ ‘ಮಾಯಾಪತಿ’. ಮಾಯೆಗೆ ರಾಮನನ್ನು ಕಂಡರೆ ಭಯ.

"ಪುನಿ ರಘುವೀರ ಭಗತಿ ಪಿಯಾರೀ। ಮಾಯಾ ಖಲು ನರ್ತಕೀ
ಬಿಚಾರೀ ॥"—

"ರಾಮನಿಗೆ ಭಕ್ತಿಪ್ರಿಯೆ. ಮಾಯೆಯಾದರೋ ನರ್ತಕಿಯಷ್ಟೆ".

ಭಕ್ತಿ ಭಾವಗಳು ಮುಖ್ಯವಾಗಿ ಐದು ವಿಧ—ವಾತ್ಸಲ್ಯ, ಸಖ್ಯ, ದಾಸ್ಯ, ಮಾಧುರ್ಯ ಮತ್ತು ಶಾಂತ. ಈ ಐದು ಬಗೆಗಳಲ್ಲಿ ತುಲಸೀದಾಸರು ಸ್ವೀಕರಿಸಿರುವ ಭಕ್ತಿ ದಾಸ್ಯಭಕ್ತಿ ಪರಮಾತ್ಮನನ್ನು ಸ್ವಾಮಿ, ಪಾಲಕ ಎಂದು ಭಾವಿಸಿ, ತನ್ನನ್ನು ಸೇವಕ, ದಾಸ, ದಾಸಾನುದಾಸನಂತೆ ಪೂಜಿಸುವುದಕ್ಕೆ ದಾಸ್ಯಭಕ್ತಿ ಎನ್ನುತ್ತಾರೆ. ತುಲಸೀದಾಸರು ಇದನ್ನು ಸೇವ್ಯ ಸೇವಕ ಭಾವ ವೆನ್ನುತ್ತಾರೆ. "ಸೇವಕ–ಸೇವ್ಯ ಭಾವ ಬಿನು ಭವ ನ ತರಿಯ" ಸೇವಕ–ಸೇವ್ಯ ಭಾವವಿಲ್ಲದೆ ಭವಸಾಗರವನ್ನು ದಾಟುವುದು ಅಸಾಧ್ಯ. ಇದು ತುಲಸೀದಾಸರ ಸಿದ್ಧಾಂತ. ಇದಕ್ಕೆ ಕಾರಣವಿಷ್ಟೆ :–

ರಾಮ ಸೋಂ ಬಡೋ ಹೈ ಕೌನ್, ಮೋಸೋಂ ಕೌನ್ ಛೋಟೋ!
ರಾಮ ಸೋಂ ಖರೋ ಹೈ ಕೌನ್, ಮೋಸೋಂ ಕೌನ್ ಖೋಟೋ?

"ರಾಮನಿಗಿಂತ ಹೆಚ್ಚು ದೊಡ್ಡವರಾರು? ನನಗಿಂತ ಅತಿ ಚಿಕ್ಕವರಾರು? ರಾಮನಿಗಿಂತ ಹೆಚ್ಚು ಋಜುವ್ಯಕ್ತಿ ಯಾರು? ನನಗಿಂತ ಹೆಚ್ಚು ಕಪಟಿ ಯಾರು?" 'ವಿನಯಪತ್ರಿಕೆ'ಯ ಮುಖ್ಯ ಕಾವ್ಯವಸ್ತುವೇ ಈ ದಾಸ್ಯ ಭಾವದ ನಿರೂಪಣೆ, ರಾಮನ ಹಿರಿತನ, ತುಲಸಿಯ ಕಿರಿತನದ ವ್ಯಾಖ್ಯೆ. ದೈನ್ಯಭಾವದ ಚರಮ ಉತ್ಕರ್ಷವನ್ನು ಇಲ್ಲಿ ಕಾಣಬಹುದು.

ತುಲಸೀದಾಸರು ಪ್ರತಿಪಾದಿಸಿರುವ ದಾಸ್ಯಭಾವದ ಪ್ರೀತಿ, ಅನನ್ಯ ಪ್ರೀತಿ. ಅವರ ಪ್ರೀತಿ, ಚಾತಕ ಪಕ್ಷಿಗೆ ಮೇಘದ ಮೇಲಿರುವ ಪ್ರೀತಿ.

ಏಕ ಭರೋಸೋ, ಏಕಬಲ, ಏಕ ಆಸ ಬಿಸ್ವಾಸ।
ಏಕ ರಾಮ ಘನಸ್ಯಾಮ ಹಿತ. ಜಾತಕ ತುಲಸೀದಾಸ॥

"ಈ ವಿಶ್ವಾಸವೇ ಒಂದು ಶಕ್ತಿ, ಒಂದು ಆಶೆಯೇ ವಿಶ್ವಾಸ, ಘನಶ್ಯಾಮನೆಂಬ ರಾಮ ಚಾತಕನೆಂಬ ತುಲಸೀದಾಸನಿಗೆ ಸರ್ವದಾ ಪ್ರಿಯ". ತುಲಸೀದಾಸರು ಎಲ್ಲಾ ದೇವತೆಗಳನ್ನು ವಂದಿಸುವಾಗ ರಾಮನನ್ನು ಮರೆಯುವುದಿಲ್ಲ. ರಾಮನ ಚರಣಾರವಿಂದದಲ್ಲಿ ನಿಶ್ಚಲ ಪ್ರೀತಿ ಉಂಟಾಗುವುದಕ್ಕೆ ಈ ದೇವಿ ದೇವತೆಗಳು ಸಹಾಯಕರಾಗಲೆಂದೇ ಅವರ ಆಶೆ. ಈ ಅಚಲಪ್ರೀತಿ ಹುಟ್ಟುವ ಬಗೆಯಾದರೂ ಯಾವುದು? ಈ ವಿಷಯದಲ್ಲಿ ತುಲಸೀದಾಸರ ತರ್ಕ ಅತ್ಯಂತ ಸುಂದರವಾಗಿದೆ—

ಬಿನು ವಿಶ್ವಾಸ ಭಗತಿ ನಹಿ ತೇಹಿ ಬಿನು ದ್ರವಹಿಂ ನ ರಾಮು।
ರಾಮಕೃಪಾ ಬಿನು ಸಪನೆಹುಂ ಜೀವನ ಲಹಯಿ ವಿಶ್ರಾಮು॥

"ವಿಶ್ವಾಸವಿಲ್ಲದೆ ಭಕ್ತಿಯಿಲ್ಲ, ಭಕ್ತಿಯಿಲ್ಲದೆ ರಾಮನ ಹೃದಯ ಕರಗುವಂತಿಲ್ಲ. ಆದರೆ ರಾಮನ ಕೃಪೆಯಿಲ್ಲದೆ ಸ್ವಪ್ನದಲ್ಲಿಯೂ ಜೀವಕ್ಕೆ ವಿಶ್ರಾಂತಿ ಸಿಗುವುದಿಲ್ಲ".

ತುಲಸೀದಾಸರು ಪ್ರತಿಪಾದಿಸಿರುವ ಭಕ್ತಿಪದ್ಧತಿ ವಿಶುದ್ಧ ಭಾರತೀಯ ಭಕ್ತಿಪದ್ಧತಿ. ಜ್ಞಾನ ಮತ್ತು ಯೋಗಮಾರ್ಗಗಳಿಗಿಂತ ಭಕ್ತಿಮಾರ್ಗ ಶ್ರೇಷ್ಠ. ಏತಕ್ಕೆಂದರೆ, ಜ್ಞಾನವು ಶುದ್ಧ ಬುದ್ಧಿಯ ಸ್ವಾಭಾವಿಕ ಕ್ರಿಯೆ ಅಥವಾ ಚಿಂತನ ಪದ್ಧತಿಯನ್ನು ಆಶ್ರಯಿಸುತ್ತದೆ. ಯೋಗಮಾರ್ಗವು ಅನೇಕ ಅಸ್ವಾಭಾವಿಕ ಕ್ರಿಯೆ ಮತ್ತು ಅಭ್ಯಾಸಗಳ ಮೂಲಕ ಚಿತ್ತವೃತ್ತಿಗಳನ್ನು ಗೆದ್ದು ಅಲೌಕಿಕ ಸಿದ್ಧಿಯನ್ನು ಹೊಂದುವಂತೆ ಬೋಧಿಸುವ ಮಾರ್ಗ. ಆದರೆ ಭಕ್ತಿಯು ಶುದ್ಧ ಹೃದಯಕ್ಕೆ ಸಂಬಂಧಪಟ್ಟ, ಸ್ವಾಭಾವಿಕ ಅನುಭೂತಿಗಳನ್ನು ಅಥವಾ ಭಾವಗಳನ್ನು ಅವಲಂಬಿಸಿರುವ

ಮಾರ್ಗ. ಭಕ್ತಿಮಾರ್ಗವನ್ನು ಅನುಸರಿಸುವ ಭಾರತೀಯ ಭಕ್ತನು ಪಾರಮಾರ್ಥಿಕ ಜ್ಞಾನ, ಅಲೌಕಿಕ ಸಿದ್ಧಿ ಅಥವಾ ರಹಸ್ಯತತ್ವದ ದರ್ಶನವನ್ನು ಪಡೆಯುವುದಕ್ಕಾಗಿ ಹಂಬಲಿಸುವುದಿಲ್ಲ. ಭಾರತೀಯ ಭಕ್ತನು ಪರಮಾತ್ಮನ ಪ್ರೇಮದಲ್ಲಿ ಮಗ್ನನಾಗಿರುವುದನ್ನು ಬಲ್ಲ. ಯಾರಿಗೂ ತಿಳಿಯದ ರಹಸ್ಯ ಸಾಧನೆಯ ಅಹಂಕಾರ ಅವನಲ್ಲಿಲ್ಲ. ಭಾರತೀಯ ಭಕ್ತನ ಪ್ರೇಮಮಾರ್ಗವು ಅತ್ಯಂತ ಸರಳ ಮತ್ತು ಸ್ವಾಭಾವಿಕ. ಅಂತೆಯೆ ಎಲ್ಲರೂ ನಡೆಯಬಲ್ಲರು. ಅನ್ನ ಮತ್ತು ನೀರು ಈ ಜಗತ್ತಿನಲ್ಲಿ ಎಷ್ಟು ಸುಲಭ ಸಾಧ್ಯವೋ ಅಷ್ಟೇ ಸುಲಭ ಸಾಧ್ಯ ಪರಮಾತ್ಮನ ಪ್ರೇಮ.

> ನಿಗಮ ಅಗಮ ಸಾಹಬ ಸುಗಮ ರಾಮ ಸಾಂಚಿಲೀ ಚಾಹ್ ।
> ಅಂಬು ಅಸನ ಅವಲೋಕಿಯತ ಸುಲಭ ಸಬೈ ಜಗ ಮಾಹ್ ॥

ಈ ಭಕ್ತಿಮಾರ್ಗದ ನಿತ್ಯ ಲಕ್ಷಣವೆಂದರೆ ಮನಸ್ಸು, ವಚನ; ಮತ್ತು ಕರ್ಮ ಈ ತ್ರಿಕರಣಪೂರ್ವಕವಾದ ಸರಳತೆ ಮತ್ತು ಸಹಜತೆ.

> ಸೂಧೇಮನ, ಸೂಧೇ ವಚನ, ಸೂಧೀ ಸಬ ಕರತೂತಿ ।
> ತುಲಸೀ ಸೂಧೀ ಸಕಲವಿಧಿ ರಘುವರ ಪ್ರೇಮ ಪ್ರತೀತಿ ॥

ತುಲಸೀದಾಸರ ಆರಾಧ್ಯ ರಾಮನಿಗೆ ಪ್ರಿಯವಾದದ್ದು ಒಂದೇ ವಿಷಯ, ಅಂದರೆ ಪ್ರೇಮ.

> ರಾಮಹಿಂ ಕೇವಲ ಪ್ರೇಮು ಪಿಯಾರಾ। ಜಾನಿಲೇವು ಜೋ ಜಾನನಿಹಾರಾ

" ರಾಮಚಂದ್ರನಿಗೆ ಪ್ರೇಮವೊಂದೇ ಪ್ರಿಯ. ಯಾರು ತಿಳಿಯಲು ಇಷ್ಟಪಡುತ್ತಾರೋ ಅವರು ತಿಳಿದುಕೊಳ್ಳಲಿ ".

ಭಾಗವತದಲ್ಲಿ ವರ್ಣಿತವಾದ ನವವಿಧ ಭಕ್ತಿಯನ್ನು ತುಲಸೀದಾಸರು ನಾನಾರೀತಿಯಲ್ಲಿ ವಿವರಿಸಿದ್ದಾರೆ, ಸಮರ್ಥಿಸಿದ್ದಾರೆ

ಮತ್ತು ಅದರ ಮಹತ್ವವನ್ನು ವಿಸ್ತರಿಸಿದ್ದಾರೆ. ಆದರೂ ಅವರು ನಾಮ ಮಹಿಮೆಯನ್ನು ಹೆಚ್ಚಾಗಿ ವಿಲಕ್ಷಣ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ರಾಮಭಕ್ತಿಯ ಪ್ರಾದುರ್ಭಾವಕ್ಕೆ ರಾಮನಾಮ ಸ್ಮರಣೆ ಹೆಚ್ಚು ಫಲಕಾರಿಯಾದ ಸಾಧನ. ಈ ವಿಷಯದಲ್ಲಿ ಅವರ ತರ್ಕ ಬಹಳ ಸೊಗಸಾಗಿದೆ, ಭವ್ಯವಾಗಿದೆ.

ರಾಮನಾಮ ರಘುವರಕೋ। ಹೇತು ಕೃಸಾನು ಭಾನು ಹಿಮಕರಕೋ।
ವಿಧಿ ಹರಿ ಹರ ಮಯ ಬೇದಪ್ರಾನಸೋ।
ಅಗುನ ಅನುಪಮ ಗುನನಿಧಾನ ಸೋ॥

"ರಾಮನಾಮ, ಅಗ್ನಿ, ಸೂರ್ಯ ಮತ್ತು ಚಂದ್ರರಿಗೆ ಬೀಜ ಸ್ವರೂಪ. ಬ್ರಹ್ಮ ವಿಷ್ಣು ಈಶ್ವರಮಯ, ವೇದಗಳ ಪ್ರಾಣ, ನಿರ್ಗುಣ ಮತ್ತು ಸಗುಣಗಳ ಆಧಾರ".

ಜಾನ ಆದಿ ಕಬಿ ನಾಮ ಪ್ರತಾಪೂ। ಭಾಯೆವು ಸುದ್ಧ ಕರಿ ಉಲಟಾ ಜಾಪೂ॥

"ಆದಿಕವಿ ವಾಲ್ಮೀಕಿ 'ಮರಾ' ಎಂದು ರಾಮನಾಮವನ್ನು ಹಿಂದುಮುಂದಾಗಿ ಜಪಿಸಿ ಪವಿತ್ರನಾದನು."

ಅಗುನ ಸಗುನ ಬಿಚ ನಾಮ ಸುಸಾಖೀ।
ಉಭಯ ಪ್ರಬೋಧಕ ಚತುರ ದುಭಾಖೀ॥

"ರಾಮನಾಮವು ನಿರ್ಗುಣ ಮತ್ತು ಸಗುಣಗಳ ಮಧ್ಯದಲ್ಲಿ ಉತ್ತಮ ಸಾಕ್ಷಿಯಂತಿದ್ದು ಈ ಎರಡರ ಮಾತುಗಳನ್ನು ತಿಳಿಸುವದು ಭಾಷಿ (Interpreter) ಯಾಗಿದೆ"

ಇದಲ್ಲದೆ ನಾಮದ ಮಹಿಮೆ ಅಪಾರ

ರಾಮ–ನಾಮ–ಮನಿ–ದೀಪ ಧರು ಜೀಹ–ದೇಹರೀ–ದ್ವಾರ।
ತುಲಸೀ ಭೀತರ ಬಾಹರಹು ಜೌ ಚಾಹಸಿ ಉಜಿಯಾರ॥

"ಒಳಗೆ ಮತ್ತು ಹೊರಗೆ ಪ್ರಕಾಶ ಬೇಕೆಂಬ ಇಷ್ಟವಿದ್ದರೆ ಮುಖವೆಂಬ ದ್ವಾರದಲ್ಲಿ ಜಿಹ್ವೆಯೆಂಬ ಹೊಸ್ತಿಲಮೇಲೆ ರಾಮನಾಮವೆಂಬ ಮಣಿದೀಪವನ್ನು ಇಡು".

ತುಲಸೀದಾಸರ ಅಭಿಪ್ರಾಯದಲ್ಲಿ ಬ್ರಹ್ಮನ ಸಗುಣ ಮತ್ತು ನಿರ್ಗುಣ ಸ್ವರೂಪಗಳಿಗಿಂತ ರಾಮನಾಮ ಶ್ರೇಷ್ಠ.

ಅಗುನ ಸಗುನ ದುಯಿ ಬ್ರಹ್ಮ ಸರೂಪಾ।
ಅಕಥ ಅಗಾಧ ಅನಾದಿ ಅನೂಪಾ॥
ಮೋರೇಮತ ಬಡ ನಾಮ ದುಹೂಂತೆ।
ಕಿಯ ಜೆಹಿ ಜಗ ನಿಜ ಬಸ ನಿಜ ಬೂತೆ॥

"ನಿರ್ಗುಣ ಮತ್ತು ಸಗುಣ ಇವು ಬ್ರಹ್ಮನ ಎರಡು ರೂಪಗಳು. ಇವೆರಡೂ ಅಕಥನೀಯ, ಅಗಾಧ, ಅನಾದಿ ಮತ್ತು ಅನುಪಮ. ಆದರೆ ನನ್ನ ಅಭಿಪ್ರಾಯದಲ್ಲಿ ಇವೆರಡಕ್ಕಿಂತಲೂ ರಾಮನಾಮ ದೊಡ್ಡದು. ಏತಕ್ಕೆಂದರೆ, ರಾಮನಾಮವು ತನ್ನ ಶಕ್ತಿಯಿಂದ ಇವೆರಡನ್ನೂ ತನ್ನ ವಶಪಡಿಸಿಕೊಂಡಿದೆ".

ರಾಮನಾಮದ ಮಹಿಮೆ ಎಷ್ಟೆಂದರೆ ರಾಮನೂ ಸಹ ರಾಮನಾಮದ ಗಾನಮಾಡಲು ಅಸಮರ್ಥ.

ಕಹವ್ಂ ಕಹಾಂ ಲಗಿ ನಾಮ ಬಡಾಯೀ।
ರಾಮ ನ ಸಕಹಿಂ ನಾಮ ಗುನಗಾಯೀ॥

"ನಾಮದ ಮಹಿಮೆಯನ್ನು ಎಷ್ಟು ವರ್ಣಿಸಲಿ! ರಾಮನೂ ಸಹ ರಾಮನಾಮದ ಗುಣಗಾನ ಮಾಡಲಾರ".

ತುಲಸೀದಾಸರು ತಮ್ಮ ಆರಾಧ್ಯ ರಾಮನ ರೂಪ. ಶೀಲ, ಶಕ್ತಿ. ಸೌಂದರ್ಯಗಳನ್ನು ತಮ್ಮ ಕಾವ್ಯಗಳಲ್ಲಿ, ಮುಖ್ಯವಾಗಿ ವಿನಯಪತ್ರಿಕೆಯಲ್ಲಿ ನಾನಾ ವಿಧವಾಗಿ ವರ್ಣಿಸಿ, ಹಾಡಿ, ತನ್ಮಯರಾಗಿ ನೈಮರೆತಿದ್ದಾರೆ. ರಾಮನು ಕೋಟಿ ಕೋಟಿ

ಮನ್ಮಥರಿಗಿಂತಲೂ ಹೆಚ್ಚು ಸುಂದರ, ಸಕಲ ಸೌಭಾಗ್ಯ ಸೌಂದರ್ಯ ಸುಷಮಾರೂಪ, ಸತ್ಯ ಶಮ ದಮ ದಯಾ ದಾನ ಶೀಲ, ಜ್ಞಾನ ಕಲ್ಯಾಣ ಧಾಮ, ಆನಂದ ಕಂದ ಸಚ್ಚಿದಾನಂದ ಕರುಣಾ ನಿಧಾನ, ಪರಮಪಾವನ, ಪ್ರಣತಪಾಲಕ, ಇಷ್ಟು ಮಹಿಮಾಮಯನಾದ ರಾಮನನ್ನು ಇಷ್ಟಪಡದವರಾರು?

ತುಲಸೀದಾಸರು ನಿರೂಪಿಸಿರುವ ಭಕ್ತಿ, ನಿಷ್ಕಾಮ ಭಕ್ತಿ. ರಾಮನ ಚರಣಾರವಿಂದದಲ್ಲಿ ಅನನ್ಯ ಪ್ರೇಮವೇ ಅವರ ಅಂತಿಮ ಗುರಿ.

ಚಹೌಂ ನ ಸುಗತಿ, ಸುಮತಿ ಸಂಪತಿ ಕಛು,
ರಿಧಿ ಸಿಧಿ ವಿಪುಲ ಬಡಾಯೀ ।
ಹೇತು ರಹಿತ ಅನುರಾಗ ರಾಮಪದ ಬಢೈ
ಅನುದಿನ ಅಧಿಕಾಯೀ ॥

* * * * *

ಯಾ ಜಗಮೆ ಜಹಂ ಲಗಿ ಯಾ ತನು ಕೀ
ಪ್ರೀತಿ ಪ್ರತೀತಿ ಸಗಾಯೀ ।
ತೆ ಸಬ ತುಲಸೀದಾಸ ಪ್ರಭು ಹೀ ಸೋಂ
ಹೋಹಿಂ ಸಿಮಿಟಿ ಇಕ ಠಾಯೀ ॥

"ಮೋಕ್ಷ, ಜ್ಞಾನ, ಸಂಪತ್ತು ಯಾವುದನ್ನೂ ನಾನು ಬಯಸುವುದಿಲ್ಲ. ಋದ್ಧಿ, ಸಿದ್ಧಿ ಅಥವಾ ಇನ್ನು ಯಾವುದೇ ಪ್ರಕಾರದ ದೊಡ್ಡ ವಸ್ತುವಿನ ಆಶೆ ನನಗಿಲ್ಲ. ರಾಮನ ಚರಣಾರವಿಂದದಲ್ಲಿ ನನ್ನ ಪ್ರೇಮ ವೃದ್ಧಿಸಲಿ. ಇದೇ ನನ್ನ ಅಭಿಲಾಷೆ".

ಈ ಜಗತ್ತಿನಲ್ಲಿ ಈ ಶರೀರಕ್ಕೊಳಗಾದ ಎಷ್ಟು ಪ್ರಕಾರದ ಪ್ರೇಮ, ಪ್ರೀತಿ ಸಂಬಂಧಗಳಿವೆಯೋ ಅವೆಲ್ಲವೂ ಒಟ್ಟು ಸೇರಿ ಒಂದೆಡೆ ರಾಮನ ಚರಣಗಳಲ್ಲಿ ಏಕಾಂತ ಭಕ್ತಿಯನ್ನು ಬೆಳೆಸಲಿ. ಶಿವ, ಪಾರ್ವತಿ, ಗಣಪತಿ, ಸೂರ್ಯ, ಗಂಗೆ, ಹನುಮಂತ,

ಲಕ್ಷ್ಮೀ, ಭರತ, ಲಕ್ಷ್ಮಣ, ಶತ್ರುಘ್ನ, ಸೀತೆ ಎಲ್ಲರನ್ನೂ ಕೈ ಜೋಡಿಸಿ ಅತಿದೀನಭಾವದಿಂದ ತುಲಸೀದಾಸರು ಬೇಡಿಕೊಳ್ಳು ವುದು ಒಂದೇ ವರ. ಅದು ರಾಮನ ಚರಣಾರವಿಂದದಲ್ಲಿ ಅನನ್ಯಭಕ್ತಿ, ಪ್ರೇಮ. ಅವರ ಭಕ್ತಿಸಾದನೆಯ ಅಂತಿಮ ಗುರಿ ಭಕ್ತಿ, ಪ್ರೇಮ.

ತುಲಸೀದಾಸರ ಸಮನ್ವಯ ದೃಷ್ಟಿ

ತುಲಸೀದಾಸರ ವ್ಯಕ್ತಿತ್ವದ ಹಿರಿಮೆಗೆ ಒಂದು ಮುಖ್ಯ ಕಾರಣ ಅವರಲ್ಲಿದ್ದ ಸಮನ್ವಯ ಭಾವನೆ. ಅವರು ಉಚ್ಚ ಬ್ರಾಹ್ಮಣ ಕುಲದಲ್ಲಿ ಹುಟ್ಟಿ, ಬಾಲ್ಯದಲ್ಲಿಯೇ ಅನಾಥರಾಗಿ, ಪಡಬಾರದ ಕಷ್ಟಗಳನ್ನು ಅನುಭವಿಸಿದ್ದರು. ಕಾಶಿಯಲ್ಲಿದ್ದ ದಿಗ್ಗಜಪಂಡಿತರ ಸಹವಾಸಮಾಡಿ, ನಾನಾ ಪುರಾಣ, ನಿಗಮಾಗಮ, ಶಾಸ್ತ್ರ ಸಾಹಿತ್ಯ ಗಳನ್ನು ಅಭ್ಯಾಸಮಾಡಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿದ್ದರು. ತಮ್ಮ ಕಾಲದ ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಗಳನ್ನು ಚೆನ್ನಾಗಿ ಅರಿತಿದ್ದರು. ವಿವಾಹವಾದರೂ ಗೃಹಸ್ಥ ಜೀವನದ ಸುಖ ಅವರಿಗೆ ದೊರೆಯಲಿಲ್ಲ. ಶಿಕ್ಷಿತರು ಅಶಿಕ್ಷಿತರು, ಬಡವರು ಬಲ್ಲಿದರು, ಪಂಡಿತರು ಪಾಮರರು, ಸಾಧುಗಳು ದುರಾಚಾರಿಗಳು, ಮೊದ ಲಾದ ಸಮಾಜದ ಎಲ್ಲ ವರ್ಗದ ಜನಜೀವನದ ಎಲ್ಲ ರೂಪಗಳನ್ನು ಅವರು ಗ್ರಹಿಸಿದ್ದರು. ಈ ವ್ಯಾಪಕ ಜ್ಞಾನದ ಪರಿಣಾಮವಾಗಿ ತುಲಸೀದಾಸರು ತಮ್ಮ ಕೃತಿಗಳಲ್ಲಿ ಅತ್ಯುಚ್ಚ ಸಮನ್ವಯ ತತ್ವ ವನ್ನು ನಿರೂಪಿಸಲು ಸಮರ್ಥರಾದರು. ರಾಮಚರಿತಮಾನಸ ಅಥವಾ ತುಲಸೀರಾಮಾಯಣದಲ್ಲಿ ತುಲಸೀದಾಸರ ಸಮನ್ವಯ ಸಾಧನೆಯ ದಿವ್ಯದರ್ಶನವಾಗುತ್ತದೆ. ಶೈವ–ವೈಷ್ಣವ, ಬ್ರಾಹ್ಮಣ –ಅಬ್ರಾಹ್ಮಣ, ಸಗುಣ–ನಿರ್ಗುಣ, ಧರ್ಮಶಾಸ್ತ್ರ–ವ್ಯವಹಾರ

ಜೀವನ, ಕರ್ಮ–ಜ್ಞಾನ–ಭಕ್ತಿ, ಗಾರ್ಹಸ್ಥ್ಯ–ವೈರಾಗ್ಯ, ಇತ್ಯಾದಿ ಪರಸ್ಪರ ವಿರೋಧಾತ್ಮಕ ತತ್ವಗಳಲ್ಲಿ ಸಮರಸವನ್ನು ಸ್ಥಾಪಿಸಿ, ಮಾನವ ಸಮಾಜದಲ್ಲಿ ಶೀಲ, ಸ್ನೇಹ, ಶಾಂತಿ ನೆಲಸುವಂತೆ ತುಲಸೀದಾಸರು ಹಾರೈಸಿದ್ದಾರೆ.

ನಮ್ಮ ದೇಶದಲ್ಲಿ ಶೈವ ವೈಷ್ಣವರ ಜಗಳ ಪುರಾತನ ಕಾಲದಿಂದಲೂ ನಡೆದುಬಂದಿದೆ. ನಿಷ್ಠಾವಂತ ವೈಷ್ಣವರೂ ಪರಮ ಭಕ್ತರೂ ಆದ ತುಲಸೀದಾಸರು ಈ ಎರಡು ಸಂಪ್ರದಾಯಗಳಲ್ಲಿರುವ ವೈಷಮ್ಯವನ್ನು ಹೋಗಲಾಡಿಸುವುದಕ್ಕಾಗಿ ಪಟ್ಟಿರುವ ಪ್ರಯತ್ನ ಸ್ತುತ್ಯವಾಗಿದೆ. ಅವರು ತಮ್ಮ ರಾಮಚರಿತ ಮಾನಸದಲ್ಲಿ ತಮ್ಮ ಆರಾಧ್ಯ ರಾಮನನ್ನು ಶಿವನ ಭಕ್ತನನ್ನಾಗಿಯೂ, ಶಿವನನ್ನು ರಾಮನ ಅನನ್ಯ ಉಪಾಸಕನನ್ನಾಗಿಯೂ ಚಿತ್ರಿಸಿರುವುದು ಒಂದು ಸುಂದರ ಕಲ್ಪನೆ. ಭಾಗವತ ಸಂಪ್ರದಾಯಕ್ಕೆ ಸೇರಿದ ತುಲಸೀದಾಸರಿಗೆ ಈ ಆದರ್ಶ ಪರಂಪರೆಯಿಂದ ಲಭಿಸಿರುವುದಾದರೂ ಅವರು ತಮ್ಮ ಕಾವ್ಯದಲ್ಲಿ ರಾಮ ಶಿವರ ಐಕ್ಯತೆಯನ್ನು ಸಾಧಿಸಿರುವ ರೀತಿ ಶ್ಲಾಘನೀಯವಾಗಿದೆ. ರಾಮ ಚರಿತಮಾನಸದಲ್ಲಿ ರಾಮಕಥೆ ಹೇಳುವವರು ಮೂರು ವ್ಯಕ್ತಿಗಳು —ಶಿವ, ಯಾಜ್ಞವಲ್ಕ್ಯ ಮತ್ತು ಕಾಕಭುಶುಂಡಿ. ಶ್ರೋತೃಗಳು ಕ್ರಮವಾಗಿ ಮೂರು ಮಂದಿ–ಪಾರ್ವತಿ, ಭರದ್ವಾಜ ಮತ್ತು ಗರುಡ. ಶ್ರೋತೃಗಳ ಮನಸ್ಸಿನಲ್ಲಿ ರಾಮನು ಮನುಷ್ಯನೇ ಅಥವಾ ದೇವರೇ ಎಂಬ ಸಂದೇಹ ಉಂಟಾಗುವುದರಿಂದ ಅದನ್ನು ಹೋಗಲಾಡಿಸುವುದಕ್ಕಾಗಿ ರಾಮಕಥೆಯನ್ನು ವಿಸ್ತರಿಸಲಾಗುವುದು. ಕಾವ್ಯದ ಆರಂಭದಿಂದ ಹಿಡಿದು ಕೊನೆಯವರೆಗೆ ರಾಮನಲ್ಲಿರುವ ಶಿವನ ಅನನ್ಯ ಭಕ್ತಿಯನ್ನು ತುಲಸೀದಾಸರು ಅನೇಕ ಕಡೆ ವರ್ಣಿಸಿರುತ್ತಾರೆ. ಮುಖ್ಯವಾಗಿ ಬಾಲಕಾಂಡದಲ್ಲಿ

ಸತೀ ಕಥೆಯ ಮೂಲಕ ಶಿವನ ಅನನ್ಯ ಭಕ್ತಿಯನ್ನು ಹೃದಯಂಗಮ ವಾಗಿ ನಿರೂಪಿಸಲಾಗಿದೆ. ಇದೇ ರೀತಿ ಶಿವನ ಮೇಲಿರುವ ರಾಮನ ಭಕ್ತಿಯೂ ವರ್ಣನಾತೀತವಾದುದು. ಲಂಕಾಕಾಂಡದಲ್ಲಿ ಸಮುದ್ರದಮೇಲೆ ಸೇತು ಬಂಧನದ ಸಂದರ್ಭದಲ್ಲಿ ರಾಮನು ಶಿವಲಿಂಗವನ್ನು ಸ್ಥಾಪಿಸಿ ಅದನ್ನು ವಿಧಿಪೂರ್ವಕವಾಗಿ ಪೂಜಿಸು ವನು, ಮತ್ತು ಹೀಗೆನ್ನುವನು :—

ಶಿವ ದ್ರೋಹೀ ಮಮ ಭಗತ ಕಹಾವಾ ।
ಸೋ ನರ ಸಪನೆಹು ಮೋಹಿ ನ ಭಾವಾ ॥
ಸಂಕರ ವಿಮುಖ ಭಗತಿ ಚಹ ಮೋರೀ ।
ಸೋ ನಾರಕೀ ಮೂಢಮತಿ ಥೋರೀ ॥
ಸಂಕರಪ್ರಿಯ ಮಮದ್ರೋಹೀ, ಶಿವ ದ್ರೋಹೀ ಮಮ ದಾಸ ।
ತೆ ನರ ಕರಹಿಂ ಕಲಪ ಭರಿ ಘೋರ ನರಕ ಮಹ ವಾಸ ॥

" ಶಿವದ್ರೋಹಿಯಾದವನು ನನ್ನ ಭಕ್ತನಾದರೂ ಸಹ ಸ್ವಪ್ನ ದಲ್ಲಿಯೂ ಕೂಡ ನನ್ನನ್ನು ಹೊಂದಲಾರ. ಶಿವನಿಂದ ವಿಮುಖ ನಾಗಿ ನನ್ನಲ್ಲಿ ಭಕ್ತಿಯನ್ನಿಡುವವನು ಮೂರ್ಖನು, ಮಂದಬುದ್ಧಿ ಯುಳ್ಳವನು, ಮತ್ತು ನರಕಕ್ಕೆ ಭಾಗಿ. ಯಾರು ನನ್ನ ದಾಸ ನಾಗಿದ್ದು ಶಿವನಿಗೆ ದ್ರೋಹವನ್ನು ಬಗೆಯುವನೋ ಮತ್ತು ಶಿವನ ದಾಸನಾಗಿದ್ದು ನನಗೆ ದ್ರೋಹವನ್ನು ಬಯಸುವನೋ ಅವನು ಕಲ್ಪ ಕಲ್ಪಾಂತರದವರೆಗೂ ನರಕವಾಸಮಾಡುವನು ".

ತುಲಸೀದಾಸರ ಕಾಲದಲ್ಲಿ ಭಕ್ತರಲ್ಲಿ ಎರಡು ಮುಖ್ಯ ಪಂಗಡ ಗಳಿದ್ದುವು. ಸಗುಣೋಪಾಸಕರು ಮತ್ತು ನಿರ್ಗುಣೋಪಾಸಕ ರೆಂದು. ಈ ಎರಡು ಪಂಗಡಗಳಲ್ಲಿ ಅನಾವಶ್ಯಕ ಘರ್ಷಣೆಗಳು ನಡೆಯುತ್ತಲೇ ಇದ್ದುವು. ತುಲಸೀದಾಸರು ಸಗುಣೋಪಾಸಕ ರಾಗಿದ್ದರೂ ಪರಮಾತ್ಮನ ಸಗುಣ ನಿರ್ಗುಣ ಸ್ವರೂಪಗಳನ್ನು

ಚೆನ್ನಾಗಿ ಬಲ್ಲವರಾಗಿದ್ದರು. ಅವರು ರಾಮನಾಮವನ್ನು ಸಗುಣ ನಿರ್ಗುಣ ತತ್ವಗಳನ್ನು ನಿರೂಪಿಸುವ ವ್ಯಾಖ್ಯಾನಕಾರನೆಂದು ತಿಳಿಸಿರುವುದಲ್ಲದೆ, ನಿರ್ಗುಣ ಮತ್ತು ಸಗುಣ ಇವೆರಡೂ ಬ್ರಹ್ಮನ ಸ್ವರೂಪವೆಂದು ಅವರ ಭಾವನೆ.

ಅಗುನ ಸಗುನ ದುಯಿ ಬ್ರಹ್ಮಸರೂಪಾ।

"ನಿರ್ಗುಣ ಮತ್ತು ಸಗುಣ ಇವೆರಡೂ ಬ್ರಹ್ಮನ ಸ್ವರೂಪಗಳು". ಅವರು ನಿರ್ಗುಣ ಮತ್ತು ಸಗುಣ ತತ್ವಗಳಲ್ಲಿ ಏನೂ ಭೇದವಿಲ್ಲ ವೆಂದು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ.

ಸಗುನಹಿಂ ಅಗುನಹಿಂ ಕಛು ನಹಿಂ ಭೇದಾ।
ಗಾವಹಿಂ ಮುನಿ ಪುರಾನ ಬುಧ ವೇದಾ॥
ಅಗುನ ಅರೂಪ ಅಲಖ ಅಜ ಜೋಯೀ।
ಭಗತ ಪ್ರೇಮ ಬಸ ಸಗುನ ಸೋ ಹೋಯೀ॥

"ಸಗುಣ ಮತ್ತು ನಿರ್ಗುಣಗಳಲ್ಲಿ ಏನೂ ಭೇದವಿಲ್ಲ" ಎಂಬುದೇ ಪುರಾಣ, ಮುನಿಗಳು, ವೇದಗಳು ಮತ್ತು ಪಂಡಿತರ ಅಭಿಪ್ರಾಯ. ಯಾವ ಪರಬ್ರಹ್ಮನು ನಿರ್ಗುಣ, ಅರೂಪ, ಅಲಖ, ಅಜನಾಗಿ ದ್ದಾನೆಯೋ ಅವನೇ ಭಕ್ತರಲ್ಲಿರುವ ಪ್ರೀತಿಯಿಂದ ಸಗುಣನಾಗು ತ್ತಾನೆ.

ಇದಲ್ಲದೆ ಜ್ಞಾನ–ಅಜ್ಞಾನ, ಅಂಧಕಾರ–ಪ್ರಕಾಶ, ನಿರ್ಗುಣ–ಸಗುಣ ಇವು ಒಂದಕ್ಕೊಂದು ನಿರಪೇಕ್ಷವಾಗಿರದೆ, ಪರಸ್ಪರ ಸಾಪೇಕ್ಷವಾಗಿರುವ ದ್ವಂದ್ವಗಳು.

ಕರ್ಮ, ಜ್ಞಾನ, ಭಕ್ತಿ ಇವು ಭಾರತೀಯ ಪರಮಾರ್ಥ ಸಾಧನೆಯ ಮೂರು ಮಾರ್ಗಗಳು. ಇವು ಮೂರೂ ಒಂದ ಕ್ಕೊಂದು ಪೂರಕಗಳು. ಈ ವಿಷಯವನ್ನು ತುಲಸೀದಾಸರು ಚೆನ್ನಾಗಿ ಅರಿತಿದ್ದರು. ಆದುದರಿಂದಲೇ ಅವರು ರಾಮಚರಿತ

ಮಾನಸದಲ್ಲಿ ಈ ಮೂರನ್ನು ಲೋಕಧರ್ಮಕ್ಕೆ ಅನ್ವಯಿಸಿ ಕೊಂಡು ಪಾತ್ರಗಳನ್ನು ನಿರೂಪಿಸಿದ್ದಾರೆ. ಇಷ್ಟೇ ಅಲ್ಲದೆ ಈ ಮಹಾಕಾವ್ಯದಲ್ಲಿ ವರ್ಣಧರ್ಮ, ಆಶ್ರಮಧರ್ಮ, ಕುಲಾಚಾರ ವೇದ ವಿಹಿತ ಕರ್ಮ, ಶಾಸ್ತ್ರ ಪ್ರತಿಪಾದಿತ ಜ್ಞಾನ ಇವೆಲ್ಲ ಭಕ್ತಿಗೆ ಪೋಷಕಗಳಾಗಿವೆ.

> ಭಗತಿಹಿಂ ಗ್ಯಾನಹಿಂ ನಹಿ ಕಛು ಭೇದಾ ।
> ಉಭಯ ಹರಹಿಂ ಭವ ಸಂಭವ ಖೇದಾ ॥

"ಜ್ಞಾನ ಮತ್ತು ಭಕ್ತಿ ಇವೆರಡರ ಮಧ್ಯೆ ಏನೂ ಭೇದವಿಲ್ಲ. ಜಗತ್ತಿನಲ್ಲಿ ಸಂಭವಿಸುವ ದುಃಖವನ್ನು. ಇವೆರಡೂ ಹೋಗ ಲಾಡಿಸುವುವು".

ರಾಮಚರಿತಮಾನಸವು ಪುರಾಣವೂ ಹೌದು, ಕಾವ್ಯವೂ ಹೌದು, ಮತ್ತು ಭಕ್ತಿಯ ಅಪಾರ ಭಂಡಾರವೂ ಹೌದು. ತುಲಸೀದಾಸರು ತಮ್ಮ ಕಾವ್ಯಗಳಲ್ಲಿ ಜನಭಾಷೆಯಾದ ಅವಧೀ ಮತ್ತು ವ್ರಜಭಾಷೆ, ಪಂಡಿತರ ಭಾಷೆಯಾದ ಸಂಸ್ಕೃತ ಇವುಗಳ ಮಧ್ಯೆ ಸಾಮಂಜಸ್ಯವನ್ನು ಸ್ಥಾಪಿಸಿ ಬಡವರು–ಬಲ್ಲಿದರು, ಪಂಡಿತರು–ಪಾಮರರು, ಗೃಹಸ್ಥರು–ವೈರಾಗಿಗಳು ಸರ್ವರಿಗೂ ಶ್ರೇಯ ಪ್ರೇಯಗಳ ಮರ್ಮವನ್ನು ತಿಳಿದುಕೊಳ್ಳುವಂತೆ ಅನು ಕೂಲವನ್ನು ಕಲ್ಪಿಸಿದ್ದಾರೆ. ಇದಲ್ಲದೆ ತಮ್ಮ ಕಾಲದಲ್ಲಿ ಬಳಕೆ ಯಲ್ಲಿದ್ದ ಎಲ್ಲಾ ಕಾವ್ಯಶೈಲಿಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿ ವಿವಿಧ ಪ್ರಕಾರದ ಜನಮಾನಸವನ್ನು ಅವರು ಒಲಿಸಿಕೊಂಡಿದ್ದಾರೆ. ಸಮಾಜದ ಕಲ್ಯಾಣದಿಂದಲೇ ವ್ಯಕ್ತಿಕಲ್ಯಾಣವಾಗಬಲ್ಲದು. ಇದೇ ತುಲಸೀದಾಸರು ಪ್ರತಿಪಾದಿಸಿರುವ ಸಮನ್ವಯ ತತ್ವದ ಆದರ್ಶ.

ಉಪಸಂಹಾರ

ಈ ಪುಟ್ಟ ಪುಸ್ತಕದಲ್ಲಿ ಗೋಸ್ವಾಮಿ ತುಲಸೀದಾಸರ ಭಕ್ತಿ ಪದ್ಧತಿಯ ಸ್ವರೂಪ, ಅವರು ರಚಿಸಿದ ಕೃತಿಗಳ ವೈಶಿಷ್ಟ್ಯ, ಅವರ ವ್ಯಕ್ತಿತ್ವದ ಹಿರಿಮೆ, ಇವೇ ಮುಂತಾದ ಕೆಲವು ವಿಷಯ ಗಳನ್ನು ಕುರಿತು ಸಂಕ್ಷೇಪ ಪರಿಚಯ ಕೊಡಲಾಗಿದೆ. ತುಲಸೀ ದಾಸರು ರಚಿಸಿರುವ ಎಲ್ಲ ಕಾವ್ಯಗಳಲ್ಲಿ ಎದ್ದುಕಾಣುವ ಪ್ರಾಮುಖ್ಯ ವಿಷಯವೆಂದರೆ, ಏಕಾಂತ ರಾಮಭಕ್ತಿಯ ನಿರೂಪಣೆ ಮತ್ತು ಲೋಕೋತ್ತರ ರಾಮನ ಚಾರಿತ್ರ್ಯದ ವರ್ಣನೆ. ಇದಕ್ಕಾಗಿ ಅವರು ತಮ್ಮ ತತ್ವಜ್ಞಾನ, ಶಾಸ್ತ್ರ ಪಾಂಡಿತ್ಯ, ಕವಿತಾಶಕ್ತಿ ಸರ್ವಸ್ವವನ್ನೂ ಸಮರ್ಪಿಸಿದ್ದಾರೆ. ಆದುದರಿಂದ ಅವರು ರಾಮ ಭಕ್ತಿಯ ಸಾಧನೆಯಲ್ಲಿ ಸಫಲರಾದರು. ರಾಮಚರಿತಮಾನಸದಲ್ಲಿ ತುಲಸೀದಾಸರ ವ್ಯಕ್ತಿತ್ವವು ಪೂರ್ಣ ಕಳೆಯಿಂದ ಬೆಳಗಿದೆ. ಈ ಸಂದರ್ಭದಲ್ಲಿ ಆಚಾರ್ಯ ರಾಮಚಂದ್ರ ಶುಕ್ಲರವರು ಹೇಳಿರುವ ಮುತ್ತಿನಂತಹ ಮಾತುಗಳನ್ನು ಇಲ್ಲಿ ಉದಾಹರಿಸಿದರೆ ತಪ್ಪಾಗ ಲಾರದು. "ತುಲಸೀದಾಸರ ರಾಮಚರಿತಮಾನಸವಲ್ಲಿ ರಾಮನ ಚರಿತ್ರೆಯಿಂದ ಶೀಲ, ಶಕ್ತಿ, ಸೌಂದರ್ಯದ ಪವಿತ್ರ ಧಾರೆಯು ಹರಿದು ಜೀವನದ ಪ್ರತ್ಯೇಕ ಪರಿಸ್ಥಿತಿಯಲ್ಲಿ ಪರಮಾತ್ಮನ ರೂಪ ಪ್ರತಿಬಿಂಬಿಸಿದೆ. ರಾಮ ಚರಿತ್ರೆಯ ವ್ಯಾಪಕತ್ವವು ತುಲಸೀದಾಸರ ವಾಣಿಯನ್ನು ಪಂಡಿತರ ಪಾಮರರ, ಬಡವರ ಬಲ್ಲಿದರ, ಉಚ್ಚ ನೀಚ ವರ್ಗದ ಸಮಸ್ತ ಜನರ ಹೃದಯ ಮತ್ತು ಕಂಠಗಳಲ್ಲಿ ಎಂದೆಂದಿಗೂ ನೆಲೆಸುವಂತೆ ಮಾಡಿದೆ. ಯಾವ ಹಿಂದುವೇ ಆಗಿರಲಿ ರಾಮನನ್ನು ಜೀವನದಲ್ಲಿ ಸದಾಕಾಲ ತನ್ನ ಒಡನಾಡಿ ಯಾಗಿ ಭಾವಿಸುತ್ತಾನೆ. ಸುಖದಲ್ಲಿಯಾಗಲೀ ದುಃಖದಲ್ಲಿ ಯಾಗಲೀ, ಮನೆಯಲ್ಲಾಗಲೀ, ವನದಲ್ಲಾಗಲೀ, ರಣದಲ್ಲಾಗಲೀ

ಆನಂದೋತ್ಸವದಲ್ಲಾಗಲೀ, ಎಲ್ಲಿ ನೋಡಿದರಲ್ಲಿ ರಾಮನೇ ರಾಮನು. ಸಮಸ್ತ ಉತ್ತರಾ ಪಥವನ್ನು ತುಲಸೀದಾಸರು ರಾಮಮಯವಾಗಿ ಮಾಡಿದರು. ಹೃದಯವನ್ನು ಸ್ಪರ್ಶಿಸುವ ಶಕ್ತಿ ತುಲಸೀದಾಸರ ವಾಣಿಯಲ್ಲಿದ್ದಂತೆ ಬೇರೆ ಕವಿಗಳಲ್ಲಿ ದುರ್ಲಭ. ಅವರ ಅಮೃತವಾಣಿಯ ಪ್ರಭಾವದಿಂದ ಈಗಲೂ ಸಹ ಹಿಂದೂ ಭಕ್ತರು ಸಂದರ್ಭಾನುಸಾರವಾಗಿ ಸೌಂದರ್ಯವನ್ನು ಕಂಡು ಮುಗ್ಧರಾಗುತ್ತಾರೆ, ಮಹತ್ತನ್ನು ಕಂಡು ಶ್ರದ್ಧೆಯಿಂದ ತಲೆ ಬಾಗುತ್ತಾರೆ, ಶೀಲವನ್ನು ಕಂಡು ಪ್ರಫುಲ್ಲರಾಗುತ್ತಾರೆ, ಸನ್ಮಾರ್ಗ ದಲ್ಲಿ ಪ್ರವರ್ತಿಸಲು ಪ್ರೇರಿತರಾಗುತ್ತಾರೆ, ದಯೆಯಿಂದ ಆರ್ದ್ರ ರಾಗುತ್ತಾರೆ, ವಿಪತ್ಕಾಲದಲ್ಲಿ ಧೈರ್ಯವನ್ನು ತಾಳುತ್ತಾರೆ, ಕೆಡುಕನ್ನು ಕಂಡು ಮರುಗುತ್ತಾರೆ, ಕಠಿಣ ಕಾರ್ಯದಲ್ಲಿ ಉತ್ಸಾಹ ಪಡೆಯುತ್ತಾರೆ, ಸದ್ವೃತ್ತಿಯನ್ನವಲಂಬಿಸುತ್ತಾರೆ, ಮಾನವ ಜೀವನದ ಮಹತ್ವವನ್ನು ಅರಿಯುತ್ತಾರೆ ".

WO 21860—MUPM—10,000—31-3-81

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ಟಿ. ಎನ್. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ಟಿ. ಎಸ್. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣ
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣ
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಉ. ಕಾ. ಸುಬ್ಬರಾಯಾಚಾರ್
೫೬. ಶ್ರೀ ಸಮರ್ಥರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ